# ಯಕ್ಷಗಾನ ಪ್ರಸಂಗ ಪಂಚಮಿ

ಶ್ರೀ ಕಂದಾವರ ರಘುರಾಮ ಶೆಟ್ಟಿ



ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

# ಯಕ್ಷಗಾನ ಪ್ರಸಂಗ ಪಂಚಮಿ

(ಶ್ರೀ ಕಂದಾವರ ರಘುರಾಮ ಶೆಟ್ಟಿ)

**YAKSHAGANA PRASANGA PANCHAMI** Edited by **Sri Kandhavar Raghurama Shetty** Published by **Registrar**, Karnataka Yakshagana Academy, Kannada Bhavana, J.C. Road, Bengaluru - 560 002. Ph. 080 22113146

ಈ ಆವೃತ್ತಿಯ ಹಕ್ಕು : ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಮುದ್ರಿತ ವರ್ಷ : ೨೦೧೯
ಪ್ರತಿಗಳು : ೫೦೦
ಪುಟಗಳು : 128
ಬೆಲೆ : ರೂ. ೭೫/-

**ಪ್ರದಾನ ಸಂಪಾದಕರು:**
ಪ್ರೊ. ಎಂ.ಎ. ಹೆಗಡೆ
ಅಧ್ಯಕ್ಷರು, **ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.**

**ಸಂಪಾದಕರು:**
ಶ್ರೀ ಕಂದಾವರ ರಘುರಾಮ ಶೆಟ್ಟಿ
**ಬೆಂಗಳೂರು.**

**ಪ್ರಕಾಶಕರು:**
ಎಸ್.ಹೆಚ್.ಶಿವರುದ್ರಪ್ಪ
ರಿಜಿಸ್ಟ್ರಾರ್, **ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.**

ಮುದ್ರಕರು :
**ಎಂ.ಎಸ್. ಗ್ರಾಫಿಕ್ಸ್**
ನಂ. 4/1, 2ನೇ ಮುಖ್ಯರಸ್ತೆ, ಕಾವೇರಿಪುರ, ಕಾಮಾಕ್ಷಿಪಾಳ್ಯ
ಬೆಂಗಳೂರು-560 079 ಮೊ. 9886355728

# ಅಧ್ಯಕ್ಷರ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗ ಕೃತಿಗಳು. ಕನ್ನಡ ಸಾಹಿತ್ಯನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋಕುಸುಮಗಳ ಗ್ರಥನದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಗಳಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ. ಅಂತೆಯೇ ಉತ್ತಮವಾದ ಪ್ರಸಂಗವು ಸಾವಿರಾರು ವರ್ಷಗಳುರುಳಿದರೂ ನಿತ್ಯನೂತನವೆನಿಸುತ್ತದೆ. ಅಂಥ ಕೃತಗಳ ಶೋಧನೆ, ಪ್ರಕಟಣೆಗಳು ಯಕ್ಷಗಾನ ಅಕಾಡೆಮಿಯ ಅಧ್ಯ ಕರ್ತವ್ಯವೆಂದು ಭಾವಿಸಲಾಗಿದೆ.

ಪ್ರಸ್ತುತ ಸಂಕಲನವು ಯಕ್ಷಗಾನದ ಸಮಕಾಲೀನ ಕವಿಗಳಲ್ಲಿ ಪ್ರಸಿದ್ಧರಾದ ಕಂದಾವರ ರಘುರಾಮ ಶೆಟ್ಟಿಯವರ ಐದು ಪ್ರಸಂಗಗಳನ್ನೊಳಗೊಂಡಿದೆ. ಅವರ ಹೆಚ್ಚಿನ ಕೃತಿಗಳು ಅಪ್ರಕಟಿತವಾಗಿಯೇ ಉಳಿದಿರುವುದು ಯಕ್ಷಗಾನ ಪ್ರಸಂಗಗಳ ಪ್ರಕಟಣ ಹಾಗೂ ಮಾರಾಟ ವ್ಯವಸ್ಥೆಯ ಅವ್ಯವಸ್ಥೆಯ ಕಾರಣದಿಂದಲೆಂಬುದು ಸ್ಪಷ್ಟ. ಇಂಥ ಸಂದರ್ಭದಲ್ಲಿ ಅಕಾಡಮಿಯು ಕಿಂಚಿತ್ತಾದರೂ ನೆರವಾಗಬೇಕೆಂಬುದಕ್ಕಾಗಿ ಪ್ರಕಟಣಾ ಕಾರ್ಯಕ್ಕೆ ಕೈಹಾಕಿದೆ. ಆ ದೃಷ್ಟಿಯಿಂದ ಅವರನ್ನು ಸಂಪರ್ಕಿಸಿದಾಗ ಸಂತೋಷದಿಂದ ಒಪ್ಪಿಗೆಯನ್ನು ಸೂಚಿಸಿ ಸಹಕರಿಸಿದ್ದಾರೆ. ಅವರನ್ನು ಅಭಿನಂದಿಸುತ್ತೇವೆ. ಮುಂದಿನ ದಿನಗಳಲ್ಲಿ ಅವರ ಇನ್ನಿತರ ಕೃತಿಗಳೂ ಆಸಕ್ತರ ಕೈಸೇರುವಂತಾಗಲೆಂದು ಹಾರೈಸುತ್ತೇವೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ಎಂ ಎಸ್ ಗ್ರಾಫಿಕ್ಸ್, ಅಕ್ಷರ ಜೋಡಣೆಯನ್ನು ಮಾಡಿದ ಅಶ್ವಿನಿ, ವಿವಿಧ ಹಂತಗಳಲ್ಲಿ ಸಹಕರಿಸಿದ್ಧ ಸಿಬ್ಬಂದಿವರ್ಗ, ಅಕಾಡೆಮಿಯ ಜೀವಜೀವಾಳವಾದ ರಿಜಿಸ್ಟ್ರಾರ್ ಎಸ್ ಹೆಚ್ ಶಿವರುದ್ದಪ್ಪ ಇವರೆಲ್ಲರಿಗೆ ಸರ್ವಸದಸ್ಯರ ಪರವಾಗಿ ಧನ್ಯವಾದಗಳು.

ಎಂ.ಎ. ಹೆಗಡೆ
ಅಧ್ಯಕ್ಷರು

# ವಿಜ್ಞಾಪನೆಗಳು

ಪ್ರಸಂಗ ಪಂಚಮಿ ಎಂಬ ಈ ಹೊತ್ತಿಗೆಯು ಹೆಸರೇ ಸೂಚಿಸುವಂತೆ ಐದು ಪ್ರಸಂಗಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮೂರು ನಮ್ಮ ದೇಶದ ಪ್ರಸಿದ್ಧ ಕ್ಷೇತ್ರಗಳ ಮಹಾತ್ಮೆಯನ್ನು ಸಾರುವಂತಿವೆ. ಉಳಿದಂತೆ ನಳಚರಿತ್ರೆಯನ್ನು ವ್ಯಾಸ ಭಾರತವನ್ನು, ಗಂಗಾಶಾಪವು ಜೈಮಿನಿ ಭಾರತವನ್ನು ಆಧರಿಸಿ ಬರೆಯಲಾಗಿದೆ. ಚಾಲ್ತಿಯಲ್ಲಿರುವ ನಳಚರಿತ್ರೆಗೂ ಈ ನಳಚರಿತ್ರೆಗೂ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತವೆ. ಮುಖ್ಯವಾಗಿ ಚಾಲ್ತಿಯ ಪ್ರಸಂಗದಲ್ಲಿ ನಳನಿಗೆ ಶನಿಯ ಕಾಟವಾದರೆ ಇದರಲ್ಲಿ ಆತನಿಗೆ ಕಲಿ, ದ್ವಾಪರರು ಕಷ್ಟ ನೀಡುತ್ತಾರೆ. ಈ ಐದು ಪ್ರಸಂಗಗಳು ಬೇರೆ ಬೇರೆ ಸಂದರ್ಭದಲ್ಲಿ ಬೇಡಿಕೆಗನುಸರಿಸಿ ಬರೆದುದಾಗಿದೆ. ವಿವಿಧ ಮೇಳಗಳು ಇವುಗಳನ್ನು ಪ್ರದರ್ಶಿಸಿ ಯಶಸ್ವಿಗೊಳಿಸಿದೆ. ಯಶಸ್ವಿಗೊಳಿಸಿದ ಸರ್ವ ಕಲಾವಿದರನ್ನು ಈ ಸಂದರ್ಭದಲ್ಲಿ ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ನಾನು ಇದುವರೆಗೆ ಮೂವತ್ತ ನಾಲ್ಕು ಪ್ರಸಂಗಗಳನ್ನು ರಚಿಸಿರುವೆನಾದರೂ ಅವುಗಳಲ್ಲಿ ಹತ್ತು ಪ್ರಸಂಗಗಳನ್ನು ದಶಮಿ ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ. ಯಕ್ಷಗಾನ ಪ್ರಸಂಗಗಳಿಗೆ ಸೀಮಿತ ಮಾರುಕಟ್ಟೆ ಇದ್ದು ಪ್ರಕಟಣೆಯ ವೆಚ್ಚವನ್ನು ಭರಿಸುವ ಭರವಸೆ ಇಲ್ಲವಾದುದರಿಂದ ಉಳಿದವುಗಳನ್ನು ಪ್ರಕಟಿಸುವ ಧೈರ್ಯ ಮಾಡಿಲ್ಲ. ಇಂತಹ ಸಂದರ್ಭದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ಇಂತಹ ಯಶಸ್ವಿ ಪ್ರಸಂಗಗಳು ರಂಗದಲ್ಲೇ ಕರಗಿಹೋಗದೇ ಶಾಶ್ವತವಾಗಿ ಉಳಿಯುವಂತಾಗಬೇಕೆಂಬ ಸಂಕಲ್ಪದಿಂದ ಪ್ರಕಟಣೆಗೆ ಮುಂದಾಗಿದ್ದಾರೆ. ಅವರ ಉಪಕಾರವನ್ನು ಸದಾ ಸ್ಮರಿಸಿಕೊಳ್ಳುತ್ತಾ ಅಕಾಡೆಮಿಯ ಅಧ್ಯಕ್ಷರಿಗೂ ಹಾಗೂ ರಿಜಿಸ್ಟ್ರಾರ್‌ರವರಿಗೂ ಅಕಾಡೆಮಿಯ ಸರ್ವಸದಸ್ಯರಿಗೂ ಹಾರ್ದಿಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಸಾಮಾನ್ಯ ಕೃತಿ ರಚನೆಯಲ್ಲಿ ದೋಷಗಳು ಕಂಡುಬರುವುದು ಸ್ವಾಭಾವಿಕ. ಅಂತಹ ದೋಷಗಳನ್ನು ಕಂಡ ಮಹನೀಯರು ಸಂಕೋಚಗೊಳ್ಳದೆ ತೋರಿಸಿಕೊಟ್ಟಲ್ಲಿ ಅವರಿಗೆ ಉಪಕೃತನಿದ್ದೇನೆ. ಸಹೃದಯರ ಸದ್ವಿಮರ್ಶೆಗೆ ಸದಾ ಸ್ವಾಗತವಿದೆ. ನಿಮ್ಮ ಸಲಹೆ ಸಹಕಾರಗಳನ್ನು ಸದಾ ಹಾರೈಸುತ್ತೇನೆ.

**ಕಂದಾವರ ರಘುರಾಮ ಶೆಟ್ಟಿ**
ಪ್ರಸಂಗಕರ್ತೃ

# ಪರಿವಿಡಿ


| | | |
|---|---|---|
| ೧. | ನಳದಮಯಂತಿ | ೯ |
| ೨. | ಗಂಗಾಶಾಪ | ೩೩ |
| ೩. | ಜಗನ್ನಾಥ ಲೀಲೆ | ೪೫ |
| ೪. | ಆದಿಚುಂಚನಗಿರಿ ಮಹಾತ್ಮೆ | ೬೫ |
| ೫. | ಶ್ರೀ ಶಿರಡಿ ಸಾಯಿ ಬಾಬಾ ಮಹಾತ್ಮೆ | ೮೫ |

# ನಳ ದಮಯಂತಿ
## ನಾಂದಿ (ಭಾಮಿನಿ)

ಶ್ರೀ ವಿನಾಯಕಗೆರಗಿ ಶಾರದ । ದೇವಿಯನುಧ್ಯಾನಿಸುತ ಭಕ್ತಿಯ ।
ಭಾವದಲಿ ಜಗಜನನಿ ಅಂಬಿಕೆಯನ್ನು ಬಲಬಂದು ॥
ಭಾವಜಾರಿ ವಿರಂಚಿ ಶ್ರೀಹರಿ । ದೇವರನು ಸಂಸ್ತುತಿಸಿ ಕಲಿಯ ಪ್ರ ।
ಭಾವದರ್ಶನ ನಳಚರಿತೆಯನು ಪೇಳ್ವೆನಲವಿನಲಿ ॥ ೧ ॥

**ಕಾಂಬೋಧಿ ಝಂಪೆ**

೧. ಲಾಲಿಪುದು ಮನವಿಟ್ಟು । ಕಾಲನಣುಗನೆ ನಿಮ್ಮ ।
ಮೂಲದರಸುಗಳ ಪಂಗ್ತಿಯಲಿ ॥
ಶೀಲ, ವಪು ಸಂಪನ್ನ । ಬಾಲರ್ಕನಿಭ ತೇಜ ।
ಪಾಲಿಸುವ ನಳನು ನಿಷಧವನು ॥ ೧ ॥

೨. ಕಳವು ಪುಸಿ ಹಾದರಕೆ । ಕೊಲೆ ಮೋಸ ಮತ್ಸರಕೆ ।
ನೆಲೆಸಿಗದು ಅವನಿತಳದಲ್ಲಿ ॥
ಬಲವರಿತ ಅರಿನಿಚಯ । ತಲೆಹಾಕದೀಕಡೆಗೆ ।
ನೆಲಸಿಹುದು ಸಿರಿ ಶಾಂತಿ ಪುರದಿ ॥ ೨ ॥

೩. ಪುರವ ಸೇರಿದ ಗುಪ್ತ । ಚರವ್ರಾತದಿಂದ ತಾ ।
ನರಿತು ದಮಯಂತಿ ಚೆಲ್ವಿಕೆಯ ॥
ಅರಸನಾಕೆಗೆ ಮನದಿ । ಮರುಳಾಗಿ ದಿವರಾತ್ರಿ ।
ಕೊರಗುತ್ತಲಿಹನು ವಿರಹದಲಿ ॥ ೩ ॥

೪. ಮನದ ಬೇಸರ ಕಳೆಯೆ । ಜನಪನ್ಯೆದಿದನು ಉಪ ।
ವನದೆಡೆಗೆ ಏಕಾಂಗಿಯಾಗಿ ॥
ವನರುಹದ ಸೊಂಪಿಂಗೆ । ಮನ ಸೋತು ಮುಂಬರಿಯೆ ।
ಎನಲೇನು ನಡೆದ ಕೌತುಕವ ॥ ೪ ॥

## ಮಧ್ಯಮಾವತಿ ತ್ರಿವುಡೆ

೫. ಮಂದಗತಿಯಲಿ ಬಂದುದಲ್ಲಿಗೆ । ಬಂಧುರದ ಅರಸಂಚೆಯು ॥
ಹೊಂದಿ ಕಡವರ ವರ್ಣದಿಂದಲಿ । ಹಿಂದುಮುಂದನು ನೋಡುತ ॥
ಭಯದ ಭರದಿ ॥ ೧ ॥

೬ ರೂಢಿಪಾಲನು ನೋಡಿಯಚ್ಚರಿ । ಗೂಡಿ ಮೆಲ್ಲನೆ ನಡೆಯುತ ॥
ನೀಡಿ ಕರವನು ಹಿಡಿಯೆ ಭಯದಲಿ । ಆಡಿತದು ನರಭಾಷೆಯ ॥
ತಡವರಿಸುತ ॥ ೨ ॥

೭ ಕೊಲ್ಲದಿರು ದಮ್ಮಯ್ಯ ಧರ್ಮವ । ಬಲ್ಲೆ ನಿನ್ನಲಿ ಸರ್ವದಾ ॥
ಒಳ್ಳಿತೆನಿಪ ವಿಚಾರವೊಂದನು । ಸೊಲ್ಲಿಸುವೆನೆನೆ ಬಿಟ್ಟನು ॥
ಧರಣಿಪಾಲ ॥ ೩ ॥

## ಬಿಲಹರಿ ಅಷ್ಟ

೮. ಧರಣೀಶ ನಿನ್ನ ವಾಂಛಿತವ । ಅರಿ । ತಿರುವೆ ವಿದರ್ಭಪಟ್ಟಣವ ॥
ದೊರೆ ಭೀಮಕನಸುತೆ ದಮಯಂತಿಯನು ಕಂಡು ।
ಅರುಹಿ ನಿನ್ನಯ ರೂಪ ಗುಣಗಳ । ವರಿಸುವಂದದಿ ಮಾಳ್ಪೆ ದಿಟವಿದು
॥ ೧ ॥

೯. ಮುದವಾಂತೆ ನಿನ್ನಯ ನುಡಿಗೆ । ಬೇಗ । ಪದುಳದಿ ಪೋಪುದಾಕಡೆಗೆ॥
ಪದುಮನೇತ್ರೆಯು ಎನ್ನನಲ್ಲದನ್ಯರ ತಾನು ।
ಮದುವೆಯಾಗದ ತೆರದೊಳುಸು । ರೆಂದರಸ ಹಂಸೆಯ
ಬೀಳುಗೊಂಡನು ॥ ೨ ॥

## ಜಂಜೂಟಿ ರೂಪಕ

೧೦. ವರ ವಿದರ್ಭರಾಜಕುವರಿ ತನ್ನ ಸಖಿಯರ ।
ನೆರವಿಯಿಂದ ವನದಕಡೆಗೆ ಪೊರಡೆ ಸಡಗರ ॥
ಸರಸಿಯಲ್ಲಿ ಮಿಂದು ಮಡಿಯನುಟ್ಟು ನಿಂದಿರೆ ।
ಚರಿಪ ಹಂಸ ನಿಕರಕಂಡು ಪಿಡಿಯ ಪೊರಟಿರೆ ॥ ೧ ॥

೧೧. ಒಂದು ಹಂಸೆ ರಾಯನಣುಗೆ ಮನವ ಸೆಳೆಯುತ ।
ಮುಂದೆ ಮುಂದೆ ಚಲಿಸೆ ತ್ವರಿತದಿಂದ ಹಿಡಿಯುತ ॥

ಹೊಂದಿ ತೋಷವನ್ನು ತನುವ ನೇವರಿಸಿದಳು ।
ಚಂದದಿಂದ ಹಂಸೆ ನರರ ತೆರದಿ ಉಲಿಯಲು ॥ ೨ ॥

**ಕೇದಾರಗೌಳ ಝಂಪೆ**

೧೨. ದಮಯಂತಿ ಲಾಲಿಸಿದನು । ನಿಷಧೇಶ । ಅಮಿತ ವಿಕ್ರಮಿಯು ನಳನು ॥
ಸುಮಶರನ ಧಿಕ್ಕರಿಸುವ । ಚೆಲ್ವಿನಿಂ । ರಮಿಸುವನು ಮೂರುಜಗವ ॥೧॥

೧೩. ರತಿದೇವಿಗೆಣೆ ನೀನಿರೆ । ಅನುರೂಪ । ಪತಿಯವನು ನಿನಗೆ ಧೀರೆ ॥
ಪ್ರತಿಕೂಲ ಏನೆಬರಲಿ । ಎದುರಿಸುತ । ಪತಿಕರಿಸು ಸುಖವಾಗಲಿ ॥ ೨ ॥

೧೪. ನಳನ ಚೆಲುವವಿಕೆಯ ಚಿತ್ರ । ಚಿತ್ತದಲಿ । ನೆಲೆಯೂರಿತಿದು ವಿಚಿತ್ರ ॥
ತಿಳುಹು ಎನ್ನೊಲವಾತಗೆ । ಎನುತ ಬಿಡೆ । ನಲವಿನಿಂ ಹಂಸ ಪೋಗೆ
॥ ೩॥

**ಕೇದಾರಗೌಳ ಅಷ್ಟ**

೧೫. ಧಾರಿಣಿಪತಿ ಭೀಮಕನು ಚಿಂತಿಸುವನು ಕು ।
ಮಾರಿಯ ಬಗೆಗೆ ತಾನು ॥
ಭೋರನೆ ಸಚಿವನ ಕರೆದೆಂದ ಮನದ ವಿ ।
ಚಾರವ ದುಗುಡದಿಂದ ॥ ೧ ॥

೧೬. ಹಸಿವು ತೃಷೆಯ ತೊರೆಯುತ್ತ ಚಿಂತಿಸುವಳು ।
ಬಿಸಿಯುಸಿರನು ಬಿಡುತ ॥
ಕೃಶಗೊಂಡಿಹಳು ನೋಡೆ ಕರುಳು ಹಿಂಡುತಲಿದೆ ।
ಉಸಿರಯ್ಯ ದಾರಿಯೇನು ॥ ೨ ॥

೧೭. ಷೋಡಶಿಯಾಗಿಹ ದಮಯಂತಿಗೀ ಕಾಲ ।
ಮಾಡಬೇಕಿದೆ ಲಗ್ನವ ॥
ರೂಢಿಪಾಲರಲಿ ಯೋಗ್ಯರ ಕಂಡವರ ಜತೆ ।
ಗೂಡಿಸೆ ಸುಖವಹುದು ॥ ೩ ॥

೧೮. ಬರೆಸಿ ಪತ್ರಿಕೆಯನ್ನು ಅರಸುಕುಮಾರರ ।
ಕರೆಸು ಸ್ವಯಂವರಕೆ ॥

ಭರದಿ ಸಿದ್ಧತೆಗೈದು ಪುರವ ಸಿಂಗರಿಸೆಂದು ।
ಅರಸನಾಣತಿಯಿತ್ತನು ॥ ೪ ॥

### ಸೌರಾಷ್ಟ್ರ ತ್ರಿವುಡೆ

೧೯. ಸುಮನಸರ ನೆರವಿಯನು ಕೂಡುತ । ವಿಮಲವೆನಿಪ ಸುಧರ್ಮ ಸಭೆಯೊಳು ।
ಅಮಿತ ವಿಭವದೊಳೊಂದು ದಿನ ಕರಿ । ಗಮನ ಮೆರೆದಾ ॥ ೧ ॥

೨೦. ಏರುವೊಡೆ ಐರಾವತವು ಮನ । ಸೂರೆಗೊಂಬರು ಸುರಗಣಿಕೆಯರು ।
ಹೀರೆ ಸುಧೆ ನಮಗಿಹುದೆನುತ ಜಂ । ಭಾರಿ ಇರಲು ॥ ೨ ॥

೨೧. ಹರಿಯ ಸಂಕೀರ್ತನೆಯಗೈಯ್ಯುತ । ಸುರಮುನಿಪ ನಾರದನು ಬರುತಿರೆ।
ಸುರಪನಾಸನವಿತ್ತು ಪೇಳ್ದನು । ಕರ ಮುಗಿಯುತ ॥ ೩ ॥

೨೨. ರಣಕಣದಿ ಹೊಯ್ದಾಡಿ ಮಡಿಯುತ । ಘನತರದ ಸುರಭೋಗ ಹೊಂದುವ ।
ಜನಪರೀಕಡೆ ಬರದೆ ಸಂದುದು । ದಿನವು ಹಲವು ॥ ೪ ॥

೨೩. ಕಾರಣಿಕರಾಗಿಹಿರಿ ಇದಕೇನ್ । ಕಾರಣವೊ ನೀವರುಹಿರೆಂದೆನೆ ।
ನಾರದನು ಪೇಳಿದನು ಹುಸಿನಗೆ । ಬೀರುತಾಗ ॥ ೫ ॥

೨೪. ಅತ್ತ ಕುಂಡಿನ ಪುರದಿ ಭೀಮನ । ಪುತ್ರಿಯಳಿಗೆ ಸ್ವಯಂವರವು ಆ ।
ಮತ್ತಕಾಶಿನಿ ಬಯಸಿ ತೆರಳ್ದರ್ ಸ । ಮಸ್ತ ನೃಪರು ॥ ೬ ॥

೨೫. ಸುರನರೋರಗ ಮೂರು ಲೋಕದಿ । ಸರಿಯ ಕಾಣೆನು ಚೆಲ್ವಿಕೆಗೆ ಎಂ।
ದೊರೆಯುತಲಿ ನಾರದನು ತೆರಳಲು । ಸುರಪ ನೊರೆದಾ ॥ ೭ ॥

### ॥ ಮಾರವಿ ಏಕ ॥

೨೬. ಕೇಳಿದರಲ್ಲದೆ ನಾರದರೆಂದುದ । ಬಾಲೆಯವರಿಸುವೊಡೆ ॥
ಕಾಲವ ಕಳೆಯದೆ ಪೊರಡುವುದೆಂದೆನೆ । ಕಾಲನು ಪೇಳಿದನು ॥ ೧ ॥

೨೭. ವರುಣ ಹುತಾಶನರನು ಕೂಡುತ ನಾವ್ । ತೆರಳುವ ಎಂದೆನಲು ॥
ಸುರಪನು ಸಮ್ಮತಗೊಳುತಲೆ ಪೊರಟರು । ತರುಣಿಯ ಪಡೆಯಲಿಕೆ॥೨॥

॥ ಭಾಮಿನಿ ॥

೨೮. ಅಂಬರದಿ ಸುರವರ್ಗ ಬರುತಿರೆ । ಕುಂಭಿನಿಪ ನಳನೃಪನ ಕಾಣುತ ।
ಜಂಭವೈರಿಯು ಕೇಳ್ದ ನೀನಾರೆಲ್ಲಿಗೈದುವುದು ॥
ಎಂಬ ಸಕಲ ವಿಚಾರ ಕೇಳಲು । ಹಂಬಲಿಸುತಿದೆ ಮನವು ಎಂದೆನೆ ।
ನಂಬುಗೆಯ ನುಡಿ ಕೇಳ್ವದೆನುತಲಿ ಪೇಳ್ದ ನಳನೃಪತಿ ॥ ೧ ॥

॥ ಸಾಂಗತ್ಯ ರೂಪಕ ॥

೨೯. ಭೀಮಕ ಸುತೆ ದಮಯಂತಿ ಸ್ವಯಂವರ । ಆ ಮಹಾಉತ್ಸವಕೆನುತ ॥
ನಾಮನವೆಳಸಿ ಪೋಗುತಲಿಹೆ ನಳರಾಜ । ಧೀಮಂತರಿಹಿರಿ ನೀವಾರು ॥ ೧ ॥

೩೦. ಸುರಪತಿ ನಾನಿಹೆ ಹರಿಯುವು ವರುಣರ । ಪರಿವಿಡಿಯಿಂದ ಪೊರಟಿಹೆನು ॥
ನೆರವೇರಿಸುವೆಯಾ ಮಮಸಂಕಲ್ಪವೆನಲಾಗ । ಕರತಟ್ಟಿ ಭಾಷೆಯ ಕೊಟ್ಟ ॥ ೨ ॥

೩೧. ಭುವನಮೋಹಿನಿಯನ್ನು ವರಿಪ ಬಯಕೆಯಿಂದ । ಬುವಿಗಿಳಿದಿಹೆವಯ್ಯ ನಾವು ॥
ಅವನಿಪಸುತೆ ನಮ್ಮಲೋರ್ವರ ವರಿಪಂತೆ । ತವಕದಿಂದ್ಯೆದಿ ಮನವೊಲಿಸು ॥ ೩ ॥

೩೨. ಕೇಳಿ ವಿಸ್ಮಯಗೊಂಡು ಕ್ಷಣಕಾಲ ಚಿಂತಿಸಿ । ಪೇಳಿದನವರ್ಗೆ ಕೈಮುಗಿದು ॥ ನೀಲಾಳಕಿಯಲನುರಕ್ತನಾಗಿಹೆ ಪೋಗಿ । ಪೇಳಲೆಂತೀ ನುಡಿಗಳನು ॥೪॥

೩೩. ನುಡಿದ ಮಾತಿಗೆ ತಪ್ಪಬಹುದೆ ಎನ್ನಲು ನಳ । ಒಡಬಟ್ಟು ಪೇಳ್ದನವರೊಡನೆ ॥
ತಡೆಯರೆ ಬಾಗಿಲ ಭಟರೆನ್ನ ಕಂಡರೆ ನಡೆಯಲೆಂತೈ ಅಂತಃಪುರಕೆ ॥೫॥

೩೪. ಕರುಣಿಸಲದೃಶ್ಯದಂಜನ ಪೊರಟನು । ಕೊರಗುತ್ತ ಕಳವಳಿಸುತ್ತ । ಸರಿದು ಅಂತಃಪುರದೆಡೆ ನಿಂದ ನಳನನ್ನು । ತರುಣಿ ವಿಸ್ಮಯದಿಂದ ನೋಡಿ ॥ ೬ ॥

॥ ಶಂಕರಾಭರಣ ಆದಿ ॥

೩೫. ಯಾರು ನೀನು ಮೋಹನಾಂಗ । ಕಾರಿಯವೇನಿಹುದು ಬರಲು ।
ದ್ವಾರಭಟರು ಬಿಟ್ಟರೆಂತು । ಭಾರಿ ವಿಸ್ಮಯ ॥ ೧ ॥

೩೬. ನಳನು ನಾನು ದೇವರಾಜ । ಕಳುಹಿಸಿರ್ಪದೆಸೆಯಧಿಪರ ।
ಲಲನೆ ನೀನು ವರಿಸಲೆಂದು । ತಿಳುಹೆ ಬಂದಿಹೆ ॥ ೨ ॥

೩೭. ಮೆಚ್ಚಿರುವೆನು ನಿನ್ನ ನಾನು । ಚುಚ್ಚಬೇಡ ಹೃದಯವನ್ನು ।
ತುಚ್ಛಕಾರ್ಯಕೆಂತು ಮನವು । ಇಚ್ಛೆಪಟ್ಟುದೋ ॥ ೩ ॥

೩೮. ನಿನ್ನ ವಿರಹದಿಂದ ನಾನು । ಬನ್ನ ಪಟ್ಟುದೆಷ್ಟೋ ಅರಿಯೆ ।
ಮುನ್ನ ದೇವರ್ಕಳಿಗೆ ಏನ । ನೆನ್ನಲಿ ಹೇಳು ॥ ೪ ॥

೩೯. ನಾಳೆ ಸ್ವಯಂವರಕೆ ಬರುವ । ವೇಳೆಯವರ ಸಮಕ್ಷಮದಿ ।
ಮಾಲೆಯಿಕ್ಕಲಿಹೆನು ನಿನಗೆ । ಪೇಳ್ವುದವರಿಗೆ ॥ ೫ ॥

॥ ಭಾಮಿನಿ ॥

೪೦. ತಲೆಯ ತೂಗಿದನವಳ ಧೃಡತೆಗೆ । ನಿಲದೆ ತಾನ್ಯೆತಂದು ಸುರಪಗೆ ।
ತಿಳುಹಿದನು ದಮಯಂತಿಯಭಿಮತವನ್ನು ವಿವರದಲಿ ॥
ಸಲೆ ಪರೀಕ್ಷಿಸಬೇಕೆನುತ ಮನ । ವೆಳಸಿದರು ಕೃತ್ರಿಮಕೆ ವಾಸವ ।
ಕಳುಹಿ ನಳನನು ಪರಿಣಯದ ಪರಿಗಾಗಿ ಯೋಚಿಸಿದಾ ॥ ೧ ॥

॥ ಕೇದಾರಗೌಳ ಅಷ್ಟ ॥

೪೧. ಅರಸುಗಳೆಲ್ಲರು ಮಂಡಿಸಿರಲು ಸ್ವಯಂ । ವರ ಶಾಲೆಯಲಿ ವಧುವು ॥ ಕರದಿ ಕುಸುಮಮಾಲೆ ಹಿಡಿದೈದಿದಳು ದಮ । ಪರಿಚಯಿಸಿದನವರ ॥ ೧ ॥

೪೨. ನಳನನ್ನೆ ಹುಡುಕುತ್ತ ಮುಂಬರಿಯಲು ಐವ । ರಿಳೆಯರಸನ ರೂಪಲಿ ॥
ಕುಳಿತಿರೆ ದಿವಿಜರ ಕೃತ್ರಿಮವನು ತಾನು । ಪರಿಕಿಸಿದಳವರಲಿ ॥ ೨ ॥

೪೩. ನೆಲಕೆ ಪಾದಗಳು ತಾಕಿಹವು ಕಣ್ಣಿವೆಗಳು । ಚಲಿಪವು ಐವರಲಿ ॥
ನಳನ ತಾನರಿಯದೆ ಕಳವಳಿಸುತ ಕರ । ಗಳನೆತ್ತಿ ಸ್ತುತಿಸಿದಳು ॥ ೩ ॥

೪೪. ದೈವ ನಿಯಮವಲ್ತೆ ಪರಿಣಯ ನೀವಿಂತು । ಗೈವರೇ ತಿಳಿದವರಾಗಿ ॥
ಸೇವಕಳಲಿ ದಯೆದೋರುತ್ತ ನಿಜರೂಪ । ನೀವನುಗ್ರಹಿಸುವುದು ॥ ೪ ॥

೪೫. ಕಂಡಳು ನಳನ ಪ್ರತ್ಯೇಕಿಸಿ ಪುಳಕವ । ಗೊಂಡಳು ವರಸುಮದ ॥
ದಂಡೆಯ ಕೊರಳಿಗಿಕ್ಕುತ ಪಾದಕೆರಗೆ ಭೂ । ಮಂಡಲಾಧಿಪ ಪೇಳಿದ ॥ ೫ ॥

೪೬. ಧನ್ಯನಾದೆನು ದಮಯಂತಿ ಬಂದಿರುವಂಥ । ಪುಣ್ಯಜೀವರನುಳಿದು ॥
ಎನ್ನ ಸೇರಿದೆ ಮುಂದೆ ಏಕಪತ್ನಿ ವ್ರತ । ವನ್ನು ಕೈಗೊಳ್ಳುವೆನು ॥ ೬ ॥

೪೭. ವಧುವರರನ್ನು ಸಂತೈಸುತ್ತ ದಿವಿಜರು । ವಿಧ ವಿಧ ವರವನಿತ್ತು ॥
ಸದನಕ್ಕೆ ತೆರಳಲು ಶುಭಮುಹೂರ್ತವ ನೋಡಿ । ಮದುವೆಯ ನಡೆಸಿದರು ॥ ೭ ॥

**॥ ಸೌರಾಷ್ಟ್ರ ತ್ರಿವುಡೆ ॥**

೪೮. ಇತ್ತಕಲಿದ್ವಾ ಪರನ ಕೂಡುತ । ಉತ್ಸುಕತೆಯಲಿ ಕುಂಡಿನಾಪುರ ।
ದತ್ತ ಬರುತಿರೆ ಸುಮನಸರ ಕಾ । ಣುತ್ತ ಕೇಳ್ದ ॥ ೧ ॥

೪೯. ಏನು ಮಘವನೆ ಎತ್ತಣಿಂಪಲಿ । ನೀನಿವರ ಕೂಡುತ್ತಲೈದುವೆ ।
ಕಾಣಲಚ್ಚರಿ ಮರ್ತ್ಯದಲಿ ನಿನ । ಗೇನು ಕಾರ್ಯ ॥ ೨ ॥

೫೦. ಜನಪನಾಗಿಹ ಭೀಮಕನ ಸುತೆ । ಯನು ಸ್ವಯಂವರದಲ್ಲಿ ವರಿಸುವ ।
ಮನದಿ ಪೋದರೆ ನಳನ ವರಿಸಿದ । ಳನು ನಯದಲಿ ॥ ೩ ॥

೫೧. ಕೇಳಿ ಕೆರಳಿದ ಕಲಿಯು ದಿವಿಜರ । ಬೀಳುಗೊಂಡನು ದ್ವಾಪರನ ಬಳಿ ।
ಹೇಳಿದನು ಮನದಿರವ ಮೀರಿತು । ಕಾಲವಿಂದು ॥ ೪ ॥

೫೨. ಭುವನ ಸುಂದರಿಯನ್ನು ಪಡೆಯುವ । ಹವಣಿಕೆಯು ತಪ್ಪಿದುದು ಆಕೆಯು ।
ಅವನಿಪನ ವರಿಸಿದಳು ಕಾಡುವೆ । ಅವಳ ನಾನು ॥ ೫ ॥

೫೩. ನಳನೊಳಗೆ ನಾ ಸೇರಿ ಮನವನು । ಕಲಕುವೆನು ನೀ ಪಗಡೆದಾಳದಿ ।
ನಿಲುವುದೆನ್ನುತ ಕಾರ್ಯಸಾಧಿಸೆ । ಕಲಿಯು ಪೊರಟಾ ॥ ೬ ॥

॥ **ಭಾಮಿನಿ** ॥

೫೪. ಕಲಿಯು ಹನ್ನೆರಬ್ಧಕಾದರು । ನಳನ ಕರ್ಮದಿದೋಷ ಕಾಣದೆ ।
ಹಲುಬಿದನು ಸಂಕಲ್ಪಕೆಟ್ಟುದೆನುತ್ತ ಮನದೊಳಗೆ ॥
ಬಳಿಕಲೊಂದಿನ ರಾಜಕಾರ್ಯದ । ಹೊಲಬಿನಲಿಮೈಮರೆತು ತಪ್ಪಿದ ।
ನಳನ ಕಾಣುತ ಗಹಗಹಿಸಿಹರ್ಷದಲಿ ಕಲಿನುಡಿದಾ ॥ ೧ ॥

॥ **ಆರ್ಯಸವಾಯಿ ಏಕ** ॥

೫೫. ಜಲಬಾಧೆಯ ತಾನೀಗಿಸಿಕೊಳ್ಳುತ । ಬಳಿಕವಸರದಲಿ ನಳ ನೃಪತಿ ॥
ಸಲಿಸಲು ಸಂಧ್ಯಾವಂದನೆ ದೋಷಕೆ । ಸಿಲುಕಿದ ಕಂದಿತವನ ಪ್ರಗತಿ ॥ ೧ ॥

೫೬. ಸಲಿಲದಿ ಬಾಯನು ಮುಕ್ಕಳಿಸದೆ ಕಾಲ್ । ತೊಳೆಯದೆ ನಿಂದನು ಅವಸರದಿ ॥
ಸಲಿಸದೆ ಆಚಮನವ ತಾ ಮರೆತನು । ಸರೆಧರ್ಮವ ಕಾರ್ಯದ ಭರದಿ ॥ ೨ ॥

೫೭. ತನಗನುಕೂಲದ ಸಮಯವಿದೆನ್ನುತ । ಮನದಲಿ ಹಿಗ್ಗುತ ಕಲಿಜವದಿ ॥
ಜನಪನ ಕಾಯವ ಸೇರ್ದನು ಆತನ । ಅನವರತವು ಪೀಡಿಪಮನದಿ ॥ ೩ ॥

॥ **ಕೇದಾರಗೌಳ ಅಷ್ಟ** ॥

೫೮. ನಳನ ಸೋದರ ಪುಷ್ಕರನು ನಿಷಧದ ಕೆಲ । ಸ್ಥಳದಧಿಕಾರಿಯಾಗಿ ॥
ಸಲೆ ನಿಷ್ಠೆಯೊಳಗಿರೆ ರಾಜಭವನದೆಡೆ । ಕಲಿಬರಲವನ ಕಂಡು ॥ ೧ ॥

೫೯. ಯಾರು ನೀವೆಲ್ಲಿಂದ ಬರವಾಯ್ತು ಏನಿಲ್ಲಿ । ಕಾರಿಯವೇನಿಹುದು ॥
ಭೋರನೆ ಪೇಳ್ವುದೆಂದೆನೆ ಕಲಿಹುಸಿ ನಗೆ । ಬೀರುತಲಿಂತೆಂದನು ॥ ೨ ॥

೬೦. ನಿಷದ ಸಾಮ್ರಾಜ್ಯಕ್ಕೆ ದೊರೆಯಾಗಿ ಬಾಳುವ । ಹಸನಾದ ಯೋಗವಿದೆ ॥
ಉಸುರಲೆನ್ನುತ ಬಂದೆ ಕಲಿಪುರುಷನು ನಾನು । ವಿಷಯವ ನವಧರಿಸು ॥ ೩ ॥

೬೧. ನಳನಲ್ಲಿ ಸೇರಿ ನಾ ಕಲಕಿಹೆನಾತನ । ಛಲಮನ ಬುದ್ಧಿಗಳ ॥
ಬಲವಿದೆ ಈ ದಾಳದಲಿ ಪೋಗಿ ದ್ಯೂತಕ್ಕೆ । ನಿಲೆ ನಿನಗಹುದು ಜಯ ॥ ೪ ॥

೬೨. ತೂಕಡಿಸುತ್ತಲಿಹನ ಸುಪ್ಪತ್ತಿಗೆಯೆಡೆ । ನೂಕಿದಂತಾದುದಯ್ಯ ॥
ಏಕಿನ್ನು ತಡವೆಂದು ನಿಷಧಕ್ಕೆ ಪೊರಟನು । ಕಾಕುಮನದಿ ಪುಷ್ಕರ ॥ ೫ ॥

**॥ ಕಾಂಬೋಧಿ ಝಂಪೆ ॥**

೬೩. ಕಲಿಯ ಸೆಳೆತಕೆ ಸಿಕ್ಕಿ ನಿಷ– ದೇಶ ಬಲುತೆರದಿ । ಬಳಲಿ ಬೆಂಡಾದ ಮೈಮನದಿ ॥
ಅಲಸಿಗನು ತಾನಾಗಿ ರಾಜಕಾರ್ಯವಮರೆತು । ಕುಳಿತಿರಲು ಮೌನಮುದ್ರೆಯಲಿ ॥ ೧ ॥

೬೪. ಬಂದ ಪುಷ್ಕರನನ್ನು ಕಂಡು ತಾನೆದ್ದು ಬಳಿ । ಬಂದು ಬರಸೆಳೆದು ಪೇಳಿದನು ॥
ಚಂದವಾಗಿಹೆಯೇನು ಬಂದ ಕಾರಣವೇನು । ಒಂದುಳಿಯದರುಹು ಸೋದರನೆ ॥ ೨ ॥

೬೫. ಅಣ್ಣನಿನ್ನೊಡೆ ದ್ಯೂತವನಾಡಿಬೇಸರಿಕೆ । ಯನ್ನು ನೀಗುವ ಮನದಿ ಬಂದೆ ॥
ಸನ್ನದ್ಧನಾಗಿ ಮನತಣಿಸು ಎನ್ನಲು ನಳನು । ಖಿನ್ನಮನನಾಗಿ ತಾ ನುಡಿದ ॥ ೩ ॥

೬೬. ಜೂಜು ಮೃಗಯೆ ಮದ್ಯಪಾನ ಸ್ತ್ರೀಲಂಪಟವು । ಮೋಜಿಗಾದರು ದುಷ್ಟವ್ಯಸನ ॥

ಸೋಜಿಗವು ನಿನಗಿಂಥ ಬಯಕೆ ಏತಕೆ ತಮ್ಮ । ಸಾಜವಲ್ಲವು ತಿಳಿದುನೋಡು ॥ ೪ ॥

೬೭. ಬವರಕ್ಕೆ ದ್ಯೂತಕ್ಕೆ ಕರೆದಾಗ ಒದಗುವುದು । ಅವನೀಶರಾದವರ ಧರ್ಮ॥
ಕವಲು ನುಡಿಯೇಕೆ ಅಡಗಿತೆಛಲವು ನಿನಗೆನಲು । ಎವೆಯಿಕ್ಕದವನ ದಿಟ್ಟಿಸುತ ॥೫ ॥

೬೮. ಎನಗೆ ನೀತಿಯನುಸುರ್ವಬಲಬಂತೆ ನಿನಗಿಂತು । ಹನನವಾಗುವ ಕಾಲ ಬಂತು ॥
ಜನಪಹಾಸಂಗಿಯುನು ಹರಡಿ ದಾಳವ ಪಿಡಿದು । ಅನುವಾದ ದ್ಯೂತವಾಡಲಿಕೆ ॥ ೬ ॥

॥ ಭಾಮಿನಿ ॥

೬೯. ಏನ ಹೇಳುವೆನರಸ ದ್ಯೂತದಿ । ಹಾನಿಯಾದುದು ನಳನೃಪಾಲಗೆ ।
ಸೇನೆದುರ್ಗವ ದೇಶ ಕೋಶವ ಸೋತು ನಿಂದವನ ॥
ಹೀನ ನುಡಿಯಲಿ ಬೈದು ಭಂಗಿಸಿ । ಮಾನನಿಧಿಯನು ಏಕವಸನದಿ ।
ತಾನೆ ಪುರದಿಂ ಪೊರಮಡಿಸಿದನು ದುರುಳ ಪುಷ್ಕರನು ॥ ೧ ॥

॥ ಸಾಂಗತ್ಯ ರೂಪಕ ॥

೭೦. ದ್ಯೂತದಿ ಸಕಲವ ಸೋತ ವಾರ್ತೆಯ ಕೇಳಿ । ಆ ತಳೋದರಿ ದಮಯಂತಿ ॥
ಭೀತಳಾಗುತ ತನ್ನಮಕ್ಕಳ ತವರಿಗೆ । ಸೂತನ ಮುಖದಿ ಕಳುಹಿದಳು ॥ ೧ ॥

೭೧. ಚೆಲುವನ ಗುಣಕೆ ನಾ ಒಲಿದು ಮಾಲೆಯನಿಕ್ಕಿ । ಒಲವಗಳಿಸಿ ಧನ್ಯಳಾದೆ ॥
ಛಲಮನದಿಂದಲಿ ಪರಿಭವವಾಯ್ತೆಂದು । ಅಳುತಿರೆ ನಳನೈದೆ ಕಂಡು ॥ ೨ ॥

೭೨. ಸುರಿವ ಕಂಬನಿಯಿಂದ ಅರಸನ ಬಿಗಿದಪ್ಪಿ । ಶಿರವ ನೇವರಿಸುತ್ತಲವನ ॥
ಪರಿಭವಕಾಗಿ ಚಿಂತಿಸಲೇಕೆ ವಿಧಿಯಿಚ್ಛೆ । ತಿರಿದುಂಬ ವರವಿತ್ತ ನಮಗೆ ॥ ೩ ॥

೭೩. ನಾಡಿನೆಲ್ಲೆಡೆಯಲ್ಲು ಬೇಡಲು ಬಿಡನಾತ । ನೀಡಿಹ ಪ್ರಜರ್ಗೆ ಕಟ್ಟಾಜ್ಞೆ ॥
ಕಾಡೆ ನಮಗೆ ಗತಿಯೆನುತ ಕಂಬನಿ ಸೂಸೆ । ಬೇಡುತಲವನ ಪೇಳಿದಳು
॥ ೪ ॥

೭೪. ಪೊಡವಿಗೊಡೆಯನಿಮಗಡಸಿದೆ ಬಡತನ । ಮಡದಿಗೇತಕೆ ಒಡವೆಗಳು ॥
ಒಡನೆಲ್ಲ ಕಳಚುತ್ತ ಏಕವಸನದಿಂದ । ನಡೆದಳು ಪತಿಯೊಡಗೂಡಿ ॥೫॥

॥ ದ್ವಿಪದಿ ॥

೭೫. ವನದಿ ಬರುತಿರೆ ಹಂಸ ಯುಗ್ಮಗಳ ಕಂಡ ।
ಕನಕಗರಿ ಹೊಂದಿಹುದ ನೋಡಿ ಮುದಗೊಂಡ ॥ ೧ ॥

೭೬. ಹಸಿವು ಹಿಂಗಿಸೆ ಮಾಂಸ ಧನಗಳಿಕೆಗಿದರ ।
ಎಸೆವ ತುಪ್ಪುಳವೆಂದು ನಿರ್ಧರಿಸುತದರ ॥ ೨ ॥

೭೭. ಎಸೆಯೆ ತಾನುಟ್ಟ ವಸನವ ಬಲೆಯ ತೆರದಿ ।
ವಶಗೈದು ಹಾರಿದವು ಹಂಸೆಗಳು ಭರದಿ ॥ ೩ ॥

೭೮. ಅರಸನಾಚಿಕೆಗೊಂಡು ಸತಿಯ ಸೀರೆಯಲಿ ।
ಅರೆ ಧರಿಸಿನಡೆದ ಕಂಬನಿಯ ಕೋಡಿಯಲಿ ॥ ೪ ॥

॥ ಶಂಕರಾಭರಣ ತ್ರಿವುಡೆ ॥

೭೯. ಭೂವರನ ದೀನತೆಯ ಕಾಣುತ । ಭಾವಕಿಯು ಮಗುಳೆಂದಳು ॥
ನಾವು ಪಿತನರಮನೆಯ ಸೇರುತ । ಜೀವಿಸುವುದು ॥ ೧ ॥

೮೦. ಕೆಟ್ಟುನೆಂಟರ ಸೇರುವುದು ನನ । ಗಿಷ್ಟವಿಲ್ಲವು ಕೇಳೆಲೆ ॥
ಕಷ್ಟವಾದರು ಸಹಿಸಿ ಒಂದೆಡೆ । ಒಟ್ಟಿಗಿರುವಾ ॥ ೨ ॥

೮೧. ಬರುತ ಕಂಡನು ಧರ್ಮಛತ್ರವ । ಅರಸಿಯೊಡನೊಳು ಪೊಗುತಲಿ ॥
ಒರಗಿದನು ಹೊದೆಯುತ್ತ ರಾಣಿಯ । ಅರಿವೆಯನ್ನು ॥ ೩ ॥

॥ ಭೈರವಿ ಝಂಪೆ ॥

೮೨. ನಿದ್ದೆಗಿಳಿದಿರೆ ಸತಿಯು । ಎದ್ದು ನಳಯೋಚಿಸಿದ । ಇದ್ದರೆನ್ನೊಡನಿವಳು । ಬದ್ಧಸುಖವಿಲ್ಲ ॥ ೧ ॥

೮೩. ಕಾಣದಿರೆ ಎನ್ನನ್ನು । ಮಾನಿನಿಯು ತವರನ್ನು । ತಾನೆ ಸೇರ್ವಳು ಅಗಲಿ । ನಾನೆ ಪೋಗುವೆನು ॥ ೨ ॥

೮೪. ಕಾಡಿನಾಭೀಕರತೆ । ಗೀಡಾಗಿ ಮರುಗಳೇ । ನೋಡಿದರೆ ಕಾಮುಕರು । ಕಾಡರೇ ಇವಳ ॥ ೩ ॥

೮೫. ತನ್ನ ರಕ್ಷಿಸಿಕೊಳುವ । ಘನ್ನ ಪತಿವ್ರತೆ ಇವಳು । ಇನ್ನೇಕೆ ತಡವೆನುತ । ಅನ್ನೆಗವಪೊರಟಾ ॥೪ ॥

॥ ಭಾಮಿನಿ ॥

೮೬. ನಿದ್ದೆಯಿಂದೆಚ್ಚತ್ತು ಬಳಿಮಲ । ಗಿದ್ದ ಪತಿಯನು ಕಾಣದೇ ತಾ ।
ನೆದ್ದು ಹುಡುಕಾಡಿದಳು ಭಯದಲಿ ಬೆಂದು ಮರುಗಿದಳು ॥

॥ ನೀಲಾಂಬರಿ ಆದಿ ॥

೮೭. ಏನ ಮಾಡಲಿ ನಾನಿನ್ನು । ಮತ್ಪ್ರಾಣಕಾಂತ । ತಾನೆ ಅಗಲಿ ಪೋದನು ॥ ಕಾಣದಾಗಿದೆ ದಾರಿಯು । ಪತಿ ತ್ಯಜಿಸಿದ । ಹೀನ ಭಾಗ್ಯದ ನಾರಿಯು ॥ ೧ ॥

೮೮. ಪೊಡವಿಯ ಕಳಕೊಂಡರು । ಜೀವದ ರತ್ನ । ಪಡೆದ ಮಕ್ಕಳನಗಲ್ದರು॥ ತಡೆದುಕೊಂಡೆನು ದುಃಖವ । ನೀನಿಹೆ ಎಂದು । ಕಡೆಗು ತೊರೆದೆ ಮೋಹವ ॥ ೨ ॥

॥ ಭಾಮಿನಿ ॥

೮೯. ಮರುಗಿ ಫಲವೇನಿನ್ನುಹಣೆಯಲಿ । ಬರೆದ ಲಿಪಿಯನು ಮೀರಲಪ್ಪುದೆ ।
ಹರಿಯೆ ನೀನೇ ಗತಿಯು ತನಗೆಂದೆನುತ ಮುಂಬರಿಯೆ ॥
ತರುಣಿಯನು ಹೆಬ್ಬಾವು ಪಿಡಿಯಲು । ತರಹರಿಸಿ ಚೀರಲ್ಕೆವ್ಯಾಧನು ।
ತ್ವರಿತದಲಿ ಹರಿತಂದು ಸೀಳ್ದನು ಪಿಡಿದ ಉರಗವನು ॥ ೧ ॥

೯೦. ತಳೆದು ಮೂರ್ಛೆಯ ಬಿದ್ದನಾರಿಗೆ । ಜಲವ ತಂದೆರಚಿದನು ಬೇಡನು ।
ಸುಳಿದ ತಂಬೆಲರಿಂಗೆ ಭಾಮಿನಿ ಮೂರ್ಛೆಯನು ತಿಳಿದು ॥
ಬಳಿಕ ತನ್ನನು ಉಳುಹಿದಾತಗೆ । ಸಲೆಕೃತಜ್ಞತೆ ಪೇಳಲಾಕೆಯು ।
ಚಲುವಿಕೆಗೆ ಮನಸೋತು ನುಡಿಸಿದ ಮಧುರ ವಚನದಲಿ ॥ ೨ ॥

॥ **ಮುಖಾರಿ ಏಕ** ॥

೯೧. ಉರಗನ ಬಾಧೆಯಿಂದಾ । ಸಾಯುವ ನಿನ್ನ । ಪೊರೆದೆ ನಾ ಧೈರ್ಯದಿಂದಾ ॥
ತರುಣಿ ನೀ ತಿಳಿದಾಕೆ । ಮರೆಯದೆ ಉಪಕಾರ । ತ್ವರಿತದಿ ಮಾಳ್ಪೆಯೇನೆ । ಸುಂದರಿ ಜಾಣೆ ॥ ೧ ॥

॥ **ಕಾಪಿ ಅಷ್ಟ** ॥

೯೨. ಕಿರಿದುಪಕಾರ ಹೊಂದಿದರು । ಜೀವ । ಪರಿಯಂತ ಮರೆಯಬಾರದು ತಿಳಿದವರು ॥
ಕರಕೆಟಕುವುದಾದರದನು । ಮಾಡ । ದಿರೆನು ನಂಬುಗೆ ತಾಳಿ ಪೇಳು ನೀನದನು ॥ ೧ ॥

॥ **ಮುಖಾರಿ ಏಕ** ॥

೯೩. ಮದನನ ಬಾಣದಿಂದಾ। ಬೇಯುತಲಿಹೆ । ಚದುರೆ ಸಂತೋಷದಿಂದಾ॥
ಮೃದುತೋಳಿನಪ್ಪುಗೆ । ಅಧರ ಚುಂಬನದಿಂದ । ಒದಗಿಸುರತಕೇಳಿಗೆ ॥ ತಾಪವನೀಗೆ ॥ ೧ ॥

॥ **ಆನಂದ ಭೈರವಿ ಏಕ** ॥

೯೪. ಕಡು ಪತಿವ್ರತೆಯು ನಾನಯ್ಯ । ಎನ್ನ । ಕೆಡಿಸುವ ಮನವು ಬೇಡಯ್ಯ ॥
ಧಡಿಗ ತಾನೆಂದುಬ್ಬಬೇಡಾ । ಬೇಗ । ನಡೆ ಬೇರೆ ಕಡೆ ದುಷ್ಟ ಬೇಡಾ ॥ ೧ ॥

॥ **ಬೈರವಿ ಏಕ** ॥

೯೫. ಬಯಸಿದ ಹೆಣ್ಣನು ಪಡೆಯೆ । ನಾ । ಭಯಪಡುವೆನೆ ಕಟುನುಡಿಯೆ ॥
ದಯೆ ತೋರೆನು ಈ ಕ್ಷಣದಿ । ಆ । ಲಯಕೊಯ್ಯುವೆ ನಾ ಭರದಿ ॥೧॥

॥ ಭಾಮಿನಿ ॥

೯೭. ದುರುಳ ಮುಂಬರಿವುದನು ಕಾಣುತ । ತರುಣಿ ಕೋಪಾವಿಷ್ಟಳಾಗುತ ।
ವರಪತಿವ್ರತೆಯಾದೊಡೆನ್ನನು ಕಾಡುತಿರುವವನು ॥
ಮರಣಹೊಂದಲಿ ಎನುತ ದೃಷ್ಟಿಯ । ಹರಿಸೆ ತೀವ್ರತೆಯಿಂದ ವ್ಯಾಧನು।
ಉರಿದು ಸೀ । ಕರಿಯಾಗೆ ನೆಮ್ಮದಿ ಹೊಂದಿ ದಮಯಂತಿ ॥ ೧ ॥

೯೭ ಅಡವಿಯಲಿ ಮುಂಬರಿದು ವಣಿಜರ । ಪಡೆಯ ಸೇರಲು ರಾತ್ರಿಕಾಲದಿ ।
ಹೊಡೆದು ಹುಡಿಗೊಳಿಸಿದುವು ಕಾಡಾನೆಗಳು ಬಿಡದಿಯನು ॥
ಕಡೆಗೆ ಚೇದಿಗೆ ತೆರಳ್ವ ವಿಪ್ರರ । ಗಡಣದೊಂದಿಗೆ ಸೇರಿ ಪಟ್ಟಣ ।
ಪೊಡವಿಪನ ಅರಮನೆಯೊಳಿರ್ದಳು ದಾಸ್ಯವೃತ್ತಿಯಲಿ ॥ ೨ ॥

॥ ಮಾರವಿ ಅಷ್ಟ ॥

೯೮. ನಳನು ಮುಂಬರಿಯೆ ಕಾನನದಿ ಕಾಡ್ಗಿಚ್ಚು ಪ್ರ । ಜ್ವಲಿಸುತಲಿರೆ ಕೇಳ್ದನು ॥
ಎನ್ನ ॥
ಸಲಹಯ್ಯ ನಳರಾಯ ಬಿಡಿಸುತೀಮೆಳೆಯಿಂದ । ಸಲೆ ಕೃಪೆದೋರುತಲಿ
॥ ೧ ॥

೯೯. ಧ್ವನಿ ಬಂದ ಕಡೆಗೆ ತಾನಡೆತಂದು ಕಂಡನು । ಘನವಾದ ಉರಗವೊಂದ
॥ ಏ ।
ಕಿನಿತು ಎನ್ನನೆ ಕೂಗಿ ಕರೆಯುತಿರುವೆ ಎನೆ । ಜನಪನಿಗಿಂತೆಂದನು ॥೨॥

೧೦೦. ಮುನಿ ನಾರದರ ಶಾಪದಿಂದ ಚಲಿಸದಿಹೆ । ಎನಗೆ ವಿಶಾಪ ನಿನ್ನಿಂದ ॥
ಎಂದು ॥
ಕೊನೆಗುಸುರಲು ನಿನ್ನ ಬರವ ಕಾಯುತಲಿದ್ದೆ । ಕನಿಕರಿಸುತ ಬಿಡಿಸು
॥ ೩ ॥

೧೦೧. ರಸೆಯರಸನು ಎತ್ತಿಎಣಿಸುತ್ತ ನಡೆದನು । ದಶವೆಂದು ಪೇಳಲಾಗ ॥ತನ್ನ।
ದಶನದಿ ಕುತ್ತಲಾತಗೆ ವಿಷವೇರಿತು । ಹಸನಾದ ರೂಪ ಹೋಗಿ ॥ ೪ ॥

೧೦೨. ಅಡ್ಡ ಮೋರೆಯ ಗಂಟು ಮೂಗಿನ ಉದುರಿದ । ಗಡ್ಡಮೀಸೆಗಳಿಂದಲಿ
॥ ಮತ್ತೆ ।
ಗಿಡ್ಡಕೈಕಾಲಿನ ಗೂನು ಬೆನ್ನಿನ ರಾಯ । ಹೆಡ್ಡನಂತಾದ ತಾನು ॥ ೫ ॥

೧೦೩. ಕರುಣೆಯ ಕೈನೀಡಿ ಕಾಪಾಡಿದರೆ ಕಚ್ಚಿ । ಗರಳವ ಕಾರಿಬಿಟ್ಟೆ ॥ ಹಾಲ ।
ನೆರೆದರೆ ಫಲವಿಲ್ಲ ಹಾವಿಗೆ ಎಂದೆನೆ । ಉರಗಪತಿಯು ಪೇಳ್ದನು ॥ ೬ ॥

॥ ಝಂಟಾರವ ರೂಪಕ ॥

೧೦೪. ಕೇಡನೆಸಗಿದೆ । ಎನುತ ಕೋಪವ । ಮಾಡಲಾಗದು । ನೃಪತಿ ಲಾಲಿಸು॥
ರೂಢಿಯಲಾರು । ಗುರುತಿಸದಂತೆ । ಮಾಡಲೋಸುಗ । ಗೈದೆನೀ ಪರಿ
॥ ೧ ॥

೧೦೫. ನಿನ್ನ ಸೇರಿದ । ಕಲಿಯು ಮುಂದಕೆ । ಎನ್ನ ವಿಷದಲಿ । ಬಳಲಿ ಬೇಯಲಿ ॥
ಮುನ್ನಿನ ರೂಪ । ಬಯಸೆ ಧರಿಸಲು । ಚೆನ್ನವಾಗಿಹ। ವಸನವಿತ್ತನು॥೨॥

೧೦೬. ತೆರಳಯೋಧ್ಯೆಗೆ । ರಾಯನಾಶ್ರಯ । ದೊರೆವುದಲ್ಲಿಯೆ । ಇರು ರಹಸ್ಯದಿ ॥
ಅರಸನಿಂದಲಿ । ಅಕ್ಷವಿದ್ಯೆಯ । ಅರಿವೆ ಕಳೆದಿಹ । ಪುರವು ದೊರೆವುದು
॥ ೩ ॥

॥ ಭಾಮಿನಿ ಅರ್ಧ ॥

೧೦೭. ಉರಗಪತಿ ಕಾರ್ಕೋಟಕನುತಾ । ನರುಹುತೀಪರಿ ಬೀಳುಗೊಂಡನು ।
ತ್ವರಿತದಲಿ ನಳ ಪೊರಟ ಸಾಕೇತವನು ಸೇರಲಿಕೆ ॥

॥ ಕಾಂಭೋದಿ ಝಂಪೆ ॥

೧೦೮. ಅರಸ ಧರ್ಮಜ ಕೇಳು ಋತುಪರ್ಣಮಾರಾಜ । ದೊರೆಯಾಗಿ ಅಯೋಧ್ಯೆ ಪುರವ ॥ ಪರಿಪಾಲಿಸುತ್ತಲಿಹ ಸತ್ಯ ಸದ್ಧರ್ಮದಲಿ ।
ಬರುವ ಬಾಹುಕನನ್ನು ಕಂಡು ॥ ೧ ॥

೧೦೯. ಯಾರು ನೀನೆಲ್ಲಿಂದ ಬಂದೆ ಪೆಸರೇನ್ನೈ ವಿ । ಕಾರವಾಗಿಹುದೇಕೆ ತನುವು॥
ಕಾರಿಯುವದೇನಿಹುದು ಎನ್ನಲ್ಲಿ ಪೇಳ್ವುದೆನೆ । ಧಾರಣಿಪಗೆರಗಿ ನುಡಿಸಿದನು ॥ ೨ ॥

೧೧೦. ನಿಷದೇಶ ನಳನೃಪನ ಅಶ್ವದಾರೈಕೆಯಲಿ । ಹಸನಾಗಿರಲು ಎನ್ನ ಬದುಕು॥

ವಿಷಮಲತ್ತೆಯಲಿ ಪುಷ್ಕರನಿಂಗೆ ಸಾಮ್ರಾಜ್ಯ । ವಶವಾಗೆ ಸತಿಸಹಿತ ಪೊರಟ ॥ ೩ ॥

೧೧೧. ಅಧಿರಾಜನಲಿ ಸೇವೆ ಮಾಡಿದವ ಬಳಿಕವನ । ಅಧಿಕಾರ ತೊಲಗೆ ನಾ ಪೊರಟೆ ॥
ಬದುಕಿಗಾಸರೆಯಿತ್ತು ಸಲಹು ಬಾಹುಕಪೆಸರು । ಇದಕೇನು ತಮ್ಮ ಅಭಿಮತವು ॥ ೪ ॥

೧೧೨. ಶಿವಶಿವಾ ಶಶಿವಂಶದರಸನೀ ಪರಿಯಲ್ಲಿ । ಬವಣೆಪಡುವಂತಾಯ್ತೆ ಎನುತ ॥
ಭುವನೇಶ ಅಶ್ವದಾರೈಕೆಯನ್ನವಗಿತ್ತು । ಭವನದಲ್ಲಿರಿಸಿಕೊಂಡಿರಲು ॥೫॥

॥ ಭಾಮಿನಿ ಅರ್ಧ ॥

೧೧೩. ಅವನಿಪತಿ ಋತುಪರ್ಣ ಬೇಟೆಗೆ । ಹವಣಿಸಿದ ಪರಿ ಅರಿತು ಬಾಹುಕ । ತವಕದಿಂದೈತಂದು ಪದಕೆರಗುತ್ತ ಪೇಳಿದನು ॥

॥ ಸೌರಾಷ್ಟ್ರ ಅಷ್ಟ ॥

೧೧೪. ಬಿನ್ನಪ ದೊರೆಯೆ ಬೇಟೆಗೆ ನೀವುಪೋಗುವ । ವಾರ್ತೆಕೇಳಿ ॥ ಬಂದೆ । ನನ್ನನ್ನು ಕರೆದೊಯ್ಯಬೇಕೆಂದು ಬೇಡುವೆ । ಕರುಣೆ ತಾಳಿ ॥ ೧ ॥

೧೧೫. ಸರಿಯಾಗಿ ನಡೆಯಲು ಬಾರದ ನಿನ್ನನ್ನು । ಕರೆದುಕೊಂಡು ॥ ಅಲ್ಲಿ । ಇರುವಂಥ ಕ್ರೂರ ಪ್ರಾಣಿಗಳಿಗೆ ಕೊಡಲೇನು ॥ ತಿಳಿದುಕೊಂಡು ॥ ೨ ॥

೧೧೬. ಮುನ್ನ ನಾ ಕೇಳಿರ್ದೆ ನಿಮ್ಮ ಚಾತುರ್ಯವ । ಬೇಟೆಯಲ್ಲಿ ॥ ಬಂದೆ ॥ ಕಣ್ಣಾರೆ ಕಂಡು ಆನಂದಿಸಬೇಕೆಂಬ । ಆಸೆಯಲ್ಲಿ ॥ ೩ ॥

೧೧೭. ಬರಲೆ ಬೇಕೆನ್ನುವ ಮನವಿರೆ ನಿನ್ನಲ್ಲಿ । ರಥದಿನಿಂದು ॥ ನೋಡಿ । ಹರುಷವಗೊಳ್ಳೆಂದು ಒಡಗೂಡಿ ಪೊರಟನು । ರಾಯನಂದು ॥ ೪ ॥

॥ ವಾರ್ಧಿಕ ॥

೧೧೮. ವಸುಧೇಶ ಸಿಂಹವೊಂದನು ಕಂಡು ಕೋಪದಲಿ ।
ಸಸಿನದಲಿ ಬೆನ್ನಟ್ಟೆ ಬಲದೂರ ಸಾಗುತಲಿ ।

ಎಸೆದ ಬಾಣಕೆ ಮೃತಿಯನೈದಲ್ಕೆ ರವಿಮುಳುಗಿ ಕತ್ತಲೆಯು ಆವರಿಸಿತು ॥
ಹಸಿದ ರಾಯಗೆ ತಂದ ತಂಡುಲವ ಬಾಹುಕನು ।
ಬಿಸಿಮಾಡಿ ನೀಡಲ್ಕೆ ಸ್ವಾದಕ್ಕೆ ಮನಸೋತು ।
ಬೆಸಸಿದನು ಮುಂದಕ್ಕೆ ಬಾಣಸಿಗ ನೀನೆನಗೆ ಎನುತವನ ನೇಮಿಸಿದನು ॥ ೧ ॥

॥ **ಸಾಂಗತ್ಯ ರೂಪಕ** ॥

೧೧೯. ದಮನನ ಮಿತ್ರ ಸುದೇವನ ಕರದು ಭೂರಮಣ ಭೀಮಕನೆಂದನವಗೆ॥
ದಮಯಂತಿ ಕಳುಹಿದ ಮಕ್ಕಳೊಡನೆ ಸೂತ । ಗಮಿಸಿ ಪೇಳಿದ ವಾರ್ತೆಗಳನು ॥ ೧ ॥

೧೨೦. ನಳನು ಸರ್ವಸ್ವವ ದ್ಯೂತದಿ ಕಳಕೊಂಡು । ಲಲನೆಯೊಂದಿಗೆ ರಾಜ್ಯತೊರೆದು ॥
ಕೆಲದಿನವಾದರು ಅವರೀರ್ವರಿರವನ್ನು । ತಿಳಿಯದೆ ಪರಿತಪಿಸುವೆನು ॥ ೨ ॥

೧೨೧. ಅವರಿರವನು ಕಂಡು ತವಕದಿಂದ್ಯೆತಂದು । ವಿವರದಿ ತಿಳಿಸಬೇಕೆಂದು ॥
ಅವನೀಶ ಪೇಳಲ್ಕೆ ಒಪ್ಪಿಸುದೇವನು । ಜವದಿಂದ ಪೊರಟ ಶೋಧನೆಗೆ ॥ ೩ ॥

॥ **ದ್ವಿಪದಿ** ॥

೧೨೨. ಹಲವು ರಾಜ್ಯವ ಕಳೆದು ಚೇದಿಗೈತಂದ । ತಿಳಿದ ನಡೆಯುತ್ತಿರುವ ಶುಭಕಾರ್ಯದಂದ ॥ ೧ ॥

೧೨೩. ತಡೆಯದೆಲೆ ಅರಮನೆಯ ಒಳಪೊಗಲು ಕಂಡ । ಜಡಜನೇತ್ರೆಯ ಮನದೊಳಚ್ಚರಿಯಗೊಂಡ ॥

೧೨೪. ಭ್ರೂಮಧ್ಯೆ ಇರುವ ಮಚ್ಚೆಯ ಕುರುಹಿನಿಂದ । ಭೀಮಕನತರಳೆ ನಿಶ್ಚಯವೆಂದು ತಿಳಿದ ॥ ೩ ॥

೧೨೫. ಮಾರಾಣಿಯನು ಕಂಡುಬಂದ ಕಾರ್ಯಗಳ । ಸಾರಿದನು ಇಂತೆನುತ ಸಕಲ ವಾರ್ತೆಗಳ ॥ ೪ ॥

॥ **ಬೇಗಡೆ ಅಷ್ಟ** ॥

೧೨೬. ಚಿತ್ತವಿಸು ಮಾರಾಣಿಮನವಿಟ್ಟು । ನಿಮ್ಮಲ್ಲಿ ತಂಗಿಹ । ಮತ್ತಕಾಶಿನಿ ಬಗೆಯ ಬಲುಗುಟ್ಟು ॥ ಪೃಥ್ವಿಪಾಲಕ ಭೀಮರಾಯನ । ಪುತ್ರಿ ಈಕೆಯು ಅಡಸಿರುವ ಆ । ಪತ್ತಿನಲಿ ತಾ ಬಂದು ಸೇರ್ದಳು । ಸತ್ಯಸಂಗತಿ ಮರೆಯಮಾಚುತ ॥ ೧ ॥

೧೨೭. ದ್ಯೂತದಲಿ ಸರ್ವಸ್ವಕಳಕೊಂಡು । ನಳ ಊರ ತ್ಯಜಿಸಿದ । ಈ ತಳೋದರಿಯನ್ನು ಒಡಗೊಂಡು ॥ ಜಾತೆ ಅಳಿಯರ ಕಾಣದೆಲೆ ಭೂ । ನಾಥ ಭೀಮಕ ಪರಿತಪಿಸುತಿಹ । ನೀ ತಳುವದೆಲೆ ಕಳುಹಿಸೀಕೆಯ । ತಾಪವನು ಸಂತೈಸುತೀಗಲೆ ॥ ೨ ॥

॥ **ಭಾಮಿನಿ ಅರ್ಧ** ॥

೧೨೮. ಕೇಳಿ ಭೂಸುರರೆಂದುದಚ್ಚರಿ । ತಾಳಿದಮಯಂತಿಯನು ಕರೆಸುತ । ಪೇಳಿದಳು ಬಿಗಿದಪ್ಪುತಾಕೆಯ ತಲೆಯ ನೇವರಿಸಿ ॥

॥ **ಅರಬಿ ಆದಿ** ॥

೧೨೯. ಸತ್ಯಾಂಶವನು ಪೇಳದೆ । ಎನ್ನೀಗೃಹದಿ । ಧಾತ್ರಿಯಂದದಿ ಬಾಳಿದೆ ॥ ಮತ್ತೆನ್ನ ಅಕ್ಕನ ಮಗಳಾದ ನಿನ್ನನ್ನು । ತೊತ್ತಿನಂದದಿ ದುಡಿಯಿಸಿಕೊಳ್ಳುವಂತಾಯ್ತು ॥ ೧ ॥

೧೩೦. ಅಡಸಿದ ಬಡತನವಾ । ಹೇಳಲು ನಾಚಿ । ಅಡಗಿಸಿದೆನು ನಿಜವಾ ॥ ಹಡೆದ ಮಕ್ಕಳ ಮತ್ತು ಪಡೆದ ತಾಯ್ತಂದೆಯ । ಒಡಗೂಡೆ ಅನುಮಾಡಿ ಹರಸಿ ನೀ ಕಳುಹಮ್ಮಾ ॥ ೨ ॥

೧೩೧. ಪತಿಯ ಕಾಣುವ ಭಾಗ್ಯವು । ಸೋತಿರುವಂಥ । ಕ್ಷಿತಿಯ ಪಡೆವ ಯೋಗವು॥ ಅತಿ ಶೀಘ್ರದಲಿ ನಿನಗೊದಗಿ ಬರಲಿ ಎಂದು । ಮತಿಯುತೆ ಹರಸಿ ಬೀಳ್ಕೊಂಡಳು ದುಗುಡದಿ ॥ ೩ ॥

॥ ಭಾಮಿನಿ ॥ ಅರ್ಧ ॥

೧೩೨. ಧರಣಿಸುರ ಪರ್ಣಾದನು –ಸುರಿದ । ಕುರುಹಿನಿಂದಲಿ ನಳನ ಇರವನು । ಅರಿಯುತಲಿ ದಮಯಂತಿ ಕರೆಸಿ ಸುದೇವಗುಸುರಿದಳು ॥

॥ ಸುರಟಿ ಏಕ ॥

೧೩೩. ಅರಿಕೆಯೊಂದಿದೆ ಕೇಳಿ । ಪೇಳುವೆ । ಭರಿತ ಕರುಣೆ ತಾಳಿ ॥
ತ್ವರಿತದಿ ಸಾಕೇತವ ನೀವ್ ಸೇರುತ । ಧರಣಿಪಗೊರೆವುದು । ಉರುತರ ಕಾರ್ಯವ ॥ ೧ ॥

೧೩೪. ನಳನನು ಕಾಣದಿರೆ । ಭೀಮಕ । ತಳೆದಿಹ ನಿಲು ಅರರೆ ॥
ಇಳೆಯರಸರ ಕರೆಸುತಲಿ ಸ್ವಯಂವರ । ದಲಿ ಒಲಿದವರಿಗೆ ಸುತೆಯನ್ನೀಯುವ ॥ ೨ ॥

೧೩೫. ನಾಳೆಯೆ ನಡೆಯಲಿದೆ । ಲಗ್ನವು । ವೇಳೆಯು ಕಿರಿದು ಇದೆ ॥
ಆಲಸ್ಯವ ತಾಳದೆ ಬಹುದೆನ್ನುತ । ಹೇಳೀ ಬರುವುದೆಂದೊಪ್ಪಿಸಿ ಕಳುಹಿದಳ್ ॥ ೩ ॥

॥ ವಾರ್ಧಿಕ ॥

೧೩೬. ದಮಯಂತಿಯನು ಬೀಳುಗೊಳ್ಳುತ ಸುದೇವ ತಾ । ಗಮಿಸಿದನು ಸಾಕೇತ ನಗರಕ್ಕೆ ಕಂಡವನ । ನಮಿಸಿ ಸತ್ಕರಿಸಿ ಋತುಪರ್ಣ ಕೇಳ್ದನು ನಿಮ್ಮ ಬರವೇನು ಯಾರೆನ್ನಲು ॥
ಅಮಮ ಏನಚ್ಚರಿಯೊ ಕುಂಡಿನಾಪುರದಿ ಭೂ । ರಮಣರೆನಿತೋಮಂದಿ ನೆರೆದಿಹರು ನಾಳೆಯೇ । ದಮಯಂತಿಯಳ ಸ್ವಯಂವರವೆನಲು ನೃಪತಿ ಕಿಡಿಕಿಡಿಯಾಗಿ ಮಗುಳೆಂದನು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

೧೩೭. ಅರರೆ ಏನಿದು ಚೋದ್ಯ ನಳನೃಪ । ನಿರುವನೊಮೇಣ್ ಇಲ್ಲವೆಂಬುದ । ಅರಿಯದೆಲೆ ಭೀಮಕನು ಹಮ್ಮಿದ । ಪರಿಣಯವನು ॥ ೧ ॥
೧೩೮. ಧನಬಲವೊ ಅಧಿಕಾರ ದರ್ಪವೊ । ಘನತರದ ನೆಣಗೊಬ್ಬೊ ವಾರ್ಧಿಕ । ತನದಲಡರಿದ ಮರುಳುತನವೊ । ಜನಪಗಿಂದು ॥ ೨ ॥

೧೩೯. ತಂದನಪಕೀರ್ತಿಯನು ಕ್ಷತ್ರಿಯ । ನಂದನೆಗೆ ಮರುಮದುವೆ ಎಂಬುದು । ಚಂದವೇ ಧರ್ಮಕ್ಕೆ ಸಮ್ಮತಿ । ಹೊಂದಲುಂಟೆ ॥ ೩ ॥

೧೪೦. ಮರುಳುತನದಲಿ ನೆರೆದ ರಾಯರ । ಶಿರವ ಚೆಂಡಾಡುತ್ತ ಹಮ್ಮಿದ । ಪರಿಣಯವ ನಿಲ್ಲಿಸುತ ಭೀಮನ । ತುರುಬಹಿಡಿವೆ ॥ ೪ ॥

೧೪೧. ನೂರುಯೋಜನ ದೂರದಲ್ಲಿಹ । ಊರಸೇರುವುದೆಂತು ಮುಂದಿನ । ದಾರಿ ಕಾಣದೆನಲ್ಕೆ ಬಾಹುಕ । ಸಾರಿ ಪೇಳ್ದ ॥ ೫ ॥

॥ **ಶಂಕರಾಭರಣ ಏಕ** ॥

೧೪೨. ದೊರೆಯೆ ಕೇಳಿ ಇಲ್ಲಿ ನೀವು । ಬರಿದೆ ಕೂಗಿ ಫಲವದೇನು । ಪರಿಣಯವನು ನಿಲಿಸಲಹುದೆ । ಬರಿಯ ಬೊಬ್ಬೆಯು ॥ ೧ ॥

೧೪೩. ಏನ ಮಾಡಲಯ್ಯ ನಾನು । ಹೀನ ಭಾಗ್ಯನಾಗಿ ಹೋದೆ । ಕಾಣದಾದೆ ದಾರಿ ಸಮಯ । ಕ್ಷೀಣವಾಯಿತು ॥ ೨ ॥

೧೪೪. ಅಲ್ಲಿ ಸೇರಲಿರುವ ನೃಪರು । ಅಲ್ಲವಯ್ಯ ಕ್ಷೀಣ ಬಲರು । ನಿಲ್ಲೆ ಸಮರಕೆಂದು ನಿಮ್ಮ । ಕೊಲ್ಲದುಳಿಯರು ॥ ೩ ॥

೧೪೫. ಸಲುಗೆಯ ಮಾತೇನೊ ನನ್ನ । ಬಲವನರಿಯದಿನಿತು ನುಡಿವೆ । ನಿಲರುಎನ್ನ ಎದುರು ಮೂರು । ಇಳೆಯಪಾಲರು ॥ ೪ ॥

೧೪೬. ನಾಳೆ ಲಗ್ನನಡೆಯಲಿರುವ । ವೇಳೆ ಮೊದಲೆ ತಲುಪಿಸುವೆನು । ಮೇಲೆ ತೋರಬಹುದು ನಿಮ್ಮ । ತೋಳ ಬಲವನು ॥ ೫ ॥

೧೪೭. ಜಾಣತನವು ನಿನ್ನೊಳಿರಲು । ಕಾಣಬಹುದು ಎನ್ನ ಶೌರ್ಯ । ಶಾನೆ ಸಿದ್ಧಗೊಳಿಸು ರಥವ । ಮಾಣದೀಗಲೆ ॥ ೬ ॥

॥ **ಭಾಮಿನಿ** ॥

೧೪೮. ಹತ್ತು ಸುಳಿಗಳ ಹೊಂದಿರುವ ಬಲು । ಉತ್ತಮಾಶ್ವವ ಹೂಡಿ ಬಾಹುಕ । ಪೃಥ್ವಿಪತಿಯೊಡಗೊಂಡು ವೇಗದಿ ಪೋಗುತಿರುವಲ್ಲಿ ॥

ಉತ್ತರೀಯವು ಬಿದ್ದುದೆಲೆ ತುಸು । ಹೊತ್ತು ನಿಲಿಸೆನೆ ವ್ಯರ್ಥ ನಿಲುಗಡೆ ।
ಹತ್ತುಯೋಜನ ಸರಿಯಿತೆನುತ ವರೂಥ ಮುನ್ನಡೆಸೆ ॥ ೧ ॥

೧೪೯. ಮುಂದೆಗಮಿಸೆ ನಿಭೀತ ವೃಕ್ಷವ । ನೊಂದ ಕಾಣತ ಭೂಮಿಪಾಲಕ ।
ಒಂದುಕೊಂಬೆಯಲಿರುವ ಫಲಗಳ ಸಂಖ್ಯೆ ಪೇಳಲ್ಕೆ ॥
ಹೊಂದಿ ಅಚ್ಚರಿ ಬಾಹುಕನು ಕೆಳ । ಬಂದುಗಣಿಸಲು ಪೇಳಿದಷ್ಟಿರೆ ।
ನಿಂದ ಜನಪನಿಗೆರಗಿ ಪೇಳ್ದವಿನೀತ ಭಾವದಲಿ ॥ ೨ ॥

॥ **ನವರೋಜು ಏಕ** ॥

೧೫೦. ಭೂರಮಣಾ ಅವಧರಿಸು । ಮಮ । ಕೋರಿಕೆಯೊಂದಿದೆ ಸಲಿಸು ॥
ಈ ರೀತಿಯ ಗಣಿತದ ಕೌಶಲ್ಯಕೆ । ಮಾರುಹೋದೆನದ ತಿಳಿಯಲು ಆಶಿಪೆ ॥ ೧ ॥

೧೫೧. ದ್ಯೂತದಲಿ ಗಣಿತದಲಿ । ಬಲು ಚಾತುರತೆ ಎರಡರಲಿ ॥
ನಾ ತಿಳಿದಿಹೆ ನಿನಗುಸುರುವೆನೆನ್ನುತ । ಪ್ರೀತಿಯಿಂದ ಉಪದೇಶಿಸಿದನು ನೃಪ ॥ ೨ ॥

॥ **ಭಾಮಿನಿ** ॥ **ಅರ್ಧ** ॥

೧೫೨. ರಾಯ ಅಕ್ಷರಹಸ್ಯ ಬಾಹುಕ । ಗೀಯೆ ತಾನುಪದೇಶ ಕ್ರಮದಲಿ ।
ಕಾಯದಿಂದಲಿ ಜಿಗಿದು ಕಲಿಹೊರಬಂದು ಪೇಳೀದನು ॥

॥ **ಕಾಂಭೋದಿ ತ್ರಿವುಡೆ** ॥

೧೫೩. ಅವಧರಿಪುದು ಭೂನಾಥ । ನಾನಾರೆಂಬ । ವಿವರ ಪೇಳುವೆನು ಖ್ಯಾತ ॥
ದಿವಿಜರಿಗೆ ಪರಿಣಯದ ಕಾಲದಿ । ಅವಗಡಿಸಿದಪಮಾನಕೋಸುಗ ।
ತವ ಶರೀರವ ಪೊಕ್ಕುಕಾಡಿದೆ । ದಿವ ಇರುಳು ಎಡಬಿಡದೆ ನಿನ್ನನು ॥೧॥

೧೫೪. ದಯಮಯಂತಿ ಶಾಪದಿಂದ । ಕಾರ್ಕೋಟನ । ತಮರೂಪ ಗರಳದಿಂದ ॥
ಅಮಿತ ಸಂಕಟ ಪಟ್ಟೆನೈಭೂ । ರಮಣ ಎನ್ನನು ಕ್ಷಮಿಸೆನುತ ನಿ ।
ರ್ಗಮಿಸಿ ತಾರೆಯ ಮರದೊಳಗಡಗಿದ । ಕ್ರಮವನೀಕ್ಷಿಸಿ ಪೊರಟರಲ್ಲಿಂ ॥ ೨ ॥

## ॥ ಸೌರಾಷ್ಟ್ರ ತ್ರಿವುಡೆ ॥

೧೫೫. ಕುಂಡಿನಾಪುರಕೈದ ನೃಪತಿಯ । ಕಂಡು ಭೀಮಕನುಪಚರಿಸಿ ಮುದ ।
ಗೊಂಡು ಕೇಳಿದ ಬರವಿದೇನೆನೆ । ಚಂಡ ಬಲನು ॥ ೧ ॥

೧೫೬. ನುಡಿಗೆ ಅಚ್ಚರಿಗೊಂಡನಾದರು । ಪೊಡವಿಪನು ತಾ ತೋರಗೊಡದೇ ।
ನುಡಿದ ಸೌಹಾರ್ದತೆಯ ಭೇಟಿಗೆ । ತಡೆಯು ಇಹುದೇ ॥ ೨ ॥

## ॥ ಭಾಮಿನಿ ॥

೧೫೭. ಜನಪ ಖುತುಪರ್ಣನಿಗೆ ಭೀಮಕ । ಸನುಮತದಿ ಬಿಡದಿಯನು ರಚಿಸುತ ।
ತನುವಿನಾಯಾಸವನು ಕಳೆಯಿರಿ ಎನುತ ಹೊರವಂಟ ॥
ವನಜಮುಖೀ ದಮಯಂತಿ ಕೇಶಿನಿ । ಎನುವ ಗೆಳತಿಯ ಕರೆಸಿ ಕೇಳ್ದಳು ।
ಇನಿಯನಿರವನು ತಿಳಿಯೆ ಗೈದಿಹ ಪರಿಗಳನ್ನು ॥ ೧ ॥

## ॥ ಕಾಂಭೋಧಿ ಝಂಪೆ ॥

೧೫೮. ನಡೆತಂದ ರಾಯನಿಗೆ ಸರ್ವಸಂಭಾರಗಳ । ಅಡುಗೆಗೆಂದಿತ್ತರಾದರೆಯು ।
ಕೊಡಲಿಲ್ಲ ನೀರು ಬೆಂಕಿಗಳನ್ನು ಪಾಕವನು । ನಡೆಸಿಹರೆ ಊಟವಾಗಿಹುದೇ
॥ ೧ ॥

೧೫೯. ಏನೆಂಬೆ ಅಚ್ಚರಿಯ ಸಂಬಾರಗಳನೆಲ್ಲಾ । ತಾನಡುವ ಪಾತ್ರೆಯಲ್ಲಿಟ್ಟು ॥
ಶಾನೆ ನೋಡಲು ಅಡುಗೆ ಸಿದ್ಧವಾದುದು ಉಂಡು । ಆ ನರೇಂದ್ರನು
ಸುಖದೊಳಿಹನು ॥ ೨ ॥

೧೬೦. ತನುಜತನುಜೆಯರನ್ನು ಬಾಹುಕನ ಬಳಿಗೆ ಆ । ಕ್ಷಣವೆ ನಾ ಕಳುಹಿರ್ಪೆನವರ॥
ಜನಪಕಣ್ಣೆತ್ತಿ ನೋಡಿಹನೆ ಮಾತಾಡಿಹನೆ । ಅನುಮಾನಿಸದೆ ಪೇಳು ಸಖಿಯೆ
॥ ೩ ॥

೧೬೧. ಮಕ್ಕಳೀರ್ವರ ಕಂಡು ಲಗುಬಗೆಯೊಳೈತಂದು । ಪಕ್ಕದಲ್ಲಿರಿಸಿಕೊಳ್ಳುತಲೆ ॥
ದುಃಖಒತ್ತರಿಸಿ ಬರೆ ಕಂಬನಿಯ ಹರಿಸುತ್ತ । ತೆಕ್ಕೆಗೊಪ್ಪಿಸಿಕೊಂಡರಮ್ಮ
॥ ೪ ॥

೧೬೨. ಸಿದ್ಧಪಡಿಸಿದ ಪಾಕದಲ್ಲಿ ತುಸುವಾದರೂ । ಕದ್ದುತರಬೇಕೆಂದೆನಲ್ಲ ॥
ಸಿದ್ಧಿಸಿತೆ ಕಾರ್ಯ ಅವನಾಗಿಯೇ ಇತ್ತನೆ । ಮೆದ್ದೆಯಾ ರುಚಿಹೇಗೆ ಇಹುದು
॥ ೫ ॥

೧೬೩. ಆತ ಹೊರಹೋಗಿರುವ ಸಮಯವನು ಸಾಧಿಸುತ । ಭೀತಮನದಿಂದ ಒಳಹೊಕ್ಕು ॥ ನಾತಂದಿರುವೆನಮ್ಮ ಇಗೊ ಎಂದು ನೀಡಲ್ಕೆ । ಆತಳೋದರಿ ಮೆಲ್ಲೆ ಸವಿಯ ॥ ೬ ॥

॥ **ಭಾಮಿನಿ ಅರ್ಧ** ॥

೧೬೪. ಮನದ ಸಂಶಯ ದೂರವಾಗಲು । ಜನಕನನುಮತಿ ಪಡೆದು ಶೀಘ್ರದಿ । ಇನಿಯನನು ಅಂತಃಪುರಕೆ ತಾ ಕರೆಸಿ ಪೇಳಿದಳು ॥

॥ **ಕೇದಾರಗೌಳ ಅಷ್ಟ** ॥

೧೬೫. ಕುರುಹುಗಳಿಂದ ನಾನರಿತೆ ಎನ್ನಯ ಪ್ರಾಣ । ದರಸ ನೀವೆಂಬುದನು ॥ ಕರಪಿಡಿದಾಕೆಯ ಕಾನನ ಮಧ್ಯದಿ । ತೊರೆದುದು ಧರ್ಮವೇನು ॥ ೧ ॥

೧೬೬. ಕಲಿಯೆನ್ನನಾವರಿಸಿರ್ದ ಕಾರಣದಿಂದ । ಗೆಲಿದ ರಾಜ್ಯವ ಪುಷ್ಕರ ॥ ಲಲನೆಯ ತೊರೆವಂಥ ಮತಿಹೀನತೆಯು ಆತ । ನಿಲುವಿಕೆಯಿಂದಲಾಯ್ತು ॥ ೨ ॥

೧೬೭. ಸದಯಳೆ ಮತಿವಂತೆಯಾಗಿರ್ದ ನೀ ಮರು । ಮದುವೆಗೆ ಒಪ್ಪಿದುದು ॥ ಹೃದಯ ಹಿಂಡುತಲಿದೆ ದ್ರೋಹವಲ್ಲವೆ ಹೇಳು । ಇದಕೇನು ಕಾರಣವು ॥ ೩ ॥

೧೬೮. ಪರ್ಣಾದ ನಿಮ್ಮಯ ಇರವ ತಿಳಿಯೆ ಋತು । ಪರ್ಣನಲ್ಲಿಗೆ ಬಂದಾಗ ॥ ನಿರ್ಣಯವಾಯ್ತು ಕರೆಸಲಿಕೆ ಉಪಾಯ ಅ । ಪರ್ಣೆಯು ಎನಗಿತ್ತಳು ॥ ೪ ॥

೧೬೯. ಮದನನ ಧಿಕ್ಕರಿಸುವ ರೂಪವಂತರೀ । ವಿಧದಿ ವಿಕೃತರಾಗಲು ॥ ಹದನವೇನೆಂಬುದ ತಿಳಿಸಬೇಕೆನುತಲಿ । ಪದಕೆರಗಲು ಪೇಳ್ದನು ॥ ೫ ॥

೧೭೦. ಉರಗಪತಿಯು ಎನ್ನ ಕಡಿದು ಸರ್ವಾಂಗಕ್ಕೆ । ಗರಳ ಸೇರಿದುದರಿಂದ ॥ ನರರು ಹೇಸುವ ರೂಪಬಂತು ಈ ಕ್ಷಣ ಮುನ್ನ । ತೆರನಂತೆ ಕಾಣಲಿಹೆ ॥ ೬ ॥

॥ ಭಾಮಿನಿ ॥

೧೭೧. ಉರಗಪತಿ ತಾನಿತ್ತ ದಿವ್ಯಾಂ । ಬರವ ಧರಿಸಲು ನಳನು ಮೊದಲಿನ ।
ಪರಿಯೊಳೆಸೆದನು ಕಂಡು ವಿಸ್ಮಯಗೊಂಡು ದಮಯಂತಿ ॥
ವಿರಹದುರಿಯನು ಮರೆತು ಸಂತಸ । ಭರಿತಳಾಗುತ ತನ್ನ ಪತಿಯನು ।
ಎರಡು ಬಾಹುಗಳಿಂದಲಪ್ಪುತ ಪುಳಕಹೊಂದಿರಲು ॥ ೧ ॥

॥ ಸಾಂಗತ್ಯ ರೂಪಕ ॥

೧೭೨. ಇತ್ತಲೀವಾರ್ತೆಯನರಿತು ಭೀಮಕ ತನ್ನ । ಪತ್ನಿ ಪೌತ್ರರ ಕೂಡಿ ಬಂದು ॥
ಹೊತ್ತ ಸಂತೋಷದಿ ಅಳಿಯ ಮಗಳ ಹರ । ಸುತ್ತನಿಂದನು ಏನನೆಂಬೆ
॥ ೧ ॥

೧೭೩. ಋತುಪರ್ಣನೀವಾರ್ತೆಯನು ಕೇಳಿ ನಡೆತಂದು । ಅತಿ ವಿನಯದಿ ಕೈಯ್ಯಮುಗಿದು ॥ ಮತಿವಂತ ನಿನ್ನ ಸೇವಕನಂತೆ ದುಡಿಸಿದೆ । ಕೃತದೋಷವಾಯ್ತು ಕ್ಷಮಿಸೆನಲು ॥ ೨ ॥

೧೭೪. ನಿನ್ನಿಂದ ಅಪರಾಧವಾಗಿಲ್ಲಯಾವತ್ತೂ । ಮುನ್ನಿನಂದದಿ ನಾವು ಇಹುದು ॥
ಇನ್ನು ನಾನರಿತ ಅಶ್ವದ ಹೃದಯವ ನೀವೆ । ಎನ್ನುತ್ತ ಉಪದೇಶಿಸಿದನು
॥ ೩॥

॥ ಭಾಮಿನಿ ॥

೧೭೫. ಗೆಳೆಯನನು ಬೀಳ್ಕೊಂಡು ನಳನೃಪ । ಲಲನೆಮಕ್ಕಳಕೂಡಿಕೊಳ್ಳುತ ।
ಘಳಿಲನೈದುತಪುರಕೆ ಸೋದರ ಪುಷ್ಕರನ ಕಂಡು ॥
ಗೆಲಿದು ಸಾಮ್ರಾಜ್ಯವನು ದ್ಯೂತದಿ । ಬಳಿಕ ವಿಷ್ಟರವೇರಿ ಪ್ರಜೆಗಳ ।
ಒಲವ ಗಳಿಸುತ ರಾಜ್ಯವಾಳ್ದನು ಸುರರು ಛೇಯೆನಲು ॥ ೧ ॥

॥ **ಮಂಗಳ** ॥ **( ಆನಂದ ಆಹೇರಿ ಝಂಪೆ)**

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥
ಕಮಲದಳಲೋಚನಗೆ । ಕಮಲಜನತಾತನಿಗೆ । ಕಮನೀಯಗಾತ್ರಮುನಿ
ಜನಸ್ತೋತ್ರಗೆ ॥ ವಿಮಲಗುಣಭರಿತನಿಗೆ । ರಮೆಯರಸ ಶ್ರೀಹರಿಗೆ ।
ಅಮಿತಕಾರುಣ್ಯನಿಧಿ ಸ್ತುತಿಪಾತ್ರಗೆ ॥ ೧ ॥

****ಸಮಾಪ್ತ****

# ಗಂಗಶಾಪ

## ಪಾತ್ರ ಪರಿಚಯ

೧. ಧರ್ಮರಾಯ – ಹಸ್ತನಾವತಿ ಅರಸ
೨. ಅರ್ಜುನ
೩. ಪ್ರದ್ಯುಮ್ನ
೪. ನೀಲಧ್ವಜ – ಮಾಹಿಸ್ಮತಿ ಅರಸ
೫. ಪ್ರವೀರ – ನೀಲಧ್ವಜನ ಮಗ
೬ ಅಗ್ನಿ
೭ ಉನ್ಮುಖ – ಜ್ವಾಲೆಯ ತಮ್ಮ
೮. ಜ್ವಾಲಾ – ನೀಲಧ್ವಜನ ಹೆಂಡತಿ
೯. ಗಂಗೆ
೧೦. ನಾವಿಕ
೧೧. ಮದನಮಂಜರಿ – ಪ್ರವೀರನ ಹೆಂಡತಿ

# ಗಂಗಶಾಪ
## ॥ ನಾಂದಿ (ಭಾಮಿನಿ) ॥

ಮೊದಲಪೂಜೆಯಗೊಂಬ ಬೆನಕನ । ಪದಯುಗವ ಧ್ಯಾನಿಸುತ ಭಕ್ತಿಯೊಳ್ ।
ಪದುಮ ಸಂಭವ ಮುಖ್ಯಸುರತಿಂಥಿಣಿಯ ಸಂಸ್ತುತಿಸಿ ॥
ಸದಮಲಜ್ಞಾನವನು ಕರುಣಿಸೆ । ವಿಧುವದನೆ ಭಾರತಿಯ ಬೇಡುತ ।
ಮುದದೊಳುಸುರುವೆ ಯಕ್ಷಗಾನದೊಳೀ ಕಥಾಮೃತವಾ ॥ ೧ ॥

### ॥ ಕಾಂಬೋಧಿ ಝಂಪೆ ॥

೧. ಕೇಳು ಜನಮೇಜಯಮಹೀಪಾಲ ಧರ್ಮಜನು । ಕೇಳಿ ವಿವರವ ವ್ಯಾಸರಿಂದ ॥ ವ್ಯಾಳಶಯನನ ಅಪ್ಪಣೆಯ ಪಡೆದು ಹಯಮೇಧ । ಕಾಲೋಚನೆಯಗೈದು ಬಳಿಕ ॥ ೧ ॥

೨. ಯೌವನಾಶ್ವನ ಗೆಲ್ದು ಯಾಗದಶ್ವವ ತಂದು । ಅವನಿಸುರರಿಟ್ಟಧನಕನಕ ॥ ತವಕದಲಿ ತರಿಸುತ್ತ ಶುಭಮುಹೂರ್ತವ ತಿಳಿದು । ಜವನಣುಗ ವ್ರತದಿತಾನಿಂದು ॥ ೨ ॥

೩. ತುರಗವನು ಸಿಂಗರಿಸಿ ಪಣೆಲಿಖಿತವನು ಬರೆಸಿ । ನೆರಹುತಲಿ ಸೈನ್ಯಸಾಗರವ ॥ ಧರೆಯ ದಿಗ್ವಿಜಯಕ್ಕೆ ನರಗೆ ನೇಮವನಿತ್ತು । ಧರೆಯಾಣ್ಮ ಕಳುಹಿಸಿದನಂದು ॥ ೩ ॥

### ॥ ಸೌರಾಷ್ಟ್ರ ತ್ರಿವುಡೆ ॥

೪. ಅರಸ ನೀಲಧ್ವಜ ಕುಮಾರನು । ಭರಿತ ಶೂರ ಪ್ರವೀರ ತನ್ನಯ । ಪುರದ ಪುಣ್ಯವ ನೆನೆದು ಮನದಲೆ । ಒರೆದನಿಂತು ॥ ೧ ॥

೫. ಯಾವಜನ್ಮದ ಪುಣ್ಯಫಲವೋ । ಪಾವಕನು ಮನೆಯಾಳಿಯನಾಗುತ । ಕಾವನೆನುತಿರೆ ಬಂದು ನಮಿಸ । ಲ್ಕಾವನಿತೆಯು ॥ ೨ ॥

೬ ಏನು ಬಂದ್ಯೆ ರಮಣಿ ಮನದಲಿ । ಏನೊ ಭಾವನೆ ತಳೆದ ಕಾರಣ । ಆನನದಿ ಕಾಣುತಿದೆ ಕಾತರ । ಮಾಣದುಸುರು ॥ ೩ ॥

॥ **ಸುರಟಿ ಏಕ** ॥

೭ ಮನವ ಅರಿತನಲ್ಲಾ । ಪೇಳುವೆ । ಮನದ ಬಯಕೆ ಎಲ್ಲಾ ॥ ದಿನವಿಡಿ ನಮ್ಮುಪ । ವನದೆಡೆ ವಿಹರಿಸಿ । ಮನಸಿನ ಬೇಸರ । ವನು ಕಳೆಯುವ ಮನ ॥ ೧ ॥

೮. ನಿನ್ನ ಮನದ ಬಯಕೆ । ಇಂತಿರೆ । ಇನ್ನು ತಡವದೇಕೆ ॥ ಕನ್ನೆಯರೊಂದಿಗೆ । ಸನ್ನಹಗೊಳುತಲಿ । ಮುನ್ನ ನೀತೆರಳುವು । ದೆನ್ನಲು ಪೇಳ್ದಳು ॥ ೨ ॥

೯. ಬಾರದಿರಲು ನೀವು । ಮನಸಿಗೆ । ತೋರದಿರದು ನೋವು ॥ ಭಾರಿ ವಿನೋದ ವಿ । ಹಾರ ಗೈವುದೆನೆ । ವೀರತಾನೊಪ್ಪಲು । ಸೇರಿ ಮುನ್ನಡೆದರು ॥ ೩ ॥

॥ **ಭಾಮಿನಿ** ॥

೧೦. ಕೊಳದಿ ಬಹುವಿಧದಿಂದ ವಿಹರಿಸಿ । ನಳಿನ ಮುಖಿಯರು ತಣಿದುದಡದಲಿ । ಕಳೆದ ಶಾಲೆಯನುಟ್ಟು ಪೊರಟರು ವನದಿ ವಿಹರಿಸಲು ॥
ಥಳಥಳಿಪ ಬಂಗಾರ ವರ್ಣದಿ । ಹೊಳೆವ ತುರಗವ ಕಂಡು ವಿಸ್ಮಯ ।
ತಳೆದು ಪೇಳ್ದಳು ಮದನ ಮಂಜರಿ ತನ್ನ ಸಖಿಯರಲಿ ॥ ೧ ॥

॥ **ಕಲ್ಯಾಣಿ ರೂಪಕ** ॥

೧೧. ಅತ್ತ ನೋಡೆ ಸಖಿಯೆ ಸೊಗಸವೆತ್ತ ಹಯವನು ।
ಮುತ್ತಿನಂತೆ ಹೊಳೆವ ನೀಲಚ್ಛವಿಯ ಮೈಯನು ॥
ಮತ್ತೆ ಪೀತಪುಚ್ಛ ಏಕ ಕರ್ಣ ವಿಸ್ಮಯ ।
ಮೆತ್ತಿಸಿಹರು ಫಲಕನೊಳ್ಪೆ ಬರೆದ ಬರಹವ ॥ ೧ ॥

೧೨. ಕರಿಯಪುರದ ದೊರೆಯ ಯಜ್ಞತುರಗ ಇದರನು ।
ಧುರ ಸಮರ್ಥರೆಂದು ಬಗೆದು ಕಟ್ಟಲವರನು ॥
ನರನುಗೆಲ್ದು ಕಪ್ಪಪಡೆವ ಬಲವಿಹೀನರು ।
ತೆರಲು ಕಪ್ಪ ಪಡೆಯಗೂಡಿ ಮುಂದೆ ನಡೆವರು ॥ ೨ ॥

॥ ಭಾಮಿನಿ ಅರ್ಧ ॥

೧೩. ಗೆಳತಿಯರ ತಾನುಳಿದು ಪತಿಗಿದ । ತಿಳುಹುವೆನು ಎನುತೈದಿ ವಂದಿಸಿ । ಲಲನೆ ತಾನು ಸುರಿದಳು ನರನಗ್ಗಳಿಕೆಯನು ನಗುತ ॥

॥ ಮಧು ಮಾಧವಿ ತ್ರಿವುಡೆ ॥

೧೪. ಮೂರು ಲೋಕದ ವಿಜಯನೆನ್ನುವ । ಕೀರುತಿಯ ಹೊಂದಿರುವ ಪಾರ್ಥನು । ಸಾರಿ ಬಂದಿಹ ತುರಗದೊಂದಿಗೆ । ಗಾರುಗೆಡಿಸಲು ಅರಿಗಳ ಧುರುಮುಖದಲಿ ॥ ೧ ॥

೧೫. ಹೆತ್ತ ಕುಂತಿಯು ಧನ್ಯಳಾದಳು । ಪತ್ನಿಯರು ಸಂಭ್ರಮಿಸದಿರುವರೆ । ಮತ್ತೆ ಯಾಗದ ಕುದುರೆ ಬಂಧಿಪ । ಯತ್ನವಿಹುದೆ ನಿಮ್ಮಲಿ । ಎನಲಿಕವಳು ॥೨॥

೧೬. ಕೇಳಿ ಕಣ್ಣಲಿ ಕಿಡಿಯನುಗುಳುತ । ಹೇಳಿದನು ಸತಿಯಲಿ ಪ್ರವೀರನು । ತೋಳಬಲವನು ಕೆಣಕುತಿಹೆಯಾ । ಚಾಳಿಸುತ ಪುರುಷತ್ವವ । ಎನುತ ಬಳಿಕ ॥ ೩ ॥

೧೭. ಕಟ್ಟಿ ಕುದುರೆಯ ಎನ್ನ ಪೌರುಷ । ಕೃಷ್ಣಮಿತ್ರಗೆ ತೋರಿಕೊಡುವೆನು । ದಿಟ್ಟಿಪುದು ಎನ್ನುರು ಪರಾಕ್ರಮ । ಎಷ್ಟು ಎಂಬುದ ತೋರ್ಪೆನು ॥ ರಣಮುಖದಲಿ ॥ ೪ ॥

೧೮. ತುರಗವನು ಬಂಧಿಸುತ ರಾಣಿಯ । ಪುರಕೆ ಕಳುಹಿಸಿ ಯಾಗದಶ್ವದ । ಪರಿಯಪಿತನಿಗೆ ಒರೆಯಲೆನ್ನುತ । ಭರದಿ ಪೊರಟ ಪ್ರವೀರನು ॥ ಪಿತನ ಬಳಿಗೆ ॥ ೫ ॥

॥ ಕೇದಾರಗೌಳ ಅಷ್ಟ ॥

೧೯. ದೊರೆ ನೀಲಕೇತ ತಾನತಿ ಸಂಭ್ರಮದಿ ತನ್ನ । ಪರಿವಾರ ಒಡಗೂಡುತ ॥ ನೆರಹಿ ಓಲಗದಲ್ಲಿ ಕುಳ್ಳಿರೆ ಸೂನು ಬಂ । ದೆರಗೆ ತಳ್ಕಿಸುತೆಂದನು ॥ ೧ ॥

೨೦. ಕಂದ ಏನಿದು ಬಲು ಕಾತರಗೊಳುತಲಿ । ಬಂದಿಹೆ ಒದಗಿರುವ । ಕುಂದುಕೊರತೆಯಿರೆ ಪೇಳೆನೆ ಕೈಮುಗಿ । ದೆಂದನು ಪಿತನೊಡನೆ ॥ ೨ ॥

॥ ಸೌರಾಷ್ಟ್ರ ಅಷ್ಟ ॥

೨೧. ಕರಿಪುರದರಸನ ಯಾಗದ ವಾಜಿಯು । ತಂದೆ ಕೇಳು । ನಮ್ಮ । ಪುರಕಾಗಿ ಬಂದುದ ತಿಳಿದು ನಾ ತೆರಳಿದೆ । ತಂದೆ ಕೇಳು ॥ ಧುರಪರಾಕ್ರಮಿಗಳು ಕಟ್ಟಿಕಾದುವುದಂತೆ । ತಂದೆ ಕೇಳು ॥ ಶೌರ್ಯ । ವಿರದಿರೆ ಕಪ್ಪವನಿತ್ತು ಸೇರುವುದಂತೆ ತಂದೆ ಕೇಳು ॥ ೧ ॥

೨೨. ವೀರತನವು ಪಾಂಡವರಿಗೆ ಮೀ । ಸಲಿಕೇನು । ತಂದೆ ಕೇಳು ॥ ನಮ್ಮ । ಪೌರುಷವನು ಜಗತಿಗೆ ತೋರಬೇಕಿದೆ । ತಂದೆ ಕೇಳು ॥ ಹೋರುವ ಬಗೆಗಾಗಿ ತುರಗ ಬಂಧಿಸಿದೆನು । ಇನ್ನುಮುಂದೆ ॥ ರಣ ॥ ಧಾರಿಣಿಯಲಿ ಕಾದಾಡಲಿಕೆ ಅಪ್ಪಣೆ ನೀಡಿ । ಹರಸಿ ತಂದೆ ॥ ೨ ॥

॥ ಮಾರವಿ ಏಕ ॥

೨೩. ಕಂದನ ನುಡಿಯನು ಲಾಲಿಸಿ ಧರಣಿಪ । ನೆಂದನು ಕುವರನಲಿ । ಬಂದಿಹ ತುರಗವ ಬಂಧಿಸಿರುವ ಪರಿ । ಚೆಂದವಾಯ್ತು ಮಗನೇ ॥ ೧ ॥

೨೪. ಕರಿರಥ ತುರಗವ ವರಪದಾತಿದಳ । ನೆರಹುತ ಶೀಘ್ರದಲಿ ॥ ನರನ ಸೇನೆಯನು ಇದಿರಿಸಲೆನ್ನುತ । ಹರಸಿ ಕಳುಹೆ ಬಳಿಕ ॥ ೨ ॥

೨೫. ಜನಕನಪ್ಪಣೆಯ ಪಡೆದು ಪ್ರವೀರನು । ಘನವೇಗದಿ ಪೊರಟ ॥ ಅನುವರಕಿದಿರಾಗುತ ಪ್ರದ್ಯುಮ್ನನ । ಕೆಣಕುತಲಿಂತೆಂದಾ ॥ ೩ ॥

॥ ಶಂಕರಾಭರಣ ಮಟ್ಟೆ ॥

೨೬. ತುರಗಮೇಧ ನೆವನದಿಂದ । ಪರಿಕಿಸಲ್ಕೆ ನಮ್ಮ ಬಲವ ।
ಧುರಕೆ ಬಂದ ವೀರನಾರು । ಪರಿಯ ಪೇಳೆಲಾ ॥ ೧ ॥

೨೭. ಕೇಳಿ ಬಲ್ಲೆಯೇನು ಹರಿಯ । ಬಾಲ ಮೀನಕೇತ ಸೈನ್ಯ ।
ಜಾಲಕೊಡೆಯ ಕಪ್ಪವಿತ್ತು । ಕಾಲಿಗೆರಗೆಲಾ ॥ ೨ ॥

೨೮. ವೀರತನವು ನಿಮ್ಮ ಬಗೆಗೆ । ಮಾರಿಹೋಯಿತೇನು ರಣದಿ ।
ತೋರಲಿಹೆನು ಎನುತ ಬಾಣ । ತೂರಲಾಕ್ಷಣ ॥ ೩ ॥

೨೯. ಎಳೆಯನೆಂದು ಕೈಯ್ಯ ತಡೆದೆ । ತಿಳಿಯದಾದೆ ನಮ್ಮ ಗುಣವ ।
ಕೊಳುಗುಳಕ್ಕೆ ನಿಲ್ಲೆನುತ್ತ । ಹಿಳಕನೆಸೆಯಲು ॥ ೪ ॥

॥ ಭಾಮಿನಿ ॥ ಅರ್ಧ ॥

೩೦. ಬಾಲ ಸಮರದಿ ಬಸವಳಿದ ಪರಿ । ಕೇಳಿ ನೀಲಧ್ವಜನು ಸೈನಿಕ ।
ಜಾಲದೊಂದಿಗೆ ನರನ ತಡೆಯುತಲೆಂದ ಗರ್ಜಿಸುತ ॥

॥ ಭೈರವಿ ಅಷ್ಟ ॥

೩೧. ಮೂರು ಲೋಕದ ಗಂಡನು । ತಾನೆನ್ನುವ । ಕೀರುತಿ ಪಡೆದಾತನು ॥
ಹೋರಾಟದಲಿ ನಿನ್ನ ಪೌರುಷವೇನೆಂದು । ತೋರಿಸಿಕೊಡುವೆನಿಂದು ॥೧॥

೩೨. ಹರನ ಧುರದಿ ಮೆಚ್ಚಿಸಿ । ಪಾಶುಪತಾಸ್ತ್ರ । ಶರವ ಪಡೆದ ಸಾಹಸಿ ॥
ಬರಿದೆ ಬಾಯ್ದಂಭವನೊರೆಯದೆ ಕಪ್ಪವ । ನಿರಿಸಿ ಹಯವ ಒಪ್ಪಿಸು ॥ ೨ ॥

೩೩. ಕುದುರೆಯ ಕಟ್ಟಿಹೆವು । ಸೇನೆಯಕೂಡಿ । ಕದನಕೆ ನಿಂದಿಹೆವು ॥
ಇದಿರಾದ ನಮ್ಮಲ್ಲಿ ಕದನವ ನೀಡದೆ । ಬದಲಾಡಲೇತಕಯ್ಯ ॥ ೩ ॥

೩೪. ಸಾರಿಕೊಲ್ಲುವ ಧರ್ಮವು । ಕ್ಷತ್ರಿಯರಿಗೆ । ಸೇರಿ ಬಂದಿಹ ನ್ಯಾಯವು ॥
ಮೀರಿ ಮುಂದರಿದರೆ ಕೆಡುವೆ ಎನ್ನುತ ಶರ । ಜಾಲವ ತೂರಿದನು ॥ ೪ ॥

॥ ಭಾಮಿನಿ ಅರ್ಧ ॥

೩೫. ರಣದಿ ನೀಲಧ್ವಜನು ಸೋಲ । ನ್ನನುಭವಿಸಿ ತನ್ನಳಿಯನಲ್ಲಿಗೆ ।
ಅನುಚರರನಟ್ಟಲ್ಕೆ ದೂರಿದರವರು ಪಾವಕಗೆ ॥

॥ ಮಾರವಿ ಏಕ ॥

೩೬. ಪುರರಕ್ಷೆಗೆ ನಾನಿರುವುದನರಿಯುತ । ನರನೀ ತೆರದಿಂದ ॥
ಗರುವದಿ ಮುಂದರಿಯುತ ಮಾತುಳನನು । ಪರಿಭವಗೊಳಿಸಿದನೇ ॥೧ ॥

೩೭. ಕೊಡಲಿಯ ಕಾವೇ ವೃಕ್ಷಕೆ ಮೃತ್ಯುವ । ಕೊಡುವಂತಾಯಿತಲಾ ॥
ಪಡೆಯುತ ನನ್ನಿಂದಲೆ ಧನುಶರಗಳ । ಕೆಡಕನು ಗೈದನಲಾ ॥ ೨ ॥

೩೮. ಸುಟ್ಟುರುಹುವೆ ನಾತನ ಬಲವೆನ್ನುತ । ಸಿಟ್ಟಿಲಿ ಹೊರವಂಟ ॥
ಕೃಷ್ಣಮೈದುನನ ಬಲಸಾಗರವನು । ಸುಟ್ಟುರುಹುತ ನಡೆದಾ ॥ ೩ ॥

॥ **ಸಾಂಗತ್ಯ ರೂಪಕ** ॥

೩೯. ಚತುರಂಗ ಸೈನ್ಯಸಾಗರವನ್ನು ದಹಿಸುವ । ಹುತವಾಹನನ ಜ್ವಾಲೆಯಿಂದ ॥
ಗತವೀರ್ಯನಾಗಿ ಧನಂಜಯ ವಿನಯದಿ । ನುತಿಸಿದ ಪಾವಕನನ್ನು ॥೧॥

೪೦. ಹಿಂದೆ ನಾ ನಿನಗಾಗಿ ಖಾಂಡವ ದಹಿಸಿದೆ । ತಂದೆ ನೀನಿತ್ತೆ ಧನುಶರವ ॥
ಅಂದು ನಿನ್ನಲ್ಲಿಯೆ ಉದಿಸಿದ ದ್ರುಪಜೆ । ಹೊಂದಿದ ಮಡದಿ ನನಗಲ್ತೆ ॥೨॥

೪೧. ಮುನಿವುದು ತರವೆ ಜಾಮಾತನ ಮೇಲಿನ್ನು । ಮನದಿ ನೀ ಯೋಚಿಸಿ ನೋಡು ॥ ಎನಲು ಅಗ್ನಿಯು ನಿಜವರಿತು ಸಂತಸಗೊಂಡು । ತಣಿಸಿದ ತನ್ನ ಜ್ವಾಲೆಯನು ॥ ೩ ॥

೪೨. ಮಾವನ ಕರೆದೆಂದ ಹರಿಭಕ್ತರೊಂದಿಗೆ । ಯಾವತ್ತು ಕಲಹವು ಸಲ್ಲ ॥
ಈವುದು ಕಪ್ಪಕಾಣಿಕೆಯೆಂದು ಪೇಳಲ್ಕೆ । ಭೂವರೇಣ್ಯನು ಸಮ್ಮತಿಸಿದ ॥೪॥

॥ **ಸೌರಾಷ್ಟ್ರ ತ್ರಿವುಡೆ** ॥

೪೩. ನರಗೆ ಹಯ ಕಪ್ಪವನು ಒಪ್ಪಿಸಿ । ಶರಣನಾಗುವ ವಾರ್ತೆ ತಿಳಿಯುತ ।
ಕೆರಳಿಯಾತನ ಮಡದಿ ಜ್ವಾಲೆಯು । ಒರೆದಳಿಂತು ॥ ೧ ॥

೪೪. ಅರಿಗೆ ಶರಣಾಗುತ್ತ ಬಾಳುವ । ದೊರೆತನವು ಸ್ಥಿರವಹುದೆ ಹೇಡಿಯ ।
ತೆರದಿ ಬಾಳುವ ಬಾಳ್ವೆಗಿಂತಲು । ಮರಣ ಲೇಸು ॥ ೨॥

೪೫. ಶರಧಿಗಾದರು ಏರಿಳಿತಗಳು । ಬರಲಹುದು ನೀವ್ ಸೈನ್ಯ ನೆರಹುತ ।
ಮರಳಿ ಕಾಳಗವಿತ್ತು ಮೆರೆವುದು । ಪುರುಷತನವ ॥ ೩ ॥

೪೬. ಮಾತೆಯಾಡಿದ ನುಡಿಗೆ ಒಪ್ಪುತ । ತಾತನಿಂದಪ್ಪಣೆಯ ಪಡೆಯುತ ।
ಜಾತನಾದ ಪ್ರವೀರ ಸೈನ್ಯ । ವ್ರಾತಕೂಡಿ ॥ ೪ ॥

೪೭. ನರನ ಸೇನೆಯ ಸವರುತ್ತೈದಲು । ಮರಳಿ ಧುರಸಂಭವಿಸಿತೇ ಎಂ । ದರಿ
ಭಯಂಕರ ಪಾರ್ಥ ತಡೆಯುತ । ಒರೆದ ನಿಂತು ॥ ೫ ॥

॥ **ಕೇದಾರಗೌಳ ಝಂಪೆ** ॥

೪೮. ಸೋತು ಹಿಮ್ಮೆಟ್ಟಿದಾತ । ಬರಿದೇಕೆ । ಈ ತೆರದಿ ಸಾವೆ ವ್ಯರ್ಥ ॥
ನೀ ತೆರಳು ಬಂದಹಾಗೆ । ಛಲವಿರಲು । ತಾತನನು ಕಳುಹು ಮೇಗೆ ॥ ೧॥

೪೯. ಹಿಂದೆ ಸೋತವರು ಮರಳಿ । ಜಯವಧುವ । ಹೊಂದರೇ ರಣಕೆ ತೆರಳಿ॥
ನಿಂದಿಸದೆ ಸಮರ ನೀಡು । ನಿನ್ನ ಬಲ । ಕುಂದಿಸದೆ ಬಿಡೆನು ನೋಡು
॥ ೨ ॥

೫೦. ಎಳೆಯನನು ಕೊಲಲಾಗದು । ಎಂದೆನುತ । ತಿಳುಹಿದೆನು ಹಿತವಾಗದು ॥
ನಿಲು ಸಮರಕೆನುತ ಪಾರ್ಥ । ಕ್ರೂರವಹ । ಹಿಳುಕ ತಾನೆಸೆಯಲತ್ತ ॥೩॥

॥ **ಭಾಮಿನಿ** ॥

೫೧. ನರನ ಕೂರಂಬುಗಳು ತರಳನ । ಕೊರಳರಿಯೆ ಮೃತಿಗೈದವನತ್ತಲು ।
ಹರಿದುದೀ ವಾರ್ತೆಯನು ಕೇಳುತ ನೃಪತಿ ಶೋಕದಲಿ ॥
ಮರುಗಿದನು ತನಗೀ ಅವಸ್ಥೆಯ । ತರಿಸಿರುವ ಸತಿಯಲ್ಲಿ ಕೋಪಿಸಿ ।
ಹಿರಿದು ಖಡ್ಗವ ನೆಗಹಿ ಝಳಪಿಸುತೆಂದ ಗರ್ಜಿಸುತ ॥ ೧ ॥

॥ **ಸೌರಾಷ್ಟ್ರ ತ್ರಿವುಡೆ** ॥

೫೨. ಬಲವ ಕೊಲಿಸಿದೆ ಪಾಪಿ ಕಂದನ । ಕೊಲೆಗೆ ಕಾರಣಳಾದೆ ಪುರದಲಿ ।
ಗಳಿಗೆ ನಿಲ್ಲದೆ ತೊಲಗು ಸುಮ್ಮನೆ । ಗಳಹದಿಂದು ॥ ೧ ॥

೫೩. ರಣದಿ ಮಡಿದರೆ ವೀರಸ್ವರ್ಗವು । ಅನುವರದಿ ವೈರಿಯನು ಕೊಲ್ಲುತ ।
ತನಯನಾತ್ಮಕೆ ಶಾಂತಿ ಈವುದು । ಎನಲು ಕೆರಳಿ ॥ ೨ ॥

೫೪. ಇಷ್ಟು ಸಾಲದೆ ಎನ್ನ ರಾಜ್ಯವ । ಕಷ್ಟದೆಡೆ ನೂಕುವೆಯಾ ಮೂರ್ಖಳೆ ।
ಭ್ರಷ್ಟ ಹೆಂಗಸೆ ತೊಲಗು ತೊಲಗೆನೆ । ಸೃಷ್ಟಿಪಾಲ ॥ ೩ ॥

೫೫. ಛಲವ ಬಿಡುವೆನೆ ಅನುಜನಲ್ಲಿಗೆ । ನಿಲದೆ ಪೋಗುವೆ ಸಮರ ಮುಖದಲಿ।
ಕೊಲಿಸದಿರೆ ನರನನ್ನು ಎನ್ನುತ । ಲಲನೆ ಪೊರಡೆ ॥ ೪ ॥

॥ **ಕಾಂಬೋಧಿ** ॥ **ಝಂಪೆ** ॥

೫೬. ಬಂದಳಾಕೆಯು ತನ್ನ ತವರು ಮನೆಯೆಡೆಗಾಗಿ । ಬಂಧುಗಳು ಕಾರಣವ ಕೇಳೆ ॥ ಒಂದು ಮಾತಾಡದೆಯೆ ಮೌನಮುದ್ರೆಯ ತಾಳಿ ॥ ನಿಂದಿರಲು ಉನ್ಮುಖನು ಕೇಳ್ದಾ ॥ ೧ ॥

೫೭. ಪತಿಗೃಹವ ತೊರೆದಿಂತು ಬಂದುದೇತಕೆ ಭಗಿನಿ । ಹಿತವಾಗಿ ತೋರದೀ ನಡತೆ ॥ ಪತಿಯ ಆಗ್ರಹಕೆ ತುತ್ತಾಗಿ ನಡೆತಂದೆಯಾ । ಕಥಿಸು ನಿಜವೃತ್ತಾಂತವನ್ನು ॥ ೨ ॥

೫೮. ಸೂರೆ ಹೋದುದು ತಮ್ಮ ರಾಜ್ಯಸಂಪದವೆಲ್ಲ । ಸಾರಿದನು ನರನು ಮಖ ನೆವದಿ ॥ ಹೋರಾಟದಲಿ ಎನ್ನ ಮಗನ ಕೊಲ್ಲುತ ಪತಿಯ । ಗಾರುಗೆಡಿಸಿದ ಸಮರಮುಖದಿ ॥ ೩ ॥

೫೯. ಧುರಪರಾಕ್ರಮಿ ತಮ್ಮ ನೀನಿರಲು ನನಗಿಂಥ । ದುರವಸ್ಥೆ ಬರಬಹುದೆ ಹೇಳು ॥ ಧುರದಿ ಆತನಕೊಂದು ಸೇಡತೀರಿಸು ಎಂದು । ಒರೆಯಲ್ಕೆ ಆತನಿಂತೆಂದಾ ॥ ೪ ॥

೬೦. ಮರುಳಾದೆ ಎಲೆ ಭಗಿನಿಯದುವರನ ಶ್ರೀರಕ್ಷೆ । ನರಗಿರಲು ಕೊಲುವ ಮಾತಿರಲಿ ॥ ಧುರದಿ ಸೋಲಿಸುವ ಸಾಹಸಿ ಜಗದೊಳಿಲ್ಲ ನಿಜ । ವರಿತ ನೀ ನಡೆ ಪತಿಯ ಗೃಹಕೆ ॥ ೫ ॥

೬೧. ಹಿಂದೆ ರಾವಣ ತಂಗಿ ಶೂರ್ಪನಖಿ ಮಾತಿಂದ । ಸಂದ ಪರಿ ಅರಿತಿರುವೆ ನಾನು ॥ ಇಂದೆ ಹೊರಡಿಲ್ಲಿಂದ ಎಂದು ಗರ್ಜಿಸೆ ಕೋಪ । ದಿಂದ ಮಗುಳೆಂದಳವನೊಡನೆ ॥ ೬ ॥

೬೨. ಗಂಡು ಮಗ ನೀನೆಂದು ಹೇಳಿದರೆ ಈ ರೀತಿ । ಭಂಡತನ ತೋರಿದೆಯಾ ಹೇಡಿ ॥ ದಿಂಡುಗೆಡದಿರೆ ನರನ ಹೆಣ್ಣಲ್ಲ ಎನುತಾಕೆ । ಕೆಂಡಕಾರುತ ಪೊರಟಳಂದು ॥ ೭ ॥

॥ ವಾರ್ಧಿಕ ॥

೬೩. ಅನುಜನಿಂದಾದ ಮುಖಭಂಗಕ್ಕೆ ನೋಯುತ್ತಾ । ತನಯನನು ನೆನೆನೆನೆದು ದುಗುಡದಲಿ ಬೇಯುತ್ತಾ । ಹನನಗೈದಾ ಪಾರ್ಥನಳಿವನ್ನೆ ಕಾಯುತ್ತಾ ಪುರದಿಂದ ಪೊರಮಟ್ಟಳು ॥
ತನಗಿನ್ನು ನೆಲೆಯಲ್ಲಿ ನೆರವೀವ ಜನರೆಲ್ಲಿ । ಎನುತಾಕೆ ಮುಂಬರಿದು ಬರುತಿರಲು ಮುಂದೆಸೆಯೋಳ್ । ಚಿನುಮಯನ ಸುತೆಗಂಗೆ ಸುತರಂಗೆ ಕಾಣಲ್ಕೆ ಮನದಿ ಯೋಚಿಸುತೆಂದಳು ॥ ೧ ॥

॥ ಸಾಂಗತ್ಯ ರೂಪಕ ॥

೬೪. ಶಾಪಾನುಗ್ರಹವೀವ ಶಕ್ತಿದಾಯಕಿ ಈಕೆ । ಕೋಪಗೊಂಡರೆ ಶಪಿಸದಿರಳು ॥ ಆ ಪರಂತಪ ಧನಂಜಯನಿಂಗೆ ಇವಳಿಂದ । ಶಾಪಹೊಂದುವ ಯತ್ನ ಮಾಳ್ಪೆ ॥ ೧ ॥

೬೫. ಯಾರಿಲ್ಲಿ ನದಿಯ ದಾಟಿಸುವವರೆಂದು ವಿ । ಚಾರಿಸುತಿರೆ ಓರ್ವಬಂದು ॥ ಏರಿರಿ ನಾವೆಯನೆನುತ ತಾ ಪೇಳಲ್ಕೆ । ನಾರಿ ಬಳಿಕೆಂದಳವನೊಡನೆ ॥೨॥

೬೬. ಬಿಂದು ವಾರಿಯು ಮೈಗೆ ತಾಕದಂದದಿ ಈಚೆ । ಯಿಂದ ಆದಡಕೆ ಸಾಗಿಪುದು ॥ ಎಂದೆನೆ ದಿಗ್ಭ್ರಮೆಗೊಂಡು ನಾವಿಕ ತಾನು । ವಂದಿಸುತಲಿ ಪೇಳ್ದನವಳ್ಗೆ ॥ ೩ ॥

೬೭. ಹರಿಯ ಪಾದದಿ ಹುಟ್ಟಿ ಹರನ ಜಡೆಯ ಸೇರಿ । ಹರಿದಳು ಭುವಿಗೆ ಪಾವನೆಯು ॥ ಹರಿವುದು ಸಕಲ ಪಾಪವು ಬಿಂದು ಜಲಬೀಳೆ । ಅರಿತವರು ಸುರ್ವರೆಂದೆನಲು ॥ ೪ ॥

೬೮. ಅಹುದು ನೀನೆಂದುದು ಪಾಪನಾಶಿನಿ ಈಕೆ । ಇಹುದೊಂದು ದೋಷ ಈಕೆಯಲಿ ॥ ಸಹಜದ ನುಡಿ ಆಕೆ ಬಂದು ತಾ ಕೇಳ್ದರೆ । ಗಹನ ವಿಚಾರ ಪೇಳುವೆನು ॥ ೫ ॥

೬೯. ನುಡಿಕೇಳಿ ಗಂಗೆಯು ಹೌಹಾರಿದಳು ತನ್ನ । ಕಡೆಗೆ ಬಂದಿಹ ದೋಷವನ್ನು ॥ ತಡೆಯದೆ ಪೇಳೆಂದು ಸ್ತ್ರೀರೂಪದಲಿ ಬಂದು । ನುಡಿಸಲ್ಕೆ ಜ್ವಾಲೆಪೇಳಿದಳು ॥ ೬ ॥

॥ ಕೇದಾರಗೌಳ ಅಷ್ಟ ॥

೭೦. ತನಯರಿಲ್ಲದ ಹೆಣ್ಣ ದೋಷಕಾರಿಣಿಯೆಂದು । ಜನರು ಪೇಳ್ವರು ಲೋಕದಿ ॥ ಇನಿತೊಂದು ಕಾರಣ ನಿನಗೆ ತಟ್ಟಿದೆ ದೋಷ । ಎನೆ ಗಂಗೆ ನುಡಿದಳಿಂತು ॥ ೧ ॥

೭೧. ಕಲಿಗಂಜದಿಹ ಪುತ್ರನೋರ್ವನಿಹನು ಕಾಣೆ । ಬಲು ಶೂರನಾದ ಭೀಷ್ಮ ॥ ಹೊಲಬನೀನರಿಯದೆ ಪೇಳಬಹುದೆ ಎನೆ । ನಳಿನಾಕ್ಷಸುತೆಗೆಂದಳು ॥ ೨ ॥

೭೨. ಅರಿತಿರ್ಪೆ ಭೀಷ್ಮನ ಭಾರತ ಯುದ್ಧದಿ । ನರನು ಕಪಟದಿಂದಲಿ ॥ ಇರಿದುಕೊಂದನು ಎನೆ ಹೌಹಾರಿ ಗಂಗೆಯು । ಉರಿಮಸಗುತಲೆಂದಳು ॥ ೩ ॥

೭೩. ಕೊಂದನೆ ಎನ್ನ ಕುಮಾರನ ಪಾರ್ಥನು । ಇಂದಿಗಾರನೆ ಮಾಸದಿ ॥ ಹೊಂದಿ ಹೋಗಲಿ ಸುತನಿಂದಲೆ ಎನ್ನುತ್ತ । ಮಂದಾಕಿನಿಯು ಅಡಗೆ ॥೪॥

॥ ಭಾಮಿನಿ ॥

೭೪. ಸುರನದಿಯ ಶಾಪದಲಿ ಪಾರ್ಥನು । ಮರಣಹೊಂದುವ ಮಾಸ ಆರಕೆ ।
ಇರಿದು ಕೊಲ್ಲುತ ಸೇಡತೀರಿಪೆನೆಂದು ಮಾನಿನಿಯು ॥
ಉರಿಗೆ ಹಾರುತ ಸರಳ ರೂಪದಿ । ನರನಸುತನಹ ಬಭ್ರುವಾಹನ ।
ಧರಿಸಿರುವ ಮೂಡಿಗೆಯ ಸೇರ್ದಳು ಛಲದಿ ಮಾನಿನಿಯು ॥ ೧ ॥

॥ ಮಂಗಲ ( ಆಹೇರಿ ಝಂಪೆ )

ಜಯ ಮಂಗಲಂ ನಿತ್ಯ ಶುಭಮಂಗಲಂ ॥ ಪ ॥

ನಿತ್ಯ ನಿರ್ಮಲನಿಂಗೆ ಸತ್ಯ ಸಂಕಲ್ಪಂಗೆ । ಗೋತ್ರಾರಿ ವಂದ್ಯ ಸ್ತುತ್ಯಾತ್ಮನಿಂಗೆ ॥
ಭಕ್ತವತ್ಸಲನಿಂಗೆ ಮುಕ್ತಿದಾಯಕನಿಂಗೆ । ಬತ್ತಲೇಶ್ವರವೇಣುಪಾಲಗೆ ॥ ೧ ॥

*****ಸಮಾಪ್ತ*****

# ಜಗನ್ನಾಥ ಲೀಲೆ

## ಪಾತ್ರ ಪರಿಚಯ

೧. ವಿಷ್ಣು
೨. ಲಕ್ಷ್ಮೀ
೩. ನಾರದ
೪. ಬ್ರಹ್ಮ
೫. ಋಷಿಗಳು
೬ ಇಂದ್ರದ್ಯುಮ್ನ –ಆವಂತಿ ಅರಸ
೭ ವಿದ್ಯಾಪತಿ – ಬ್ರಾಹ್ಮಣ
೮. ವಿಶ್ವಾವಸು – ಬೇಡ
೯. ಲಲಿತೆ – ಬೇಡ ಕನ್ಯೆ
೧೦. ಕುಂಭಕೇತ – ರಕ್ಕಸ
೧೧. ಗಾಲಮಾಧವ – ಮಾಳವದ ಅರಸ
೧೨. ಅನಂತ ಮಹರಾಣ – ಶಿಲ್ಪಿ
೧೩. ಭೂಸಂಧಿ –ಆವಂತಿಪುರ ವಾಸಿ
೧೪. ಗುಪ್ತಚರ – (ಮಾಳವ)
೧೫. ಮಂತ್ರಿ – ಆವಂತಿ)

# ಜಗನ್ನಾಥ ಲೀಲೆ
# (ಪುರಿಕ್ಷೇತ್ರ ಮಹಾತ್ಮೆ )

॥ ನಾಂದಿ (ಭಾಮಿನಿ) ॥

ಕರಿವದನನಿಗೆ ಎರಗಿ ಪ್ರಥಮದಿ । ವರದೆ ಶಾರದೆಯನ್ನು ಧ್ಯಾನಿಸಿ ।
ಗಿರಿಜೆ ರಮೆಯರ ಪಾದಕಭಿನಮಿಸುತ್ತ ಭಕ್ತಿಯಲಿ ।
ಹರಿವಿರಂಚಿಯ ಉರಗಭೂಷನ । ತರಣಿ ಮೊದಲಾಗಿರುವ ಗ್ರಹಗಳ ।
ನಿರತ ಭಜಿಸುತ ಪುರಿ ಮಹಾತ್ಮೆಯನೊರೆವೆ ಲಾಲಿಪುದು ॥ ೧ ॥

॥ ಭಾಮಿನಿ ॥

೧. ನಾರದಾದಿ ಸಮಸ್ತಮುನಿ ಪರಿ । ವಾರ ಸಂಕೀರ್ತನೆಯ ಗೈದಿರೆ ।
ಮಾರಜನಕನು ಶೇಷ ತಲ್ಪದಿ ಪಡಿಸುತ ತನ್ನ ॥
ನೀರೆಯಳ ಸೇವೆಯನು ಕೊಳುತಲಿ । ಸೇರಿರುವ ಭಜಕರನು ಕಿರುನಗೆ ।
ಬೀರಿ ಹರಸುತ ನಿಜ ನಿವಾಸದೊಳಿರಲಿಕೊಂದು ದಿನ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

೨. ರಮೆಯು ರಮಣನ ಪಾದಪದ್ಮಕೆ । ನಮಿಸಿ ನಿಮ್ಮಯ ನಿಜ ನಿವಾಸದಿ ।
ಅಮರರಿಗೆ ಋಷಿಜನಕೆ ದರುಶನ । ಸಮನಿಸಿಹುದು ॥ ೧ ॥

೩. ಮರ್ತ್ಯಲೋಕದಿ ಶ್ರದ್ಧೆಯಿಂದಲಿ । ನಿತ್ಯನಿಮ್ಮನು ಭಜಿಪ ಭಕ್ತರ ।
ಮೊತ್ತವಿರೆ ಅವರೆಣಿಕೆ ಸಾಧಿಪ । ಹೊತ್ತ ತಿಳಿಯೆ ॥ ೨ ॥

೪. ಎನಲು ಕಿರುನಗೆ ಬೀರಿ ಶ್ರೀಹರಿ । ವನಿತೆಗೆಂದನು ನೀಲಮಾಧವ ।
ಘನಸ್ವರೂಪದ ಮೂರ್ತಿಯಲಿ ದರು । ಶನವ ನೀವೇ ॥ ೩ ॥

೫. ಶರಣ ಶ್ರೇಷ್ಠನು ಇಂದ್ರದ್ಯುಮ್ನನ । ಪರಿಮುಖದಿ ಘನಕಾರ್ಯ ಸಾಧಿಪ ।
ತೆರದಿ ನಾಟಕ ರಚಿಸುವೆನು ನೀ । ನಿರುಕಿಸುವುದು ॥ ೪ ॥

೬ ಎಂದು ಸಂಕಲ್ಪಿಸುತ ಋಷಿಗಳ । ವೃಂದವನು ಕಳುಹಿದನವಂತಿಗೆ ।
ಇಂದ್ರದ್ಯುಮ್ನನ ಕಾಣಲಿಕೆ ಗೋ । ವಿಂದ ತಾನು ॥ ೫ ॥

॥ **ಕಾಂಬೋಧಿ ಝಂಪೆ** ॥

೭ ಧರೆಯೊಳುತ್ತಮವೆನಿಪವಂತಿ ನಗರವನಾಳ್ವ । ಅರಸ ಇಂದ್ರದ್ಯುಮ್ನ ತನ್ನ ॥
ಪರಿಜನರ ಪುರಜನರ ಕ್ಷೇಮ ಚಿಂತನೆಯಿಂದ । ಮೆರೆದಿರ್ದಾ ಓಲಗವನಿತ್ತು
॥ ೧ ॥

೮. ತಾಮರಸ ಜಲದಂತೆ ನಿರ್ಲಿಪ್ತ ಭಾವದಲಿ । ಕಾಮಿನಿಯನೊಡಗೊಂಡು ನಿರತ ॥
ನೇಮದಲಿ ಶ್ರೀಹರಿಯ ನಾಮಕೀರ್ತನೆಯಿಂದ । ಭೂಮಿಪನು ದಿನಕಳೆಯುತಿಹನು ॥ ೨ ॥

೯. ಎಂದು ಕರುಣೆಯಲಿ ಗೋವಿಂದ ಮೈದೋರಿ ಭವ । ಬಂಧನವ ಬಿಡಿಸುವೆನೊ ಕಾಣೆ ॥ ಎಂದು ಚಿಂತಿಸುತಿರಲು ಬಂದಮುನಿಗಡಣವನು । ವಂದಿಸುತ ಸತ್ಕರಿಸಿ ನುಡಿದ ॥ ೩ ॥

॥ **ಕೇದಾರಗೌಳ ಅಷ್ಟ** ॥

೧೦. ಧನ್ಯನಾದೆನು ತಮ್ಮ ಪಾದದರ್ಶನದಿಂದ । ಮನ್ನಿಸಿ ಕೊರತೆಗಳ ॥
ಎನ್ನೀಪುರಕೆ ಬರೆ ಕಾರಣವೇನೆಂಬು । ದನ್ನೊರೆವುದು ದಯದಿ ॥ ೧ ॥

೧೧. ನಿರತ ನಾರಾಯಣ ಸ್ಮರಣೆಯಲಿರುವಂಥ । ಪರಮ ಧಾರ್ಮಿಕನೆಂಬುದ ॥
ಅರಿತು ಬಂದೆವು ನಿನ್ನ ನೋಡಿ ಮಾತಾಡಿ ನಾವ್ । ತೆರಳ್ವೆವು ಶೀಘ್ರದಲಿ
॥ ೨ ॥

೧೨. ಜಪ ತಪನಿಯಮದಿ ಸತ್ಯಸ್ವರೂಪನ । ಗುಪಿತವ ತಿಳಿದವರು ॥
ವಿಪರೀತವೆಣಿಸದೆ ಅರುಹುತ್ತ ನನಗೊಂದು । ಉಪಕಾರ ಮಾಡುವುದು
॥ ೩ ॥

॥ ಬೇಗಡೆ ಅಷ್ಟ ॥

೧೩. ಚಿತ್ತವಿಸು ನೃಪಸತ್ತಮನೆ ಪರಿಯ । ಮಾಮಹಿಮನಾಗಿಹ । ನಿತ್ಯನಿರ್ಮಲನಾದ ಶ್ರೀಹರಿಯ ॥ ಚಿತ್ತ ದೃಢತೆಯಲಿದ್ದು ತಪಗೈ । ಯುತ್ತಲಿರೆ ಪ್ರತ್ಯಕ್ಷನಾದನು । ಮತ್ತೆ ಸಾಯುಜ್ಯವನು ಬೇಡಲು । ಬಿತ್ತರಿಸಿದನು ಅಭಯವೀಯುತ ॥೧॥

೧೪. ಕೇಳುವೃತಿಪನೆ ಅರ್ಕವಿಗ್ರಹದ । ತೆರದಿಂದ ನೆಲಸಿಹೆ । ನೀಲಮಾಧವ ರೂಪನೆಂಬರದ ॥ ಕಾಲಕಳೆಯದೆ ನೆಲೆಯ ಶೋಧಿಸಿ । ಭೂಲಲಾಮರ ನೆರವಿನಿಂದಲಿ । ಆಲಯವರಚಿಸುತ್ತ ಭಜಿಸಲು । ಪಾಲಿಸುವೆ ಸಾಯುಜ್ಯವೆಂದನು ॥ ೨ ॥

॥ ಭಾಮಿನಿ ॥

೧೫. ಕೇಳಿ ಪುಳಕಿತನಾದ ಚಿತ್ತದಿ । ಕೀಲಿಸಿತು ಮುನಿವರರು ಪೇಳಿದ ।
ನೀಲಮಾಧವ ರೂಪವೃತಿಪರ ಬೀಳುಗೊಳ್ಳುತಲಿ ॥
ಭೂಲಲಾಮನು ಪುರದ ಭೂಸುರ । ಜಾಲವನು ಕರೆದಾದರಿಸುತಲಿ ।
ಹೇಳಿದನು ನಯ ವಿನಯಭಾವದಿ ಮನದ ಬಯಕೆಯನು ॥ ೧ ॥

॥ ಕಲ್ಯಾಣಿ ಅಷ್ಟ ॥

೧೬. ಭೂಮಿ ಸುರರೆ ಕೇಳಿರೀಗ । ಮುನಿ । ಸ್ತೋಮ ಪೇಳಿದ ಘನಯೋಗ ॥ ಕಾಮಜನಕ ನೀಲಮಾಧವ ರೂಪದಿ । ಈ ಮಹಿಯೊಳವತರಿಸಿ ನಿಂದಿಹ। ಕಾಮಿತಾರ್ಥವ ನೀವ ಕಾರಣ ॥ ೧ ॥

೧೭. ಭೂವಲಯವನು ಸುತ್ತುತಲಿ । ಮೂರ್ತಿ । ಸೋವರಿತು ಬಂದರಿಲ್ಲಿ ॥ ಈವೆನು ಧನಕನಕಾದಿ ಸಂಪದವನ್ನು । ಶ್ರೀವರನ ಕೈಂಕರ್ಯಗೈಯುತ । ಭಾವಶುದ್ಧಿಯೊಳ್ಭಜಿಸಿ ಒಲಿಸುವೆ ॥ ೨ ॥

೧೮. ಎದ್ದು ಪೇಳಿದನತಿ ಕ್ಷಿಪ್ರ । ಓರ್ವ। ವಿದ್ಯಾಪತಿಯು ಎಂಬ ವಿಪ್ರ ॥ ಹೊದ್ದಿಸಿಕೊಡು ಕೆಲ ಹಾರ್ವರ ಜತೆಯಲ್ಲಿ । ಇದ್ದರಾವೆಡೆ ಕಂಡು ನಿಮ್ಮಲಿ। ಸುದ್ಧಿಯನು ಮುಟ್ಟಿಸುವೆನೆಂದನು ॥ ೩ ॥

॥ ದ್ವಿಪದಿ ॥

೧೯. ಅರಸನಪ್ಪಣೆಗೊಂಡು ಪೊರಟ ಭೂಸುರನು । ಅರಸಿದನು ಹಲವೆಡೆಯ ಕಾಣದಿರಲವನು ॥ ೧ ॥

೨೦. ಜತೆಗೂಡಿ ಬಂದ ದ್ವಿಜಪರಿವಾರದವರು । ನತದೃಷ್ಟರಾಗಿ ತೆರಳಿದರು ಪುರಕವರು ॥ ೨ ॥

೨೧. ವಿದ್ಯಾಪತಿಯು ದುಗುಡದಿಂದ ಯೋಚಿಸಿದಾ । ಸಿದ್ಧಿಸದ ಕಾಯಕಕೆ ಮನದಿ ಚಿಂತಿಸಿದಾ ॥ ೩ ॥

॥ **ಸಾಂಗತ್ಯ ರೂಪಕ** ॥

೨೨. ಸಾಧಿಸಿದರೆ ಸಬಳವ ನುಂಗಬಹುದಂತೆ । ಆದಕಾರಣದಿಂದ ನಾನು ॥ ಶೋಧಿಸದುಳಿಯೆನು ಎನುತ ದೃಢಮನದಿಂದ । ಕಾದ ಕಲು ನೆಲದಿ ಮುಂದರಿದಾ ॥ ೧ ॥

೨೩. ಬಂದುಕಂಡನು ಕಾಡಿನೆಡೆಯಲ್ಲಿ ಶಬರರ । ವೃಂದ ನೆಲೆನಿಂದಿರುವ ಪರಿಯ॥ ಹೊಂದಿಹಪಥ ಶ್ರಮ ಕಳೆಯೆ ನೆರಳಾಶ್ರಯ । ಹೊಂದಿ ತಾ ವಿಶ್ರಮಿಸಿದನು ॥ ೨ ॥

॥ **ಮಧ್ಯಮಾವತಿ ತ್ರಿವುಡೆ** ॥

೨೪. ಜನಕ ವಿಶ್ವಾವಸುವು ಒಂದಿನ । ವನಕೆ ಪೊರಟನು ಬೇಟೆಯಾಡಲು । ವಿನಯದಿಂದಲಿ ಬೀಳುಗೊಂಡಳು । ತನುಜೆ ಲಲಿತೆಯು ಪೋಷದಿ ॥ ಬಳಿಕಲವಳು ॥ ೧ ॥

೨೫. ತಾತ ಮರಳುವ ಮುನ್ನ ಅಡುಗೆಯ । ತಾ ತಯಾರಿಸಬೇಕೆನುತ್ತಲಿ । ಆ ತಳೋದರಿ ಉದಕ ತರುವರೆ । ಭೀತಮನದಲಿ ಪೊರಟಳು ॥ ತ್ವರಿತದಿಂದಾ ॥ ೨ ॥

॥ **ಕಾಂಬೋಧಿ ಝಂಪೆ** ॥

೨೬. ಘೋರಾಟವಿಯ ಮಧ್ಯೆ ಸೇರಿರುವ ಖಳರ ಪರಿ । ವಾರಕಧಿಪತಿ ಕುಂಭಕೇತು॥ ಮಾರವೈರಿಯ ಪೂಜೆಗೈದು ಓಲಗವಿತ್ತು । ಸಾರಿದನು ಮನದ ಬಯಕೆಯನು ॥ ೧ ॥

೨೭. ದಿನವು ಸಂದುದು ಹಲವು ವನಕೆ ಪೋಗದೆ ಬೇಟೆ । ಯನು ಆಡಬೇಕು ಇಂದಿನಿಂದಲಿ ॥ ಎನುತವರನೊಡಗೊಂಡು ಮುಂಬರಿದು ಬರುತಿರಲು । ಮನುಜವಾಸನೆ ತಿಳಿದು ಪೇಳ್ದ ॥ ೨ ॥

೨೮. ಅರರೆ ಏನಚ್ಚರಿಯು ನರರ ವಾಸನೆ ಮೂಗ । ನಿರಿಯುತಿದೆ ನೋಡಬೇಕವರ ॥ ತರಿದು ಭಕ್ಷಿಸುವೆನೆಂದೆನುತ ಬರೆ ದೂರದಲಿ । ತರುಣಿಯೋರ್ವಳ ಕಂಡ ಧನುಜ ॥ ೩ ॥

೨೯. ಹೆಣ್ಣಲ್ಲ ಗಜನಿಂಬೆ ಹಣ್ಣು ಕಾಂಚನದ ಮೈ । ಬಣ್ಣದಿಂದಲಿ ಕೊಂದಳೆನ್ನ ॥ ತಿನ್ನಲಾರೆನು ಈಕೆಯನ್ನು ಹೊಂದುವೆನೆನುತ । ಕಣ್ಣ ಕುಣಿಸುಸುತಲೆಂದಳವಳ್ಗೆ ॥ ೪ ॥

**॥ ಸುರಟಿ ಏಕ ॥**

೩೦. ಇತ್ತ ಬಾರೆ ಚೆಲುವೆ । ಏತಕೆ ॥ ಅತ್ತ ಸರಿದು ನಿಲುವೆ ॥ ತುತ್ತಿಗಾಗಿ ಬಯಸುತ್ತಲಿಲ್ಲ ಬೇ । ಸತ್ತ ಮನಕ್ಕೆ ಮುದವಿತ್ತುಪಕರಿಸೆಲೆ ॥ ೧ ॥

**॥ ತೋಡಿ ಏಕ ॥**

೩೧. ಏತಕಿನಿತು ನುಡಿವೆ ಪರದ । ಭೀತಿತೊರೆದು ಕಾಡುವೆ ॥
ನೀತಿಯಲ್ಲ ಪಥವ ಬಿಡು ಅ । ನಾಥೆ ನಾನು ಬೇಡುವೆ ॥ ೧ ॥

**॥ ಸುರಟಿ ಏಕ ॥**

೩೨. ಮಾರನ ಶರದೆಸುಗೆ । ದೇಹವ । ಸೇರಿದೆ ಬಲು ಬೇಗೆ ॥
ನೀರೆ ನಿನ್ನಧರದವಾರಿಯನುಣಿಸಿ ಶ । ರೀರವನುಳಿಸಲೆ ಸಾರಸನೇತ್ರೆಯೆ ॥ ೧ ॥

**॥ ತೋಡಿ ಏಕ ॥**

೩೩. ಒಲಿಯದವಳ ಸೇರುವಂಥ । ಛಲಕೆ ಫಲವು ಸೇರದು ॥
ಬಲುಮೆಯಿಂದ ಮುಂದುವರಿಯೆ । ತಲೆಯು ಉಳಿಯಲಾರದು ॥ ೧ ॥

**॥ ಸೌರಾಷ್ಟ್ರ ತ್ರಿವುಡೆ ॥**

೩೪. ಫಡ ಮರುಳೆ ನೀನೊಪ್ಪಗೊಡದಿರೆ । ಬಿಡೆನೆನುತ ಕೈತುಡುಕೆ ಭರದಿಂ । ಜಡನೇತ್ರೆಯು ಕೂಗೆ ತಡೆದನು । ಪೊಡವಿಯಮರ ॥ ೧ ॥

**॥ ದೇಶಿ ಮಟ್ಟೆ ॥**

೩೫. ನಿಲ್ಲು ನಿಲ್ಲೆಲೋ । ಖುಲ್ಲದಾನವ ಪುಲ್ಲಲೋಚನೆಯನು ಕಾಡೆ । ಒಳ್ಳಿತಾಗದು ॥ ೧ ॥

೩೬. ಎಲವೊ ಭೂಸುರ । ಗಳಹ ಬೇಡವೊ ಲಲನೆಯನ್ನು ಒಯ್ಯದಿರೆನು । ತೊಲಗು ತಕ್ಷಣ ॥ ೨ ॥

೩೭. ಮಾನಿನಿಯರ । ಮಾನಹಾನಿಯ । ಪ್ರಾಣಹೋದರೊಳಿತು ಸಹಿಸೆ । ನಾನು ನಿಶ್ಚಯ ॥ ೩ ॥

೩೮. ಧಾರಿಣಿಯ ಋಣ । ತೀರಿತೆನ್ನುತ । ಕೂರಸಿಯಲಿ ತಿವಿಯೆ ರುಧಿರ । ಸೋರೆ ವಿಪ್ರನು ॥ ೪ ॥

೩೯. ಕುಶವ ಮಂತ್ರಿಸಿ । ಎಸೆಯೆದನುಜಗೆ । ವಿಶಿಖವಾಗಿ ಜ್ವಾಲೆಸುರಿಯೆ । ಅಸುವನೀಗಿದಾ ॥ ೫ ॥

॥ **ಭಾಮಿನಿ** ॥

೪೦. ಅಸುರನಲಗಿನ ಗಾಯದಿಂದಲಿ । ಒಸರುತಿರೆ ರಕುತವನು ಕಾಣುತ ।
ಕುಸುಮ ಕೋಮಲೆ ಲಲಿತೆ ಶಾಲೆಯ ಹರಿದು ಕಟ್ಟುತಲಿ ॥
ವಸುಧೆಯಮರನ ಮನವನೊಲಿಸುತ । ವಸತಿಗೊಯ್ಯುತ ದೀನ ಭಾವದಿ।
ಹಸುತೃಷೆಯ ನೀಗಲ್ಕೆ ಭೂಸುರನೊರಗಿ ನಿದ್ರಿಸಿದಾ ॥ ೧ ॥

॥ **ಸಾಂಗತ್ಯ ರೂಪಕ** ॥

೪೧. ಬಳಿಕೊಂದು ದಿನ ವಿಶ್ವಾವಸು ಯೋಚಿಸುತಲೆಂದ । ಲಲಿತೆಯ ಮಾನ ರಕ್ಷಿಸಿರೆ ॥
ನಿಳಯದಾಶ್ರಯವಿತ್ತೆ ಕೆಲದಿನವಾದುದು । ಗೆಲವಿನಿಂದಿಹರು । ಭೂಸುರರು ॥ ೧ ॥

೪೨. ಗುಣರೂಪದಲಿ ನ್ಯೂನತೆಯ ಕಾಣೆ ಸುಜ್ಞಾನ । ಗಣಿಯಂತಿಹರು ಶಾಸ್ತ್ರ ಬಲದಿ ॥ ಅಣುಗೆಗೆ ಅನುರೂಪನಹರು ಲಲಿತೆಯ ಮನ । ದೆಣಿಕೆಯೆಂತಿಹುದೊ ತಿಳಿಯುವೆನು ॥ ೨ ॥

೪೩. ಬಾರಮ್ಮ ಮಗಳೆ ವಿದ್ಯಾಪತಿ ನಿನ್ನನ್ನು । ನೀರೆಯನ್ನಾಗಿ ಸ್ವೀಕರಿಸೆ ॥
ತೋರಲು ದಯೆಯ ನಿನ್ನಭಿಮತವೇನೆಂದು । ವಾರಿಜಾಕ್ಷಿಯ ಬೆಸಗೊಂಡ ॥ ೩ ॥

೪೪. ಉತ್ತಮ ಕುಲಜರು ವಿನಯಶೀಲರು ಅತಿ । ಸತ್ಯಸಂಧರು ಅವರೊಪ್ಪೆ ॥
ಮತ್ತೇಕೆ ಶಂಕೆ ಪೂರ್ವದ ಪುಣ್ಯಫಲವೆಂದು । ನಿತ್ಯ ಸೇವಿಸಿ ಧನ್ಯಳಹೆನು
॥ ೪ ॥

೪೫. ವಿದ್ಯಾಪತಿಯ ಕಂಡು ಶಬರಕೈಮುಗಿದೆಂದ । ಮುದ್ದು ಮಗಳ ಕೈಯ್ಯಪಿಡಿದು
॥ ಉದ್ಧರಿಸಿದರೆ ನಾ ಧನ್ಯ ತಮ್ಮಯ ಪಾದ । ಪದ್ಮಸೇವಿಸಲು ಬಯಸಿಹಳು
॥ ೫ ॥

೪೬. ಸೇವೆಯ ಗೈದೆನ್ನ ಉಪಚರಿಸಿದಳಾಕೆ । ನೀವಾಶ್ರಯವನಿತ್ತಿರೆನಗೆ ॥
ಈವಿಧ ಬಿನ್ನಹವೇಕೆ ಕೈಪಿಡಿಯುವೆ । ದೇವನಿಚ್ಛೆಯ ಮೀ ರ್ವರಾರು ॥ ೬ ॥

॥ **ಭಾಮಿನಿ** ॥

೪೭. ವಿಧಿ ವಿಧಾನದಿ ಲಗ್ನವಾದುದು । ಸುದತಿಯನ್ನೊಡಗೊಂಡು ವಿಪ್ರನು ।
ಪದುಳದಿಂದಿರುತಿರಲು ಗೃಹದಲಿ ನಡೆವ ಸೋಜಿಗದ ॥
ಹದನವರಿಯದೆ ಲಲಿತೆ ಬಳಿಗೈ । ದುದನು ಕಂಡವಳುಪಚರಿಸುತಿರೆ ।
ಹೃದಯದಂತರ್ಗತ ವಿಚಾರವ ಮಗುಳೆ ಪೇಳಿದನು ॥ ೧ ॥

॥ **ಕೇದಾರಗೌಳ ಝಂಪೆ** ॥

೪೮. ಸುದತಿ ಕೇಳ್ ನಿನ್ನಪಿತನು । ಪ್ರತಿರಾತ್ರಿ । ಸದನದಿಂ ಪೋಗುತಿಹನು ॥
ಉದಯಕಾಲಕೆ ಗಮಿಸಲು । ಪರಿಮಳದ । ಹದನೇನು ತಿಳುಹೆನ್ನೊಳು
॥ ೧ ॥

೪೯. ರಮಣ ಬೇರೆಣಿಸದಿಹುದು । ಈ ವಿಷಯ । ಅಮಿತ ಗುಟ್ಟಾಗಿರುವುದು ॥
ತಮಗುಸುರಿ ಪಿತ ತಿಳಿದರೆ । ದಂಡಿಪನು । ಕ್ಷಮಿಸೆನ್ನ ಹೇಳಲಾರೆ ॥ ೨ ॥

೫೦. ಪತಿಯ ಬಯಕೆಯ ತೀರಿಸೆ । ಸರ್ವದಾ । ಪತಿ ಬದ್ಧಳೆನ್ನ ಬಯಕೆ ॥
ಅತಿಯಾಗಿಹುದು ಪೇಳ್ದರೆ । ದಂಡಿಸನು । ಪಿತ ನಿನ್ನ ಉಸುರು ಚತುರೆ
॥ ೩ ॥

೫೧. ನೀಲಮಾಧವ ರೂಪನ ಪೂಜಿಸುತ । ಓಲೈಸುವನು ಪ್ರತಿದಿನ ॥
ಹೇಳಲರಿಯೆನು ಠಾವನು । ಎನುತುಸುರೆ । ಲೋಲಾಕ್ಷಿ ಮುದ ತಾಳ್ದನು
॥ ೪ ॥

॥ ಕೇದಾರಗೌಳ ಅಷ್ಟ ॥

೫೨. ಧರಣಿದೇವನು ವಿಶ್ವಾವಸುವಿನ ಬಳಿಗೈದಿ । ಒರೆದನು ವಿನಯದಲಿ ॥
ಅರುಹಬೇಹುದು ನೀಲಮಾಧವ ರೂಪನು । ಇರುವ ಠಾವನು ದಯದಿ ॥ ೧ ॥

೫೩. ಇದು ಪರಿಯಂತರ ಗೌಪ್ಯವಾಗಿಟ್ಟಿಹೆ । ಪದುಮನಾಭನ ಠಾವನು ॥
ವಿಧಿಸುವ ಕಟ್ಟಳೆಗೊಪ್ಪುವಿರೇ । ಎನೆ । ಬುಧನು ತಾ ಸಮ್ಮತಿಸೆ ॥ ೨ ॥

೫೪. ಕಣ್ಣಿಗೆ ಬಟ್ಟೆಯ ಕಟ್ಟಿಕೊಂಡೊಯ್ಯುವೆ । ಚಿನ್ಮಯ ಮೂರ್ತಿ ಕಂಡು ॥
ಧನ್ಯತೆಯನು ಹೊಂದಿ ಮರಳಬೇಕೆನುತಲಿ । ಸನ್ನುತಾಂಗನ ಒಪ್ಪಿಸಿ ॥ ೩ ॥

॥ ವಾರ್ಧಿಕ (ಅರ್ಧ) ॥

೫೫. ಬಟ್ಟೆಯನು ಕಾಣದಿರಲೆಂಬ ಕಾರಣಕಾಗಿ । ಬಟ್ಟೆಯನು ನಯನಕ್ಕೆ ಬಿಗಿದು ಕೊಂಡೊಯ್ಯುತಿರೆ । ಗುಟ್ಟಿನಲಿ ಲಲಿತೆ ಸಾಸಿವೆಯನ್ನು ಪತಿಯ ಕೈಗಿಟ್ಟು ತಾ ಕಳುಹಿಸಿದಳು ॥

೫೬.

॥ ಸೌರಾಷ್ಟ್ರ ತ್ರಿವುಡೆ ॥

೫೭ ಮಂಗಳಾಂಗನ ಕಂಡು ವಿಪ್ರನ । ಕಂಗಳಲಿ ಆನಂದ ಭಾಷ್ಪದ । ಹೊಂಗಿರಣ ಹೊರಸೂಸೆ ಪೊಗಳಿದ । ನಂಗ ಪಿತನ ॥ ೧ ॥

॥ ಸುರಟಿ ಏಕ ॥

೫೮. ಜಯವಾರಿಧಿ ಶಯನ । ಶ್ರೀಹರಿ । ಜಯವಾರಿಜನಯನ ॥
ಜಯಕರುಣಾಕರ ಜಯಅಭಯಂಕರ । ಭಯವ ನಿವಾರಿಸಿ । ದಯೆ ಇರಿಸುತ ಪೊರೆ ॥ ಜಯ ಜಯ ನಾರಾಯಣ । ಜಯಹೇ । ಜಯಲಕ್ಷ್ಮೀರಮಣ ॥ ೧ ॥

॥ ಭಾಮಿನಿ ॥

೫೯. ಹರಿಯಪೂಜಿಸೆ ಪುಷ್ಪಫಲಗಳ । ತರಲು ಶಬರನು ತೆರಳೆ ವಿಪ್ರನು । ಮರದಿ ಕುಳಿತಿಹ ವಾಯಸವು ಕೆಳಗುರುಳಿ ಹೊನಲಿನಲಿ ॥ ಹರಿದು ಭುಜ ನಾಲ್ಕನ್ನು ಧರಿಸುತ । ಪರಮ ಮಂಗಳ ದಿವ್ಯರೂಪದಿ । ತೆರಳುತಿರೆ ಅಂಬರದಿ ಕಾಣುತ ಹರುಷಮನನಾದ ॥ ೧ ॥

॥ ಮಧ್ಯಮಾವತಿ ತ್ರಿವುಡೆ ॥

೬೦. ಲೋಕಪಾಲನ ಕಂಡೆನನಗಿ । ನ್ನೇಕೆ ಭವ ಬಂಧನವು ನೀರಿಲಿ । ನೂಕಿ ಕಳೆವೆ ಶರೀರವೆನುತಿರೆ । ಸೋಕಿತಾತನ ಕರ್ಣಕೆ ॥ ನಭದ ವಾಣಿ ॥ ೧ ॥

॥ ಭಾಮಿನಿ ॥

೬೧. ದೊರೆಯ ಕಾರ್ಯಕೆ ಬಂದವನು ನೀ । ತೊರೆಯದಿರು ಪ್ರಾಣವನು ಊರಿಗೆ । ತೆರಳಿ ಕಂಡುದನಿಲ್ಲಿ ನೃಪತಿಗೆ ತಿಳುಹಿ ಸಂತೈಸು ॥
ಬರುವೆ ನಾ ಆವಂತಿನಗರಿಗೆ । ದೊರೆಯ ಸೇವೆಯ ಕೊಳಲು ಎನುತಿರೆ । ಮರಳಿ ಬಂದಿಹ ಶಬರನದ ಕೇಳುತ್ತ ಬೆರಗಾದ ॥ ೧ ॥

॥ ನಾದನಾಮಕ್ರಿಯೆ ಅಷ್ಟ ॥

೬೨. ಹರಿಯೆ ನಾನೇತಕೀತನ ತಂದೆ । ನಿನ್ನ । ತೊರೆಯುವುದಾಯ್ತೆ ಲೋಕದ ತಂದೆ ॥
ದೊರೆಗಿದನರುಹಿದರೀತನು । ಮುಂದೆ । ದೊರಕನು ನನಗೇತಕೀತನು॥೧॥

೬೩. ಬಂಧಿಸುತಲಿ ಕರಚರಣವ । ಕರೆ । ತಂದಿಟ್ಟ ಸೆರೆಮನೆಯೊಳಗವ ॥
ತಂದೆಯ ಕೃತಿಕಂಡು ಲಲಿತಳು । ಪಾದ । ದ್ವಂದ್ವಕಾನತಳಾಗಿ ನುಡಿದಳು॥೨॥

॥ ನೀಲಾಂಬರಿ ಆದಿ ॥

೬೪. ಪಿತನೆ ನಿರ್ದಯನಾದೆಯಾ । ಕಾಪಾಡಿದ । ಸುತೆಗೆ ಮಾರಕನಾದೆಯಾ ॥
ಪತಿಗೆ ಈ ಗತಿಯಾದರೆ । ನಾನಿರಲೇಕೆ । ಗತ ಪ್ರಾಣಳಹೆನು ಖರೆ ॥ ೧ ॥

೬೫. ಮಗಳ ಕಣ್ಣೀರ ಕಂಡು । ವಿಶ್ವಾವಸು । ಮಗುಳೆ ತಾ ಭಯವಗೊಂಡು ॥
ತೆಗೆಸುತ್ತ ಸೆರೆಯಿಂದಲಿ । ಬೀಳ್ಕೊಂಡನು । ಸೊಗದಿಂದಾದರಿಸುತ್ತಲಿ ॥೨॥

॥ ಭಾಮಿನಿ ॥ ಅರ್ಧ ॥

೬೬. ಅತಿ ಹರುಷಮನನಾಗಿ ವಿದ್ಯಾ ಪತಿಯು ತಾ ನಡೆತಂದ ವಂತಿಯ ।
ಪತಿಯೊಡನೆ ಪೇಳಿದನು ನೋಡಿದ ಕಾರ್ಯಸಂಗತಿಯ ॥

॥ ಕಲ್ಯಾಣಿ ಅಷ್ಟ ॥

೬೭. ದೊರೆಯೆ ನೀ ಲಾಲಿಸಯ್ಯ । ಕಾರ್ಯದಿ ಸಿದ್ಧಿ । ದೊರಕಿತು ಪಾಲಿಸಯ್ಯ ॥ ಭರದಿಂದ ಶಬರರಪರಿಸರಕ್ಕೈದುತ್ತ । ಇರಲಲ್ಲಿ ಹರಿಯ ಕಂಡೆ । ನಾ ಮುದಗೊಂಡೆ ॥ ೧ ॥

೬೮. ವ್ಯಾಧ ವಿಶ್ವಾವಸುವು । ಬಹಳ ಗುಪ್ತ । ವಾದ ತಾಣದಿ ದಿನವು ॥ ಮಾಧವನನು ಪೂಜಿಸುತ್ತಿಹ ನೀವ್ ಪೋಗಿ । ಆ ದಯಾನಿಧಿಯ ನೋಡಿ । ಪೂಜೆಯ ಮಾಡಿ ॥ ೨ ॥

॥ ಸೌರಾಷ್ಟ್ರ ತ್ರಿವುಡೆ ॥

೬೯. ನುಡಿಯ ಕೇಳುತ ಮನದಿ ಸಂತಸ । ಪಡುತ ಪೊರಟನು ವಿಪ್ರನೊಂದಿಗೆ । ನಡೆದು ಸಾಸಿವೆಗಿಡದ ಕುರುಹಿಂ । ಪೊಡವಿ ಪಾಲ ॥ ೧ ॥

೭೦. ಅರರೆ ಏನಚ್ಚರಿಯು ಗುಡಿಯಲಿ । ಇರದು ಮಾಧವ ಮೂರ್ತಿ ಶಬರನು । ಇರಿಸಿಹನು ಬೇರೆಡೆಯೊಳೆನ್ನುತ । ದೊರೆಯು ಸಿಡುಕಿ ॥ ೨ ॥

೭೧. ಎತ್ತಲಿರಿಸಿದೆ ಹೇಳು ಮೂರ್ತಿಯ । ಕೃತ್ತಿಮದ ನುಡಿ ನುಡಿದೆಯಾದಡೆ ಕುತ್ತಿಕೊಲ್ಲುವೆನೆನೆ ಶಬರ ಭಯ । ವೆತ್ತು ನುಡಿದಾ ॥ ೩ ॥

೭೨. ಆ ರಮಾಧವನಾಣೆ ತಿಳಿಯೆನು । ಸೂರೆಹೋದುದು ಎನ್ನ ಭಾಗ್ಯವು । ಯಾರಿಗೆನ್ನಲಿ ಎನಲು ಬಂದನು । ನಾರದಾಂಕ ॥ ೪ ॥

॥ ಮಧುಮಾಧವಿ ಅಷ್ಟ ॥

೭೩. ತಡೆದೆಂದ ನಾರದ ಇಂದ್ರದ್ಯುಮ್ನನಲಿ । ದುಡುಕುಬೇಡಪರಾಧವಿಲ್ಲ ವ್ಯಾಧನಲಿ ॥ ಅಡಗಿಸಿಹನು ಹರಿ ಮೊದಲಿನ ರೂಪ । ಗಡು ಮುಗಿದುದು ಸತ್ಯ ಬಿಡುನಿನ್ನ ಕೋಪ ॥ ೧ ॥

೭೪. ಶಂಖಾಕಾರದ ನೀಲಕಂಧರದಲ್ಲಿ । ಬಿಂಕ ಪಡದೆ ಮಂದಿರವರಚಿಸಲ್ಲಿ ॥ ಶಂಕರಪ್ರಿಯ ಬಂದು ನೆಲೆಸುವನಯ್ಯ । ಶಂಕೆಯಗೊಳದಿರು ಪಾಲಿಪನಯ್ಯ ॥ ೨ ॥

೭೫. ಅಂಶ ಷಷ್ಟವು ಭೂಮಿಯೊಳಗಿರಬೇಕು । ಅಂಶ ನೂರಿಪತ್ತುಮೇಲಿರಬೇಕು॥ ಸಂಶಯಿಸದೆ ಚಕ್ರ ಕಲಶವನಿಟ್ಟು । ಕಂಸಾರಿ ಗುಡಿಯ ರಚಿಸು ಮನವಿಟ್ಟು ॥ ೩ ॥

೭೬. ಕರೆಸು ವಿಧಿಯ ಪ್ರತಿಷ್ಠಾಪನೆಗೆಂದು । ಬರುವನು ಸಟೆಯಲ್ಲಭಕ್ತರ ಬಂಧು ॥ ಅರುಹುತ್ತ ನೃಪನಿಗೆ ಮಂತ್ರೋಪದೇಶ । ತೆರಳೆ ನಾರದ ನೃಪಗಾಯ್ತು ಸಂತೋಷ ॥ ೪ ॥

॥ ಭಾಮಿನಿ ಅರ್ಧ ॥

೭೭ ಮಂದಿರವ ರಚಿಸುತ್ತ ರಾಜ್ಯವ । ನಂದು ಸಚಿವನಿಗೊಪ್ಪಿಸುತ್ತಲಿ । ಇಂದ್ರದ್ಯುಮ್ನನು ಹೊರಟ ವಿಧಿಯನು ಕರೆದು ತರಲೆನುತ ॥

॥ ಕಾಂಬೋಧಿ ಝಂಪೆ ॥

೭೮. ಮಾಳವದ ಧರಣಿಯನು ಪಾಲಿಸುವ ದೊರೆಯು ಬಲ । ಶಾಲಿ । ಸ್ಫುರದ್ರೂಪಿಯಾಗಿರುವ ॥ ಗಾಲಮಾಧವ ತನ್ನ ಪರಿವಾರದೊಡಗೂಡಿ । ಓಲಗವನಿತ್ತ ವೈಭವದಿ ॥ ೧ ॥

೭೯. ತಂದೆ ಗಳಿಸಿದ ರಾಜ್ಯ ಇಂದು ಪರಿಯಂತರವು । ಚಂದದಲಿ ಪಾಲಿಸಿದೆ ನಾನು ॥ ಮಂದಕಿದ ವಿಸ್ತರಿಸಿ ಕೀರ್ತಿಯನು ಗಳಿಸಬೇ । ಕೆಂದು ಸಂಕಲ್ಪಿಸಿಹೆ ಮನದಿ ॥ ೨ ॥

೮೦. ಕೆಲಬಲದ ಧರಣಿಪರು ಬಲವಂತರಾಗಿಹರು । ಸುಲಭವಲ್ಲವು ಜೈಸಲರಿದು॥ ಹೊಳೆಯದಾದುದು ಮಾರ್ಗ ಎನುತ ಚಿಂತಿಸುತಿರಲು । ತಲೆಬಾಗಿ ಚರನೋರ್ವಪೇಳ್ದ ॥ ೩ ॥

॥ ಮುಖಾರಿ ಏಕ ॥

೮೧. ದೊರೆಯೆ ಬಿನ್ನಹವ ಮಾಡುವೆವು । । ಕೇಳಿಹ ವಾರ್ತೆ । ಅರುಹುದಕಾಗಿ ಬಂದಿಹೆವು ॥ ತಿರುಗುತ್ತ ಹಲವಾರು ದೇಶವ ಗುಟ್ಟಿಲಿ । ಬರುತಿರೆ ಕೇಳ್ದೆವು ಪೊಸತೊಂದು ವಾರ್ತೆಯ ॥ ೧ ॥

೮೨. ಆವಂತಿ ದೇಶದ ದೊರೆಯು । ಈಗಿಲ್ಲವಂತೆ । ಯಾವ ಕಾರಣವೊ ತಿಳಿಯೆವು ॥ ಸೋವನರಿತು ಪೋಗಿ ಪುರಕೆಲಗ್ಗೆಯನಿಕ್ಕೆ । ದೇವರಾಣೆಗು ಜಯವೆಂದು ತೋರ್ಪುದು ಜೀಯ ॥ ೨ ॥

॥ ಕೇದಾರಗೌಳ ॥ ಝಂಪೆ ॥

೮೩. ಚರರೆಂದ ನುಡಿಯಕೇಳಿ । ಭೂಮಿಪನು । ಭರಿತ ತೋಷವನು ತಾಳಿ ॥ ಚರರಿಗುಡುಗೊರೆ ಇತ್ತನು । ಮುಂದಿನಾ । ಪರಿ ಕುರಿತು ಚಿಂತಿಸಿದನು ॥೧॥ ಎನಗೆ ಸರಿ ಸಮಯವಿದುವೆ । ಆವಂತೀ । ಯನು ರಣದಿ ಗೆಲಿದು ಮೆರೆವೆ ॥ ಎನುತ ಪಡೆಗೂಡಿ ಬಂದ । ಚಾರಕರ । ಅನುಚರರ ಮುಖದಿ ಕೊಂದ ॥ ೨ ॥

॥ ಶಂಕರಾಭರಣ ತ್ರಿವುಡೆ ॥

೮೪. ಧಾರಣೀಶನು ಪುರವಮುತ್ತಿದ । ವಾರತೆಯ ಕೇಳುತ್ತಲಿ ॥ ಭೂರಿ ಚಿಂತೆಯತಾಳಿ ಸಚಿವನು ಸೇರಿರುವ ಪರಿವಾರಕೆ ॥ ಪೇಳ್ದನಿಂತು ॥ ೧ ॥

೮೫. ಅರಸನಿಲ್ಲದ ವೇಳೆಯರಿಯುತ । ಇರಿಯಲೆನ್ನುತ ಬಂದಿಹ ॥ ಶರಣರಾಗುತ ಕಪ್ಪವಿತ್ತರೆ । ಸುರರು ಮೆಚ್ಚರು ನಮ್ಮನು ॥ ಎನ್ನುತಾಗ ॥ ೨ ॥

೮೬. ಪಡೆಯ ಕೂಡುತ ಮಂತ್ರಿಸಮರಕೆ । ನಡೆದನತಿ ಧೃಡಮನದಲಿ ॥ ತಡೆದು ರಥವನು ಗಾಲ ಮಾಧವ । ನೊಡನೆ ಪೇಳ್ದನು ಗರ್ಜಿಸಿ ॥ ಕೋಪದಿಂದ ॥ ೩ ॥

॥ ಮಾರವಿ ಏಕ ॥

೮೭. ಚೋರರರ ತೆರದಲಿ ಪುರವನು ಮುತ್ತಿಹ । ವೀರ ನೀನಾರೆಲೆಯೋ ॥ ಕಾರಣವೇನಿದೆ ನಮ್ಮೊಳು ಸಮರಕೆ । ಭೋರನೆ ಒರೆಯುವುದು ॥ ೧ ॥

೮೮. ಪುಟ್ಟಿಹೆ ಕ್ಷತ್ರಿಯ ವಂಶದಿ ಅರಿಗಳ । ಮೆಟ್ಟಿ ಸಾಮ್ರಾಜ್ಯವನು ॥ ಕಟ್ಟುವ ಬಯಕೆಯ ಹೊಂದಿನಾ ಬಂದಿಹೆ । ದಿಟ್ಟನಾದರೆ ನಿಲ್ಲೆಲಾ ॥ ೨ ॥

೮೯. ಮಾತುಗಳೇತಕೆ ಎನುತಲಿ ಶರಗಳ । ವ್ರಾತ ಸುರಿಯೆ ಸಚಿವ ॥ ಸೋತನು ಸಮರದಿ ಸೆರೆಮನೆಗಟ್ಟಿದ । ನಾತನ ಮಾಧವನು ॥ ೩ ॥

॥ ಭಾಮಿನಿ ॥

೯೦. ಧುರದಿ ರಾಜ್ಯವ ವಶವಗೈಯ್ಯುತ । ಪುರದ ಸಂಚಾರದಲಿ ಬರುತಿರೆ । ಮರಳಿನಲಿ ಮುಳುಗಿರ್ದ ದೇವಾಲಯವ ನೋಡಿದನು ॥ ಮರಳಿ ಜೀರ್ಣೋದ್ಧಾರಗೈಯ್ಯುವ । ಭರದೊಳೀರ್ಪನ ಇಂದ್ರದ್ಯುಮ್ನನು । ಅರರೆ ಏನಿದು ಕಾರ್ಯವೆನ್ನುತಲವನ ಬೆಸಗೊಂಡ ॥ ೧ ॥

॥ ಭೈರವಿ ಝಂಪೆ ॥

೯೧. ಯಾರಯ್ಯ ನೀನಂತು । ತೋರುತಿಹ ದೇಗುಲದಿ । ಧೀರತನ ತೋರ್ಪೆ ಅಧಿ । ಕಾರಿಯಂದದಲಿ ॥ ೧ ॥

೯೨. ಸಂದೇಹವೇನಿದಕೆ । ಮಂದಿರವು ನನ್ನದೇ । ಹಿಂದೆ ಸಮರದಿ ರಾಜ್ಯ । ಹೊಂದಿರುವನಯ್ಯಾ ॥ ೨ ॥

೯೩. ಪುರದಲಿಲ್ಲದ ವೇಳೆ । ಧರೆಯ ಗೆದ್ದಿಹೆ ಮಾಡಿ । ದರಸ ನಾನಿಹೆ ಹಕ್ಕು । ಸ್ಥಿರವಾಗದಯ್ಯ ॥ ೩ ॥

೯೪. ಅರಸನಿಂದ್ರದ್ಯುಮ್ನ । ವಿರಚಿಸಿಹನಿದನೆಂದು । ಒರೆಯುತಿರೆ ಭೂಸಂಧಿ । ಕೆರಳಿ ಮಾಧವನು ॥ ೪ ॥

೯೫. ಕೊಂದು ಕಳೆಯುವೆ ನಿನ್ನ । ನೆಂದು ಝಳಪಿಸೆ ಖಡ್ಗ । ಬಂದು ತಡೆಯುತ ವಿಧಿಯು । ಎಂದನೀ ಮಾತ ॥ ೫ ॥

॥ ನವರೋಜು ಏಕ ॥

೯೬. ಮಾಧವನೆ ನಿಜವಿಹುದು । ಸರಿ । ಯಾದುದನೆ ಪೇಳಿದನು॥ ಈ ಧರೆಯನು ನೀನೊಪ್ಪಿಸುತೀತಗೆ । ಭೂಧವನಾಗು ಸರೋವರದಾ ಕಡೆ ॥ ೧ ॥

॥ ಭಾಮಿನಿ ಅರ್ಧ ॥

೯೭. ಇಂದ್ರದ್ಯುಮ್ನನು ವಿಧಿಯೊಳೆಂದನು । ಮಂದಿರದ ಪ್ರತಿಷ್ಠಾಪನೆಯ ನೀ । ವಿಂದು ಮಾಳ್ಪುದು ಎನಲು ನುಡಿದನು ಸಂತಯಿಸುತವನ ॥

॥ **ಕೇದಾರಗೌಳ ಅಷ್ಟ** ॥

೯೮. ಎನ್ನ ಶಕ್ತಿಗೆ ಮೀರಿದೀ ಕಾರ್ಯಮಾಳ್ಪುದು । ಚೆನ್ನಾಗದಯ್ಯ ನೋಡು ॥ ಇನ್ನಿಲ್ಲಿ ಧ್ವಜವೊಂದನೂರುವೆ ಕೇಳಯ್ಯ । ನನ್ನಿಯಮಾತೊಂದನು ॥ ೧ ॥

೯೯. ಧ್ವಜವನೀಕ್ಷಿಸಿ ಮಮಕಾರ ವರ್ಜಿತರಾಗಿ । ಭಜಿಸುತ್ತ ಶ್ರೀಹರಿಯ । ನಿಜಭಕ್ತರಾದರೆ ಸಲಹುವನೆನುತಲಿ । ಅಜನುತಾಮರೆಯಾದನು ॥ ೨ ॥

॥ **ಸಾಂಗತ್ಯ ರೂಪಕ** ॥

೧೦೦. ಆವಂತಿಯರಸ ತನ್ನೊಳಗೆ ಚಿಂತಿಸುತೆಂದ । ಆವ ಜನ್ಮದ ಕರ್ಮಫಲವೋ ॥ ಈ ವಿಧದಲಿ ವ್ಯಥಿಸುವುದಾಯ್ತೆ ಎನುತಿರೆ । ದೇವಋಷಿಯು ನಡೆತಂದಾ ॥ ೧ ॥

೧೦೧. ಬಂದ ನಾರದರನ್ನು ಕಂಡು ಭಕ್ತಿಯೊಳ್ಕರೆ । ತಂದು ಸತ್ಕರಿಸಿ ಕುಳ್ಳಿರಿಸೆ ॥ ಕಂದಿದಾನನದ ಭೂನಾಥನ ಪಿಡಿದೆತ್ತಿ । ನೊಂದಿಹ ಬಗೆಗೆ ಕೇಳಿದನು ॥ ೨॥

೧೦೨. ಚಿನುಮಯ ಮೂರ್ತಿಯ ಹಂಬಲದಿಂದಿರೆ । ಕನಸಿಲಿ ಪ್ರತ್ಯಕ್ಷನಾಗಿ ॥ ಎನಗೆ ಪೇಳಿದದಾರು ಬ್ರಾಹ್ಮಣ ರೂಪದಿ । ವನಧಿ ನಾ ತೇಲಿ ಬರಲಿಹೆನು ॥ ೩ ॥

೧೦೩. ತೇಲುತ್ತ ಬರಲಿಹ ದಾರು ಬ್ರಾಹ್ಮಣನನ್ನು । ಮೇಲೆತ್ತಲಾಗಲಿಲ್ಲೆಮಗೆ ॥ ಹೇಳಬಲ್ಲಿರೆ ಕಾರಣವದೇನು ಎನುವ ಭೂ । ಲೋಲಗೆ ನಾರದ ನುಡಿದ ॥ ೪ ॥

೧೦೪. ನೀಲಮಾಧವನ ಮೂರ್ತಿಯ ಕಂಡ ಶಬರನ । ಮೇಲೆ ವಿದ್ಯಾಪತಿಯನ್ನು ॥ ಕಾಲವ ಕಳೆಯದೆ ಕರೆತಂದೆತ್ತಲು ಲೀಲಾ । ಜಾಲದಿ ಮೇಲೆದ್ದು ಬಹನು ॥ ೫ ॥

೧೦೫. ಹೊನ್ನಿನಂದಣದಲ್ಲಿದಾರು ಬ್ರಾಹ್ಮಣನನ್ನು । ಮುನ್ನ ಮಂದಿರಕೆ ಕೊಂಡೊಯ್ದು ॥ ಚಿನ್ಮಯ ಮೂರ್ತಿಯ ಕೆತ್ತಿಸೆನ್ನುತ ರಾಯ । ನನ್ನ ಬೀಳ್ಕೊಂಡ ನಾರದನು ॥ ೬ ॥

॥ ವಾರ್ಧಕ ॥

೧೦೬. ನಾರದರ ನುಡಿಯಂತೆ ಬೇಡ ವಿದ್ಯಾಪತಿಯ । ಸೇರಿ ಹೊಂದಣದಲ್ಲಿ ಕಾಷ್ಠವನು ಸಾಗಿಸುತ । ಮಾರಪಿತನಹ ಜಗನ್ನಾಥಮೂರ್ತಿಯ ಕೆತ್ತಿಸಲ್ಕೆ ರೂವಾರಿಗಳನು ॥ ದೂರದಿಂ ಕರೆಸಿದನು ಮೂರ್ತಿಕೆತ್ತನೆ ಕಾರ್ಯ । ಯಾರಿಂದಲೂ ಸಾಧ್ಯವಾಗದಿರೆ ಮನನೊಂದು । ಭೂರಮಣರಾಜಕಾರ್ಯವ ಮರೆತು ಹಗಲಿರುಳು ಚಿಂತಿಸುತ ಬೆಂಡಾದನು ॥ ೧ ॥

॥ ನೀಲಾಂಬರಿ ರೂಪಕ ॥

೧೦೭. ಏತಕೆ ಮನದಲಿ ಶ್ರೀ ಜಗ । ನ್ನಾಥನ ಕಂಬರ್ತಿಯು ಮೊಳಗಿತೊ । ಏತಕೆ ಮುನಿಗಳು ಮಹಿಮೆಯ ಮಾತುಗಳಾಡಿದರೋ ॥ ಸೋತರೆ ನಾನೀ ಕಾರ್ಯದಿ । ಹೇತುಗನೆನ್ನರೆ ಜಗದಲಿ ಕಾತರ ಮನದಿಂದಲಿ ಭೂ । ನಾಥನು ವ್ಯಥಿಸಿದನು ॥ ೧ ॥

॥ ಕೇದಾರ ಗೌಳ ಅಷ್ಟ ॥

೧೦೮. ವೃದ್ಧನಾಗಿಹ ಶಿಲ್ಪಿಯೋರ್ವ ಬಂದುದ ಕೇಳ್ದು । ಹೊದ್ದುತ್ತ ಭರವಸೆಯ ॥ ಇದ್ದ ಠಾವೆಲ್ಲಿ ತಮ್ಮಯ ಪೆಸರೇನೆಂದು । ಮುಗ್ಧಭಾವದಿ ಕೇಳಿದ ॥ ೧ ॥

೧೦೯. ಪೆಸರು ಅನಂತ ಮಹರಾಣನೆಂದೆಂಬರು । ಕುಸುರಿ ಕೆಲಸ ನಮ್ಮದು ॥ ದೆಸೆದೆಸೆಯಲಿ ತಮ್ಮ ಮೂರ್ತಿಕೆತ್ತನೆ ಕಾರ್ಯ । ಪಸರಿಸಿಹುದ ಕೇಳಿದೆ॥೨॥

೧೧೦. ಏಕವಿಂಶತಿ ದಿನದಲಿ ಕೆತ್ತಿಕೊಡುವೆನು । ಏಕಾಂತ ಮಂದಿರದಿ ॥ ಬೇಕಾದ ಆಹಾರ ಒಳಗಿಡಬೇಕಯ್ಯ । ನೀ ಕೇಳು ಮಾತೊಂದನು ॥ ೩ ॥

೧೧೧. ಕೊಟ್ಟ ಅವಧಿಯೊಳು ಕದವತೆರೆಯೆವೆಂದು । ಕೊಟ್ಟರೆ ಭಾಷೆಯನ್ನ ॥ ಇಷ್ಟಮೂರುತಿಯನ್ನು ಕಡೆವೆನೆನ್ನಲು ಭೂಪ । ಕೊಟ್ಟನು ಭಾಷೆಯನ್ನು ॥೪॥

॥ ಭಾಮಿನಿ ॥

೧೧೨. ಹೊರವಲಯದಲಿ ಇತರ ಶಿಲ್ಪಿಗಳ್ । ಕೊರೆಯುತಿರ್ದರೆ ಒಳಗೆ ಚಾಣದ । ಸ್ವರಗಳಿಲ್ಲವು ಇಂತು ದಿನ ಹದಿನೈದು ಸರಿಯಲ್ಕೆ ॥ ಅರಸನಚ್ಚರಿಗೊಂಡು ಮನದಲಿ । ಕರೆಸುತಲಿ ಪುರಜನರ ಮಂತ್ರಿಯ । ಒರೆದನಾತಂಕವನು ಹೊತ್ತಿಹ ದುಗುಡ ಭಾರದಲಿ ॥ ೧ ॥

॥ ಕಾಪಿ ಅಷ್ಟ ॥

೧೧೩. ಪುರಜನರೆಲ್ಲರು ಕೇಳಿ । ಮೂರ್ತಿ । ಕೊರೆಯುವೆ ತಾನೆಂದು ಶಿಲ್ಪಿಯು ಪೇಳಿ ॥ ಸರಿದುದು ದಿನ ಹದಿನೈದು । ಯಾವ । ಸ್ವರವು ಕೇಳದು ಎನ್ನ ಮನವಾತಂಕಿಪುದು ॥ ೧ ॥

೧೧೪. ಅದಕೆಂದ ಸಚಿವ ರಾಜನಲಿ । ಹಿಂದೆ । ಇದಕೆ ಪ್ರಮಾಣ ಇತ್ತಿಹಿರಿ ಶಿಲ್ಪಿಯಲಿ ॥ ಕದತೆರೆದರೆ ದೋಷಬಹುದು । ಮುಂದೆ । ಪದುಮನಾಭನ ಇಚ್ಛೆಯಂತೆ ನಡೆದಪುದು ॥ ೨ ॥

॥ ದ್ವಿಪದಿ ॥

೧೧೫. ಆತುರವ ತಡೆಯಲಾಗದೆ ನೃಪನು ಕದವ । ಭೀತಮನನಾಗಿ ತೆರೆಯಿಸಿ ನೋಡಿದನವ ॥ ೧ ॥

೧೧೬. ರೂವಾರಿಯೊಳಗಿಲ್ಲ ಹುಡುಕಾಡಿ ದಣಿದ । ದೇವನೇ ಅವನೆಂದು ಭೂಪಾಲ ತಿಳಿದ ॥ ೨ ॥

೧೧೭. ಬಲರಾಮ ಕೃಷ್ಣ ಸೌಭದ್ರೆಯರ ಪ್ರತಿಮೆ । ಕೆಲಬಲದೊಳಿರೆ ತಿಳಿದ ಶ್ರೀಹರಿಯ ಮಹಿಮೆ ॥ ೩ ॥

೧೧೮. ಪಾದಹಸ್ತಗಳಿಲ್ಲದಿಹ ಮೂರ್ತಿಕಂಡ । ಭೂಧವನಿದೇನೆಂದು ಬೇಗುದಿಯಗೊಂಡ ॥ ೪ ॥

॥ ಭಾಮಿನಿ ॥

೧೧೯. ನಾನೆ ದುಡುಕಿದರಿಂದ ಮೂರ್ತಿಯು । ನ್ಯೂನಗೊಂಡಿತು ಆದಕಾರಣ । ಪ್ರಾಣತನಗೇಕೆನುತ ದರ್ಭಾಸನದಿ ಕುಳ್ಳಿರ್ದು ॥ ಪಾನ ಆಹಾರಾದಿ ತೊರೆಯುತ । ಧ್ಯಾನ ಪರವಶನಾಗಿ ಕುಳಿತನ । ತಾನೆ ಮೈದಡವುತ್ತ ನಾರದ ಪೇಳ್ದನಿಂತೆನುತ ॥ ೧ ॥

॥ ದೇಶಿ ಅಷ್ಟ ॥

೧೨೦. ಪ್ರಾಯೋಪದೇಶವ ಬಿಡು ಮೇಲಕೇಳು । ನೋಯದಿರಿದಕಾಗಿ ಮಾತೊಂದ ಕೇಳು ॥ ತೋಯಜನಾಭ ತಾನಾಗಿಯೇ ಬಂದು । ಮಾಯಕದಾಟವಾಡಿಹ ದಯಾಸಿಂಧು ॥ ೧ ॥

೧೨೧. ಹೊನ್ನಿಂದ ಹಸ್ತ ಪಾದಂಗಳ ಮಾಡಿ । ಚಿನ್ಮಯ ಮೂರ್ತಿಯ ಗುಣಗಾನ ಪಾಡಿ ॥ ಎನ್ನಜನಕ ಪ್ರತಿಷ್ಠೆಯ ಮಾಡಲಿಂದೆ । ನಿನ್ನ ಇಷ್ಟಾರ್ಥ ಸಿದ್ಧಿಪುದಯ್ಯ ಮುಂದೆ ॥ ೨ ॥

॥ ಭಾಮಿನಿ ॥

೧೨೨. ಮುನಿವರನ ಮಾತಿನಲಿ ಭರವಸೆ । ಜನಪ ಹೊಂದಿ ವಿಧಾತನಿಂದಲಿ । ಚಿನುಮಯನ ಮೂರ್ತಿಯ ಪ್ರತಿಷ್ಠಾಪಿಸಿದ ವೈಭವದಿ ॥ ಅನುದಿನವು ಶ್ರೀಹರಿಯ ದರ್ಶನ । ನೆನೆಯುತಿ ರ್ಪನು ಬಯಕೆ ಸಲಿಸಲು । ಕನಸಿನಲಿ ಪ್ರತ್ಯಕ್ಷನಾದನದೇನ ಬಣ್ಣಿಪೆನು ॥ ೧ ॥

॥ ಮಧ್ಯಮಾವತಿ ತ್ರಿವುಡೆ ॥

೧೨೩. ಕಂಡು ಪುಳಕಿತನಾಗುತವನಿಪ । ಮಂಡೆಯನು ಮಣಿದೆರಗಿ ನುತಿಸಿದ । ಪುಂಡರೀಕಾಂಬಕನೆ ಕರುಣೆಯ । ಗೊಂಡು ದರ್ಶನವಿತ್ತೆಯಾ ॥ ಧನ್ಯನಾದೆ ॥ ೧ ॥

೧೨೪. ಎನ್ನ ವಂಶಾವಳಿಯನಿಲ್ಲಿಗೆ । ಸನ್ನುತಾಂಗನೆ ಕೊನೆಯಗೊಳಿಸುತ । ಮುನ್ನ ಮುಕ್ತಿಯನಿತ್ತು ಪಾಲಿಪು । ದೆನ್ನ ಬಯಕೆಯನೊಂದನು ॥ ಎನ್ನುತವನು॥೨॥

೧೨೫. ಮೂರು ತಾಸುಗಳುಳಿದು ಪ್ರತಿದಿನ । ಸೇರಿರುತ ಶರಣರಿಗೆ ದರ್ಶನ । ಶ್ರೀರಮಣ ದಯಪಾಲಿಸುವುದು ಉ ದಾರ ಮನದಿಂದವರಿಗೆ ॥ ಎನಲು ಪೇಳ್ದ ॥ ೩ ॥

೧೨೬. ಶರಣರಲ್ಲಿಗೆ ಹೋಗಿಬರುವರೆ । ವರ ರಥವ ನೀಮಾಡು ಭೂಸುರ । ರರಸಿಯರ ವಂಶಜರು ಪೂಜೆಯ । ವಿರಚಿಸಲಿ ನೈವೇದ್ಯವ । ನೀಡುತವರು ॥ ೪ ॥

೧೨೭. ಶಬರವಂಶದ ಜನರು ನನ್ನನು । ವಿಭವದಲಿ ಸೇವಿಸುತ ಮುಂದಕೆ ।ಸಬಲರಾಗಲಿ ಎನುತಲಾತಗೆ । ಅಭಯವನು ತಾನೀಯುತ ॥ ಬಳಿಕಲೆಂದ ॥ ೫ ॥

೧೨೮. ಇದು ಪುರಿಕ್ಷೇತ್ರವು ಕಾಣಾ ಮುಂ । ದಿದರ ದರ್ಶನ ಸಕಲಸಿದ್ಧಿಗೆ । ಒದಗಿಪುದು ಕಾರುಣ್ಯವೆನುತ್ತೈ । ದಿದನಂತರ್ಧಾನದಿ ॥ ಪರಮ ಪುರುಷ ॥ ೬ ॥

೧೨೯. ಸ್ಯಂದನವ ರಚಿಸುತ್ತ ದೇವಕಿ । ನಂದನನ ಸೌಭದ್ರೆ ರಾಮನ । ಚಂದದಲಿ ಕುಳ್ಳಿರಿಸಿ ನರೆದಿಹ । ಮಂದಿಗಳ ಸಂದೋಹದಿ ॥ ಎಳೆಸುತಿರ್ದ ॥ ೭ ॥

॥ **ಕಾಂಬೋಧಿ ಏಕ** ॥

೧೩೦. ನೋಡಿ ಹರಿಯದಿವ್ಯಮೂರ್ತಿ । ಹರೇ ಕೃಷ್ಣ ॥ ಭಕ್ತಿ । ಗೂಡಿ ರಥವನೆಳೆಯ ಬನ್ನಿ । ಹರೇ ಕೃಷ್ಣಾ ॥ ೧ ॥

೧೩೧. ನಂಬಿದವರ ಕೈಯ್ಯಬಿಡನು । ಹರೇಕೃಷ್ಣಾ ॥ ಬಯಸಿ । ದಿಂಬನಿತ್ತು ರಕ್ಷಿಸುವನು । ಹರೇಕೃಷ್ಣಾ ॥ ೨ ॥

೧೩೨. ಸತ್ಯಸದಾನಂದ ಮೂರ್ತಿ । ಹರೇಕೃಷ್ಣಾ ॥ ನೋಡೆ । ನಿತ್ಯನಿರಾಮಯನು ದೇವ । ಹರೇಕೃಷ್ಣಾ ॥ ೩ ॥

೧೩೩. ದೇವಜಗನ್ನಾಥನಿವನು । ಹರೇಕೃಷ್ಣಾ ॥ ನಮ್ಮ ಕಾವ ದೀನದಯಾಸಿಂಧು । ಹರೇ ಕೃಷ್ಣಾ ॥ ೪ ॥

**ಮಂಗಲಪದ ॥ (ಆಹೇರಿ ಝಂಪೆ )**

ಮತ್ಸ್ಯಕೂರ್ಮವರಾಹ ನರಸಿಂಹ ಮೂರುತಿಗೆ । ಸ್ತುತ್ಯವಾಮನರೂಪ ಭಾರ್ಗವನಿಗೆ ಭಕ್ತಜನ ಬಂಧು ಶ್ರೀರಾಮ ಬಲನನುಜನಿಗೆ । ಬತ್ತಲೇಶ್ವರ ಕಲ್ಕ್ಯಅವತಾರಿಗೆ ॥ ೧ ॥

******ಸಮಾಪ್ತ*******

# ಆದಿಚುಂಚನಗಿರಿ ಮಹಾತ್ಮೆ

## ಪಾತ್ರ ಪರಿಚಯ

೧. ದೇವೇಂದ್ರ
೨. ದೇವತೆಗಳು
೩. ನಾರದ
೪. ಬ್ರಹ್ಮ
೫. ವಿಷ್ಣು
೬ ಈಶ್ವರ
೭ ಭೈರವೇಶ್ವರ (ಈಶ್ವರನ ಘೋರ ರೂಪ)
೮. ಚುಂಚ
೯. ಅರಣಿರಾಜ
೧೦. ತಿರುಪತಿ ತಿಮ್ಮಪ್ಪ (ಜೋಗಿ ವೇಷದಲ್ಲಿ)
೧೧. ಭೈರವೇಶ್ವರ (ಜೋಗಿ ವೇಷದಲ್ಲಿ)
೧೨. ಮಹಾಶೇಷ
೧೩. ರಮಾನಂದನಾಥ
೧೪. ಚಿಕ್ಕಲಿಂಗ – ಸುಭೇದಾರ
೧೫. ಗಂದಾಧರ – ಚಿಕ್ಕಲಿಂಗನ ಮಗ
೧೬. ಸಿದ್ಧಯೋಗಿ (ಶಿವಯೋಗಿ)
೧೭. ಲಕ್ಷ್ಮಿ – ಚುಂಚನ ತಂಗಿ
೧೮. ಗಂಗಾಮಾಳಿ – ಚಿಕ್ಕಲಿಂಗನ ತಂಗಿ
ಮತ್ತು ಮಠದ ಸೇವಕ (ಶಿಷ್ಯ)

# ಆದಿಚುಂಚನಗಿರಿ ಮಹಾತ್ಮೆ

## ॥ ನಾಂದಿ (ಕಂದ) ॥

ವಾಣಿಯೆ ಬ್ರಹ್ಮನ ರಾಣಿಯೆ । ವೀಣಾಪಾಣಿಯೆ ತವ ಪದಯುಗಮಂ ನಿರತಂ ॥
ಧ್ಯಾನಿಪೆ ಎನ್ನೀ ಕೃತಿಯಂ । ನೀನನುಗ್ರಹಿಸುತ ಮುನ್ನಡೆಸೌ ಬಲುಕೃಪೆಯಿಂ ॥೧॥

**॥ ಕಾಂಬೋಧಿ ಝಂಪೆ ॥**

೧. ನೂರು ಯಾಗವ ಮಾಡಿ ಮೂರು ಮೂರ್ತಿಗಳ ಮನ । ವಾರೆ ಮೆಚ್ಚಿಸಿ ಪಡೆದ ಸ್ವರದ ॥ ಮೇರು ಗದ್ದುಗೆಯ ತಾನೇರಿ ಸುಮನಸರ ಪರಿ । ವಾರ ಕುರಿತೆಂದ ಸುರಪಾಲ ॥ ೧ ॥

೨. ಶಿವರಾತ್ರಿ ಪುಣ್ಯದಿನವಿಂದು ಕೈಲಾಸದಲಿ । ಶಿವನನರ್ಚಿಪ ಮಹೋತ್ಸವವು ॥ ಭುವನ ಮೂರರ ಭಜಕವೃಂದ ಸೇರುವುದಲ್ಲಿ । ಶಿವನ ಕೃಪೆಹೊಂದಲೆಂದೆನುತ ॥ ೨ ॥

೩. ಆದಕಾರಣ ನಾವು ಮೃಢನ ಅರ್ಚನೆಗೆ ಬೇ । ಕಾದ ಫಲಪುಷ್ಪ ಕೈಗೊಳುತ ॥ ಮೋದದಿಂದೈದಬೇಕೆನುತ ಪೊರಟನು ಜಯ ನಿ । ನಾದದೊಂದಿಗೆ ರಜತಗಿರಿಗೆ ॥ ೩ ॥

**॥ ಕೇದಾರಗೌಳ ಅಷ್ಟ ॥**

೪. ನಾರದಮುನಿ ಶಿವಧ್ಯಾನವಗ್ಗೆಯುತ್ತ । ದಾರಿಯೊಳ್ ಯೋಚಿಸಿದಾ ॥
ಈರೀತಿ ವಿಧಿಗೇಕೆ ಮುನಿಸು ಶಂಭುವಿನಲ್ಲಿ । ತೋರದಾದುದುಕಾರಣ ॥೧॥

೫. ಭುಜಗ ಭೂಷನ ಬಗೆಗಿನಿತು ಭಾವನೆಯು ಸ । ಹಜವಲ್ಲವೆಂದೆನುತ ।
ಅಜನಲ್ಲಿ ಹೇಳಿ ನಾ ಪೊರಟಿಹೆನೆನ್ನುತ್ತ । ರಜತ ಗಿರಿಗೆ ಪೊರಟಾ ॥ ೨ ॥

॥ ಭಾಮಿನಿ ॥

೬. ಇತ್ತ ಕೈಲಾಸದಲಿ ಗಣಗಳ । ಮೊತ್ತದೊಂದಿಗೆ ಗಿರಿಜೆ ಸಹಿತಲಿ ।
ಕೃತ್ತಿವಾಸನು ಕುಳ್ಳಿರಲು ಸುರಪಾದಿ ಸುಮನಸರ ॥
ಮೊತ್ತದೊಂದಿಗೆ ಖಗವರೂಥನು । ಭಕ್ತಜನ ಸಂದಣಿಯು ಆರತಿ ।
ಎತ್ತಿ ಬೆಳಗುತ್ತಿರಲು ವಿಧಿ ನಡೆತಂದನಾ ಸಭೆಗೆ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

೭ ಮೃಢನ ಸಕಲರು ಪೂಜಿಸುತ್ತಿಹ । ಸಡಗರವ ಕಾಣುತ ವಿಧಾತನು ।
ಕಡಿಯುತಲಿ ಪಲ್ಗಳನು ಕೋಪದಿ । ನುಡಿದನಿಂತು ॥ ೧ ॥

೮. ಈಶನೀತನೆ ಜಗದ ಸೃಷ್ಟಿಯ । ನಾಶಕಾರಕ ತಮಗುಣಾನ್ವಿತ ।
ಹೇಸಿಗೆಯ ತೊಗಲುಡುಗೆ ಪೂಜೆಯು । ಲೇಸೆನಿಸಿತೆ ॥ ೨ ॥

೯. ಸಲ್ಲದೀತಗೆ ಪೂಜೆ ಎನ್ನುತ । ಗುಲ್ಲನೆಬ್ಬಿಸಿ ಆರತಿಯ ತಾ ।
ಚೆಲ್ಲೆ ಧರಣಿಗೆ ನೆರೆದವರ ಎದೆ । ತಲ್ಲಣಿಸಿತು ॥ ೩ ॥

೧೦. ಸರಸಿಜಾಂಬಕನೆಂದ ವಿಧಿಯೊಳು । ಧರೆಯ ದುಷ್ಟರ ವಧಿಸಿಲೋಕಕೆ ।
ಚಿರಸುಖವ ಕೊಡುತಿರ್ಪಹರನನು । ಜರೆಯಬೇಡ ॥ ೪ ॥

೧೧. ಗಿರಿಜೆಗರ್ಧಾಂಗವನು ಇತ್ತವ । ಶಿರದಿ ಜಾನ್ಹವಿಯನ್ನು ಹೊತ್ತವ ।
ಹರಿಯೆ ತವಮೋಹಿನಿಯರೂಪಕೆ । ನೆರೆದ ಮರುಳ ॥ ೫ ॥

೧೨. ಕೋಪಗೊಳದಿರು ತಂದೆ ಹಿಂದಕೆ । ಆ ಪಿನಾಕಿಗೆ ನೀವೇ ಸಾರಥಿ ।
ರೂಪಿನಲಿ ನಿಂದವರು ಜಗದಿ ಪ್ರ । ತಾಪಿ ಬರೆಯು ॥ ೬ ॥

೧೩. ಖೋಡಿರಕ್ಕಸರಿಂಗೆ ವರವನು । ನೀಡುವನು ಬಳಿಕವರು ಬಲಿತೊಡೆ ।
ಓಡುವನು ತಾ ಪ್ರಾಣಭಯದಲಿ । ಹೇಡಿಯಂತೆ ॥ ೭ ॥

೧೪. ಈ ಮಹಾಶಿವರಾತ್ರಿ ದಿನದಲಿ । ವಾಮದೇವನ ಭಜಿಸೆ ಕಲ್ಮಷ ।
ಹೋಮಗೊಳ್ವದು ಎನುತುಸುರೆ ಸು । ತಾಮ್ರನಂದು ॥ ೮ ॥

॥ ಮಾರವಿ ಏಕ ॥

೧೫. ಸೃಷ್ಟಿಗೆ ಕಾರಣನಾಗಿಹೆ ನಾನೇ । ಶ್ರೇಷ್ಠನು ತಿಳಿದಿದನು ॥
ಭ್ರಷ್ಟಗೆ ಬೆದರದೆ ಪೂಜೆಯನೀಗಲೆ । ಕೊಟ್ಟು ಧನ್ಯರಾಗಿ ॥ ೧ ॥

೧೬. ಹರನೆಂದನು ಕಿಡಿಕಾರುತ ಪೊತ್ತಿಹ । ಶಿರವೈದೆಂದೆನುವ ॥
ಗರುವವ ನಿಲಿಸುವೆ ನೀಕ್ಷಣವೆನ್ನುತ । ಉರಿಮಸಗುತಲೆಂದಾ ॥ ೨ ॥

೧೭. ಬಾ ಭೈರವ ಬಾ ಬಾ ಕಾಲಾಂತಕ । ಬಾ ಬಾ ಬಾರೆನುತ ।
ಆ ಭವನಾರ್ಭಟೆ ಕೇಳುತ ಪಂಕಜ । ನಾಭನು ಬೆರಗಾದ ॥ ೩ ॥

೧೮. ಉರಿವನೇತ್ರ ಭೀಕರದ ಗಾತ್ರದಲಿ । ಬರುತ ಭೈರವೇಶ ॥
ಭರದಿ ವಿಧಿಯ ಶಿರ ಚಿವುಟೆ ಭೈರವನು । ಕರವ ಕಚ್ಚಿನಿಲಲು ॥ ೪ ॥

೧೯. ಕುತ್ತಿಕೆಡೆದೆ ಶಿರ ತಗಲಲಿ ಬ್ರಹ್ಮಾ । ಹತ್ಯ ದೋಷನಿನಗೆ ॥
ರಕ್ತಹೀರಿ ಬಳಲಿಸುವೆನೆನುತ ಖತಿ । ವೆತ್ತು ಅಜನು ಪೊರಟಾ ॥೫ ॥

॥ ಭಾಮಿನಿ ॥

೨೦. ಘೋರರೂಪವ ಕಂಡು ಸುರಪರಿ । ವಾರ ಭಯಹೊಂದುತ್ತ ನಿಂದುದು ।
ಭೈರವೇಶನೆ ಶಾಂತವಾಗೆಂದೆನುತ ಪೊಗಳುತಿರೆ ॥
ಶ್ರೀರಮಣ ನೀಕೇಳು ಮರ್ತ್ಯಕೆ । ಸಾರಿ ದೋಷವ ಕಳೆದು ಬರುವೆನು ।
ಸೇರುವುದು ನೀವ್ ನಿಮ್ಮನಗರಿಗೆನುತ್ತ ಕಳುಹಿದನು ॥ ೧ ॥

॥ ಸಾಂಗತ್ಯ ರೂಪಕ ॥

೨೧. ವಾಣೀವರನ ಶಿರಕಚ್ಚಿರಕ್ತವ ಹೀರೆ । ಸ್ಥಾಣು ವೇದನೆಯಿಂದ ಬಳಲಿ ॥
ನಾನೆಂತು ಸಹಿಸಲೀ ಸಂಕಟವೆನ್ನುತ್ತ । ದೀನ ವದನನಾಗಿ ಪೊರಟಾ ॥೧॥

೨೨. ಸುತ್ತಿ ಬೆಂಡಾದನು ಶಿವ ಹಸುತೃಷೆಯಿಂದ । ಹೊತ್ತಿಉರಿದುದು ಉದರಾಗ್ನಿ
॥ ಮೃತ್ಯುಂಜಯನಿಗಿಂಥ ಗತಿಯಾಗೆ ನರರ ಪಾ । ಡೆತ್ತಲೆಂದುದು ಸುರಸ್ತೋಮ
॥ ೨ ॥

೨೩. ಕಂಡನು ಕನಕವರ್ಣದ ವನವೊಂದನು । ರುಂಡಮಾಲನು ನೋವ ಕಳೆಯೆ॥
ಬಂಡೆಯೊಂದನು ಏರಿ ಧ್ಯಾನ ಸಮಾಧಿಯ । ಕೊಂಡು ತಾ ನೆಲೆನಿಂತನಲ್ಲಿ॥೩॥

॥ ಕೇದಾರಗೌಳ ಅಷ್ಟ ॥

೨೪. ಕಾರೆಬೈಲಿನ ಬೊಮ್ಮರಸನೆಂಬ ಗೊಲ್ಲಗೆ । ಅರಣುಗೆಯರವರ್ಗೆ ॥
ಓರುವನಗ್ರಜ ಚುಂಚನೆಂಬಾತನು । ದಾರ ಗುಣಾನ್ವಿತನು ॥ ೧ ॥

೨೫. ಶಿವ ಧ್ಯಾನ ನಿರತನಾಗಿದ್ದು ಸತ್ಯಾತ್ಮರ । ಬವಣೆಗೆ ಸ್ಪಂದಿಸುವ ॥
ಹವಣಿಕೆಯಲ್ಲಿರೆ ಉರಿಜ್ವಾಲೆ ಹಬ್ಬಿದ । ವಿವರಣೆ ತಿಳಿಯುತಾತ ॥ ೨ ॥

೨೬. ಎಲ್ಲಿಂದ ಈ ಜ್ವಾಲೆ ಕಾರಣವೇನೆಂದು । ನಿಲ್ಲದೈದಿದ ತಿಳಿಯೆ ॥
ಕಲ್ಲಹಾಸಿನ ಮೇಲೆ ಧ್ಯಾನನಿರತನಾಗಿ । ಕುಳ್ಳಿರ್ದನನು ಕಂಡನು ॥ ೩ ॥

೨೭. ಯಾರಯ್ಯ ನೀನು ವಿಕಾರ ಸ್ವರೂಪಿಯೆ । ಬೀರುವ ಉರಿಜ್ವಾಲೆಗೆ ॥
ಕಾರಣನಾಗಿಹೆ ನುಡಿ ನಿನ್ನ ಸರ್ವ ವಿ । ಚಾರವನೆನಲವನು ॥ ೪ ॥

೨೮. ಮಾತನಾಡದೆ ಕುಳಿತಾತನ ಮೌನಕೆ । ಖಾತಿಗೊಳ್ಳುತ ಚುಂಚನು ॥
ಕೂತನ ಕೊಂಬಲಿತಿವಿಯಲ್ಕೆ ಭೈರವ । ಘಾತಿಸಿದನು ಕೋಡನು ॥ ೫ ॥

॥ ಸಾಂಗತ್ಯ ರೂಪಕ ॥

೨೯. ಅಸಮಬಲಾನ್ವಿತನಾದೆನ್ನ ಕೊಂಬನು । ಎಸೆದೆ ಮುರಿದು ತಪೋನಿಧಿಯೆ ॥
ಉಸುರು ನೀನಾರೆಂದು ದಿಟ್ಟಿಸೆ ಮುಂಗಡೆ । ಪಶುಪತಿ ಕಣ್ಣೆಗೋಚರಿಸೆ ॥ ೧ ॥

೩೦. ಪರಮೇಶ ಜಗದೀಶ ಗಿರಿಜೇಶಾ ಸರ್ವೇಶಾ । ಅರಿಯದೆ ಗೈದೆನಪರಾಧ ॥
ಮರೆತೆನ್ನ ತಪ್ಪನೀಕ್ಷಮಿಸೆಂದು ಕಂಡನು । ಕರದಿ ಸುರಿವ ರುಧಿರವನು ॥೨॥

೩೧. ದೀನರಕ್ಷಕ ನೀನು ನಿನಗಿಂಥ ಪರಿಭವ । ನಾ ನೋಡಲಾರೆನೆಂದೆನುತ ॥
ಶ್ವಾನರೂಪದಿ ರಕ್ತಹೀರೆ ಕಪಾಲವು । ತಾನೆ ನೆಲಕುದುರೆ ಪರಶಿವನು ॥೩॥

॥ ಮಧುಮಾಧವಿ ಅಷ್ಟ ॥

೩೨. ಶ್ವಾನರೂಪದಿ ನೀನು ರಕುತವ ಹೀರೆ । ಹೀನವಾಯ್ತೆಂದು ಕಪಾಲವು ಜಾರೆ ॥ ಕಾಣದಾಯಿತು ಉರಿ ಸಂತುಷ್ಟನಹೆನು । ನಾನಿತ್ತಪೆನು ಮೂರು ವರಕೇಳು ಕೇಳು ನೀನು ॥ ೧ ॥

೩೩. ಎನ್ನಾಸೆಯಂತೆ ನೀನಿಲ್ಲಿಯೆ ನೆಲೆಸು । ನಿನ್ನ ಸೇವಿಸುವರ ಇಷ್ಟಾರ್ಥಸಲಿಸು ॥ ಎನ್ನನು ಶುನಕ ರೂಪದಲಿ ಸ್ವೀಕರಿಸು । ಕನ್ನೆ ಎನ್ನನುಜೆಯ ವರಿಸಿ ಉದ್ಧರಿಸು ॥ ೨ ॥

॥ ಭಾಮಿನಿ ಅರ್ಧ ॥

೩೪. ಹರ ತಥಾಸ್ತೆಂದೆನುತ ಚುಂಚನ । ಹರಸೆ ಚರಣಕೆ ನಮಿಸಿ ಪೊರಟನು । ಪರಮ ಸಂತೋಷದಲಿ ಭಗಿನಿಗೆ ಒರೆಯಲೆಂದೆನುತ ॥

॥ ಮಧ್ಯಮಾವತಿ ತ್ರಿವುಡೆ ॥

೩೫. ಇತ್ತ ಚುಂಚನ ಅನುಜೆ ಲಕ್ಷ್ಮಿಯು । ನಿತ್ಯ ಶಿವಧ್ಯಾನದಲಿ ನಿರತಳು । ಕೃತ್ತಿವಾಸನ ಸೇರ್ವ ಬಯಕೆಯ । ಹೊತ್ತು ತವಕಿಸುತಿರಲಿಕೆ । ಚುಂಚನೈದಿ ॥ ೧ ॥

೩೬. ತಂಗಿ ಕೇಳೌ ವರ ಕಪರ್ದಿಯು । ತಂಗಿಹನು ಭೈರವನ ರೂಪದಿ । ಇಂಗಿತವ ಬೇಡೆನುತಲವಳನು । ಸಂಗಡವೆ ಕರೆದೊಯ್ದನು ॥ ನೋಡುತವನ ॥ ೨ ॥

೩೭. ದೇವ ಮೈದೋರಿದೆಯಾ ತವಪದ । ಸೇವಕಳು ನಾ ನಿನ್ನ ಸೇರುವ । ಭಾವದಿಂದಲೆ ಕಾಯುತಿರುವೆನು । ಕಾವುದೆನ್ನನು ಎನುತಲಿ ॥ ಕಾಲಿಕೆರಗೆ ॥ ೩ ॥

೩೮. ನಾನು ಭಕ್ತಾಧೀನ ಮನಕನು । ಮಾನವೇತಕೆ ಎನುತಲಾಕೆಯ । ಸ್ಥಾಣುಮೈದಡವುತ್ತ ಪೇಳ್ದನು । ಮಾನಿನಿಗೆ ವೃತ್ತಾಂತವ ॥ ನಗೆಯ ಬೀರಿ ॥ ೪ ॥

॥ ಬೇಗಡೆ ಅಷ್ಟ ॥

೩೯. ಹಿಂದಿನಾ ವೃತ್ತಾಂತವಾಲಿಪುದು । ನಮ್ಮೀರ್ವರಾಸಂ । ಬಂಧ ಪೊಸತೇನಲ್ಲ ಸಹಜವಿದು ॥ ಅಂದುಪಿಡಿದಾ ವಿಧಿಕಪಾಲದಿ । ನೊಂದು ಭೂತಳಕಿಳಿಯೆ ಎನ್ನನು । ಹೊಂದಲೆನ್ನುತ ಪೊರಟು ಮರ್ತ್ಯಕೆ । ಬಂದ ಗಿರಿಜೆಯೆ ಲಕ್ಷ್ಮೀದೇವಿಯು ॥ ೧ ॥

೪೦. ನಂದಿ ನೀನಹೆ ಸಟೆಯ ಮಾತಲ್ಲ । ವಾಹನವನಾಗಿಯೆ । ಹೊಂದುವೆನು ನೀ ಲಾಲಿಪುದು ಸೊಲ್ಲ ॥ ಮುಂದೆ ಚುಂಚನ ಗಿರಿಯಿದೆಂದೇ । ಮಂದಿ ಕರೆಯಲಿ ಶಿರದ ಗಂಗಾ । ಬಿಂದುವಿನ ಕೊಳದಲ್ಲಿ ಭಕ್ತರು । ಮಿಂದರಾದೊಡೆ ಮುಕ್ತಿದೊರೆವುದು ॥ ೨ ॥

೪೧. ಬಾಲ ನೀ ಕೇಳೆನ್ನ ಬೇಡಿರುವೆ । ನಿನ್ನಿಚ್ಛೆಯಂದದಿ । ಕಾಲಭೈರವನಾಗಿ ಇಲ್ಲಿರುವೆ ॥ ಮೂಲದಲಿ ಈ ಹಾಸುಗಲ್ಲಿನ ॥ ಮೇಲೆ ನಾ ತಪಗೈದೆಮುಂದಕೆ । ಜ್ವಾಲಪೀಠವಿದೆಂದು ಕರೆಯಲಿ । ಪಾಲಿಸುವೆ ಸರ್ವರನು ನಂಬಿದ ॥೩॥

॥ **ಭಾಮಿನಿ** ॥

೪೨. ಹರನು ಈ ಪರಿಯಿಂದ ಪೇಳುತ । ಹರಸಲವರನು ಚುಂಚನೀರ್ವರ । ಹರುಷದಲಿ ಕುಳ್ಳಿರಿಸಿ ಆರತಿಯೆತ್ತಿ ಸ್ತುತಿಸಿದನು ॥

॥ **ದ್ವಿಪದಿ** ॥

೪೩. ಭೈರವೇಶ್ವರ ಲಕ್ಷ್ಮೀದಾಂಪತ್ಯಫಲದಿ । ವೈರವರ್ಜಿತರ್ಯೆದು ಸುತರುದಿಸೆ ಮುದದಿ ॥ ೧ ॥

೪೪. ವಿದ್ಯೆ ಬುದ್ಧಿಯನಿತ್ತು ಧರ್ಮಬೋಧನೆಗೆ । ಬದ್ಧರಾಗಿರಿ ಎನುತ ಕಳುಹೆ ವಿವಿದೆಡೆಗೆ ॥ ೨ ॥

೪೫. ಸ್ವೇದದಿಂದುದಿಸಿರುವನವ ಮತ್ಸ್ಯಗಳನು । ಮೋದದಲಿ ನವನಾಥರಾಗಿ ಮಾಡಿದನು ॥ ೩ ॥

೪೬. ಎನ್ನುತವರನು ಕಳುಹಿ ಭೈರವೇಶ್ವರನು । ತನ್ನರಸಿಯೊಡಗೊಂಡು ಗಿರಿಯನಡರಿದನು ॥ ೪ ॥

॥ **ಸೌರಾಷ್ಟ್ರ ತ್ರಿವುಡೆ** ॥

೪೭. ಶಿವನನೇಕೋ ಮನದಿ ಧ್ಯಾನಿಪ । ಯುವತಿ ಗಂಗಾಮಾಳಿಯೊಂದಿನ । ಭವನದಲಿಕುಳ್ಳಿರ್ದು ತನ್ನೊಳು । ತವಕಿಸಿದಳು ॥೧ ॥

೪೮. ಅಣ್ಣ ಶಿವ ಸಾನ್ನಿಧ್ಯಪಡೆದನು । ಎನ್ನನುಜೆ ಹರನರಸಿಯಾದಳು । ಮುನ್ನನಾನವನನ್ನು ಕಾಣುತ । ಧನ್ಯಳಹೆನು ॥ ೨ ॥

೪೯. ಬಂದು ಚುಂಚನಗಿರಿಗೆ ಪೀಠದ । ಮುಂದೆ ಧ್ಯಾನ ಸಮಾಧಿಯಲಿ ತಾ ।
ನಿಂದು ಹರನನು ಸ್ತುತಿಯಗೈದಳು । ಮಂದಗಮನೆ ॥ ೩ ॥

೫೦. ಹರನು ಮೈದೋರದಿರೆ ಗಂಗಳು । ಹರಣ ತೊರೆಯುವೆನೆನುತ ಪೀಠಕೆ ।
ಶಿರವ ಬಡಿಯಲು ಮೃಡನು ಕಾಣಿಸಿ । ಒರೆದನವಳ್ಗೆ ॥ ೪ ॥

॥ **ನವರೋಜು ಏಕ** ॥

೫೧. ಅರಿತಿಹೆ ನಿನ್ನಯ ಮನವ । ನಾ । ನೊರೆಯುವೆ ಕೇಳ್ಮನದಿರವ ॥
ಕರುಣಿಪೆ ಮುಕ್ತಿಯ । ನೆರೆನಂಬೆನ್ನುತ । ಶಿರಪಿಡಿದೆತ್ತಿದ । ಹರಕಾರುಣ್ಯದಿ
॥ ೧ ॥

॥ **ಕೇದಾರಗೌಳ** ॥ **ಝಂಪೆ** ॥

೫೨. ಕಂಡಿದನು ಲಕ್ಷ್ಮಿ ತಾನು । ಮನದಿ ಕುದಿ । ಗೊಂಡೆಂದಳೇನಿದೇನು ॥
ಭಂಡರಂತಾದಿರಲ್ಲ । ಮನಸೋತು । ದಿಂಡೆ ಬಳಿ ಸಾರ್ದಿರಲ್ಲ ॥ ೧ ॥

೫೩. ಹೆಣ್ಣುಗಳ ಮೋಹ ನಿಮಗೆ । ತೀರಿಲ್ಲ । ಇನ್ನಿಹುದು ಅವಳೊಂದಿಗೆ ।
ಎನ್ನುತಲಿಸಿಡುಕಿನಿಂದ । ಪೊರಡೆ ಮು । ಕ್ಕಣ್ಣ ಕೋಪಿಸುತಲೆಂದ ॥ ೨ ॥

೫೪. ತೆರಳದಿರು ನಿಲ್ಲುನಿಲ್ಲೆ । ಎಂದೆನಲು । ತರುಣಿಕಲ್ಲಾಗಿ ನಿಲ್ಲೆ ॥
ಸ್ಮರವೈರಿ ಬೆರಗಾದನು । ಗಂಗಳಿಗೆ । ಒರೆದನಿಂತೆಂದು ತಾನು ॥ ೩ ॥

॥ **ಭಾಮಿನಿ ಅರ್ಧ** ॥

೫೫. ಸ್ಥಂಭವಾದಳು ಲಕ್ಷ್ಮಿ ಮುಂದಕೆ । ಕಂಬದಮ್ಮನು ಎಂಬ ಪೆಸರಿನಲಿ ।
ನಂಬಿದವರನು ಸಲಹೆ ನಿಂದಿರಲೆನುತ ಮಗುಳೆಂದ ॥

॥ **ಭಾಮಿನಿ ಅರ್ಧ**॥

೫೬. ಮೂಲದಲಿ ನೀ ಅಮರವಾಹಿನಿ । ಮಾಳದೇವತೆಯಾಗಿ ನಿಂದಿರು ।
ಕಾಲಭೈರವನಾಗಿ ನಿಲ್ಲುವೆ ದ್ವಾರದಲಿ ನಾನು ॥

॥ **ಕೇದಾರಗೌಳ ಅಷ್ಟ** ॥

೫೭. ಅರಣಿರಾಜನು ತನ್ನ ಪರಿವಾರ ಕೂಡುತ್ತ । ಮೆರೆದನೋಲದಿ ತಾನು ॥
ಅರಸೊತ್ತಿಗೆಯಲೇನು ಕೊರತೆ ಇಲ್ಲದ ಕೇಳಿ । ಉರುತರಾನಂದ ತಾಳಿ॥೧॥

೫೮. ಹರನ ಕರುಣೆಯಿಂದ ಅರಸಿ ರೋಹಿಣಿಯಲ್ಲಿ । ತರಳನೋರ್ವನ ಪಡೆದ ॥ ಧರೆಮೂರಕಧಿಪತಿಯಾಗುವ ಯೋಗವೆಂ । ದಿರೆ ಹರುಷದಿ ನಲಿದ ॥೨॥

೫೯. ಗಣಿಯಿಲ್ಲದಿಹ ಬಿದಿರಿಂದ ತೊಟ್ಟಿಲ ಮಾಡಿ । ಅಣುಗನ ತೂಗಿದರೆ ॥ ಫಣಿಭೂಷ ತೃಪ್ತಿಹೊಂದುವನೆಂದು ಕುಲಗುರು । ಜನಪಾಲಗೆನಲು ತಾನು ॥ ೩ ॥

೬೦. ಗಣಿಯಿಲ್ಲದಿಹ ಬಿದಿರನು ತರಲೆನ್ನುತ್ತ । ಅಣಿಗೊಳಿಸುತ ಮೇದರ ॥ ಜನಪಾಲನಾಣತಿ ತಾನಿತ್ತು ಕಳುಹಲು । ಸನುಮತದಲಿ ಪೊರಡೆ ॥ ೪ ॥

॥ **ಆರ್ಯ ಸವಾಯ್ ಏಕ** ॥

೬೧. ಮೇದರು ಮೂವರು ಬಿದಿರನು ಪುಡುಕಲು । ಮೋದದಿ ಕುಡುಗೋಲ್ ಪಿಡಿಯುತಲಿ ॥ ಸೋದರರಂದದಿ ಪೊರಟರು ಅಡವಿಯ । ಹಾದಿಯ ಹಿಡಿಯುತ ತ್ವರಿತದಲಿ ॥ ೧ ॥

೬೨. ಹಲವೆಡೆ ಹುಡುಕಿದರೆಲ್ಲಿಯು ಕಾಣದೆ । ತಳಮಳಗೊಂಡರು ಮನದಲ್ಲಿ ॥ ಅಲಸದೆ ಮುಂಬರೆ ಚುಂಚನಗಿರಿಯಲಿ । ಮೆಳೆಗೋಚರಿಸಲು ಕ್ಷಣದಲ್ಲಿ ॥ ೨ ॥

೬೩. ಕತ್ತರಿಸಲು ಬಿದಿರನು ಮೇದರು ಬಲು । ನೆತ್ತರು ಹರಿದುದು ಹೊನಲಾಗಿ ॥ ತತ್ತರಿಸುತ ನಿಲೆ ನಭದಲಿ ವಾಣಿಯು । ಬಿತ್ತರಿಸಿತು ಈ ತೆರನಾಗಿ ॥ ೩ ॥

॥ **ಭಾಮಿನಿ** ॥

೬೪. ಬಿಸಿಲತಾಪವ ತಾಳಲಾರದೆ । ವಸತಿ ಮಾಡಿಹೆ ಬಿದಿರ ಮೆಳೆಯಲಿ ।
ಪಶುಪತಿಯು ನಾ ಭೈರವೇಶನನಾಗಿ ನಿಂದಿಹೆನು ॥
ವಸುಮತೀಶಗೆ ಪೇಳಿಎನ್ನುತ । ಉಸುರಿ ಹಿಂದಕೆ ನೋಡದೀಕ್ಷಣ ॥
ವಸತಿ ಸೇರಿರಿ ಎನಲು ವಿಲಸದೆ ಪೊರಟರಾಕ್ಷಣದಿ ॥ ೧ ॥

೬೫. ಎಮ್ಮ ಬೆದರಿಸಲೆನುತಲಾರೋ । ಸುಮ್ಮನೆ ಸಟೆ ನುಡಿದರೆನ್ನುತ ।
ಒಮ್ಮೆ ಹಿಂದಿರುಗುತ್ತ ನೋಡಲು ಈರ್ವಮೇದರರು ॥
ದಿಮ್ಮನೆದ್ದಿಹ ಉರಿಗೆ ಕೂಗುತ । ಹಮ್ಮೈಸಿ ನೆಲಕುರುಳಿ ಸಾಯಲು ।
ಭಿಮ್ಮನೈದುತ ಓರ್ವಮೇದರ ಅರಸಗುಸುರಿದನು ॥ ೨ ॥

॥ ವರಾಳಿ ಅಷ್ಟ ॥

೬೬. ಒಡೆಯಾ ಅಡ್ಡಿಬದ್ದೆ ಕೇಳಿ । ಚೋದಿಗವೊಂದ । ನುಡಿವೆ ಇದೇನು ಹೇಳಿ ॥ ಕಡಿಯಲು ಬಿದಿರನು ಕುಡುಗೋಲನಿಕ್ಕಲು । ಒಡನೆ ರಕ್ತದ ಹೊಳೆ ಹರಿದುದು ಬಿದಿರಿಂದ ॥ ೧ ॥

೬೭. ಭೈರೇಸ ಸಾಮಿಯಂತೆ । ಬಿಸಿಲತಾಪ । ಸೈರಿಸದಿರುವನಂತೆ ॥ ಮಾರಾಜ್ರಿಗ್ ಗುಡಿಕಟ್ಟಿಸಲು ಹೇಳಿ ಎನ್ನುತ್ತ । ಸಾರೆ ಹೆದರಿಕೆಯಿಂದ ಓಡಿ ಬಂದೆವು ನಾವು । ೨ ॥

೬೮. ತಿರುಗಿನೋಡಲು ಇಬ್ಬರು । ಕಿಚ್ಚಲಿಬೆಂದು । ಹರಣವಲ್ಲಿಯೆ ಬಿಟ್ಟರು ॥ ದೊರೆ ನಿಮಗಿದನೆಲ್ಲವ ಹೇಳಿ ಹೋಗಲು ಬಂದೆ । ತೆರಳಿ ಅದೇನೆಂದು ನೋಡಿ ಬನ್ನಿರಿ ದೇವ್ರೆ ॥ ೩ ॥

॥ ಭಾಮಿನಿ ಅರ್ಧ ॥

೬೯. ಮೇದರನ ನುಡಿಕೇಳಿ ನಡುಗಿದ । ಮೇಧಿನಿಪ ಗಿರಿಯೆಡೆಗೆ ಧಾವಿಸಿ । ಆದ ತನ್ನಪರಾಧಕ್ಷಮಿಸೆನೆ ನಭದಿ ಮೊಳಗಿದುದು ॥

॥ ದ್ವಿಪದಿ ॥

೭೦. ಗಿರಿಯ ಮೇಲ್ಗಡೆ ಗಂಗಾಧರೇಶ್ವರನು ಆಗಿ । ಗಿರಿಯ ಕೆಳಗಡೆ ಕಾಲಭೈರವನು ಆಗಿ ॥ ೧ ॥

೭೧. ನೆಲೆನಿಲ್ಲುವೆನು ಬಿದಿರಿನಿಂದ ಗುಡಿ ರಚಿಸು । ಶಿಲೆಯಿಂದ ಚೋಳಕಂಬವ ಮಾಡಿ ನಿಲಿಸು ॥ ೨ ॥

೭೨. ನಿನ್ನ ಮಗನಿಂದ ದೀಪವನು ಬೆಳಗಿಪುದು । ಮುನ್ನ ದೀಪಕರಾಜನೆಂದು ಕರೆಯುವುದು ॥ ೩ ॥

೭೩. ತನಯನನು ಜೋಗಿಯನ್ನಾಗಿ ಬಿಡು ನನಗೆ । ಮನದಿ ಸಂಶಯಗೊಳದೆ ನಡೆ ನಿನ್ನ ಮನೆಗೆ ॥ ೪ ॥

॥ ಭಾಮಿನಿ ॥

೭೪. ದೇವ ನೀನೆಂದುದನು ಸರ್ವವ । ಸಾವಕಾಶವಮಾಡದೆಲೆ ನಾ ।
ಸೇವೆಯೆಂದೇ ಮಾಳ್ಪೆನಲ್ಲದೆ ಮಡಿದ ಮೇದರರ ॥
ಸಾವಿನಾ ಕುರುಹಾಗಿ ರುಂಡದ । ಆಯವನು ಶಿಲೆಯಿಂದ ಕೆತ್ತಿಸಿ ।
ಠಾವಿನಲ್ಲಿಯೆ ನಿಲಿಸುವೆನು ಎನುತರಸ ಪೊರವಂಟಾ ॥ ೧ ॥

ಕಾಂಬೋಧಿ ಝಂಪೆ ॥

೭೫. ಜೋಗಿ ವೇಷವ ತಾಳಿ ತಿರುಪತಿಯ ತಿಮ್ಮಪ್ಪ । ಸಾಗಿ ಚುಂಚನಗಿರಿಯಕಡೆಗೆ ॥ ಬಾಗಿ ನೋಡಿದ ಗುಡಿಯನೊಂದ ಕುಳಿತಿರಲೋರ್ವ । ಜೋಗಿ ಜಡೆ ಹರಡಿರ್ಪ ಬಗೆಯ ॥ ೧ ॥

೭೬. ಮಳೆಯಿಂದ ತೊಯ್ದು ಹೊರನಿಂತಿರ್ಪನನು ಕಂಡು । ಒಳಗೆ ಕರೆಯಲು ಸನ್ನೆಯಿಂದ ॥ ಕುಳಿತ ಜೋಗಿಯ ಕೊಂಚ ಸರಿಯುತ್ತ ಸರಿಯುತ್ತ । ಸ್ಥಳ ಇಲ್ಲದಾಗೆ ಭೈರವನು ॥ ೨ ॥

೭೭. ಕರೆದು ನೆಲೆಯಿತ್ತುದಕೆ ಇನಿತಾಯ್ತೆ ಎನುತ ಬೇ । ಸರಿಸಿ ಹೊರಬಂದ ಭೈರವನ ॥ ಬರುವಂತೆ ಒಳಕರೆದು ಇಲ್ಲೆ ವಿಶ್ರಮಿಸೆನಲು । ಒರೆದ ಭೈರವ ನೀನಾರೆಂದು ॥ ೩ ॥

೭೮. ತಿರುಪತಿಯೆ ನನ್ನೂರು ತಿಮ್ಮಪ್ಪನೆನ್ನುವರು । ಧರೆಯ ಸಂಚಾರಕ್ಕೆ ಹೊರಟೆ ॥ ಕರದ ಪಾತ್ರೆಯದೇನು । ನೀನಾರು ಪೆಸರೇನು । ಒರೆ ಎನಲು ಪೇಳ್ದ ಭೈರವನು ॥ ೪ ॥

೭೯. ಭೈರವೇಶನು ನಾನು ಜೋಗಿದೀಕ್ಷೆಯ ಹೊಂದಿ । ಸೇರಿ ಈ ಗಿರಿಯ ಧ್ಯಾನಿಸುವೆ ॥ ತೋರುವೀ ಪಾತ್ರೆ ಕೇಳುವುದನೀಯುವುದೆನಲು । ಮಾರಪಿತನೆನೆದು ಕಪಟವನು ॥ ೫ ॥

॥ ಭಾಮಿನಿ ॥

೮೦. ಕಪಟನಾಟಕಿ ಭೈರವನನತಿ । ಉಪಚರಿಸೆ ಮಲಗಿದರು ಈರ್ವರು ।
ಅಪರ ರಾತ್ರಿಯೋಳ್ ಪಾತ್ರೆಯನು ಕನವರಿಸೆ ತಿಮ್ಮಪ್ಪ ॥
ಗುಪಿತವರಿಯದೆ ಭೈರವೇಶನು । ಕಪಟಿಯನು ಎಚ್ಚರಿಸೆ ಪಾತ್ರೆಯ ।
ಅಪಹರಿಸೆ ಸಂಚೊಂದ ನೆನೆಯುತಲೆಂದನವನೊಡನೆ ॥ ೧ ॥

॥ ಜಂಜೂಟಿ ಅಷ್ಟ ॥

೮೧. ಭೈರವೇಶನೆ ನಾವು ಕೂಡಿ । ಮೂರು । ಬಾರಿ ಪಗಡೆಯಾಟವಾಡಿ ॥
ಮೂರನೆ ಬಾರಿ ಸೋತವರು ಗೆದ್ದವರನ್ನು । ಸೇರಿ ದಾಸ್ಯವನನು ಕರಿಮುದೆನೆ।
ಭೈರವೇಶನು ಒಪ್ಪಲಾಕ್ಷಣ ॥ ೧ ॥

೮೨. ಆರಂಭವೆರಡು ಆಟವನು । ಗೆದ್ದ ಭೈರವೇಶನು ನೋಡುತದನು ।
ಮಾರಪಿತನು ಕೊನೆಯಾಟದಿ ಕಪಟವ । ತೋರುತಲಿ ಗೆಲಿದವನ ಕೇಳ್ದನು।
ಸಾರತರದಕ್ಷಯದ ಪಾತ್ರೆಯ ॥ ೨ ॥

॥ ಭೈರವಿ ಏಕ ॥

೮೩. ಕೊಡೆನೆಂದೆನ್ನುವ ಭೈರವನನು ತಾ । ಪಿಡಿಯುತ ತಿಮ್ಮಪ್ಪ ॥
ಗುಡಿಯೊಳು ಬಂಧಿಸಿ ಬಾಗಿಲಿಕ್ಕಿಹೊರ । ಗಡೆ ತಾ ಮಲಗಿದನು ॥ ೧ ॥

೮೪. ಭೈರವ ಮಾಯೆಯ ಬಲದಿಂದಲಿ ತಾ । ದ್ವಾರ ಒಡೆದು ಹೊರಗೆ ॥
ಸಾರಿ ನೋಡಿದನು ಜೋಗಿಯ ಚೀಲವ । ತೋರಿತು ರಥವೊಂದು ॥೨॥

೮೫. ಬಡಜೋಗಿಗೆ ಈ ರಥವೇತಕೆ ನಾ । ನಡರಿ ಮೆರೆವೆನುತ ॥
ಒಡನೆ ಬಿಂದುಕೊಳದಲ್ಲಡಗಿಸುತಲಿ । ನುಡಿದ ಸ್ಥಂಭದೊಡನೆ ॥ ೩ ॥

೮೬. ಕೊಳದಲಿ ರಥವನ್ನಿರಿಸಿದ ವಿಷಯವ । ತಿಳಿಸದೆ ಅನ್ಯರಲಿ ॥
ಬಲುಜತನದಿ ಕಾಯ್ದಿರುವುದು ಎನ್ನುತ । ಘಳಿಲನೆ ಪೊರವಂಟಾ ॥ ೪ ॥

೮೭. ರಥಕಾಣದೆ ತಿಮ್ಮಪ್ಪನು ಬಹುಪರಿ । ವ್ಯಥಿಸಿದ ಮನದಲ್ಲಿ ॥
ಪಥತೋರದೆ ಶೇಷನ ಕರೆದು ಸುರಿದ । ರಥವನು ಶೋಧಿಸಲು ॥ ೫ ॥

॥ ಸಾಂಗತ್ಯ ರೂಪಕ ॥

೮೮. ಹಲವೆಡೆ ಹುಡುಕಾಡಿದರು ಭೈರವೇಶನ । ನೆಲೆಯ ಕಾಣದೆ ಆದಿಶೇಷ ॥
ಸುಳಿದ ಚುಂಚನಗಿರಿಬುಡದಲ್ಲಿ ಕಾಣುತ । ಉಲಿಯಿತು ಕಂಬವಾತನಲಿ॥೧॥

೮೯. ಯಾರಯ್ಯ ಬಲುದುಗುಡವ ಹೊತ್ತು ಈ ಕಡೆ । ಸಾರಿ ಬಂದಿಹೆ ಕಾರ್ಯವೇನು
॥ ಭೋರನೆ ಎನಗೊರೆ ಎನೆ ಸಂತಸವತಾಳಿ । ತೋರುವ ಸ್ತಂಭಕಿಂತೆಂದಾ
॥ ೨ ॥

೯೦. ಒಡೆಯನ ಮಣಿಮಯ ರಥವ ಭೈರವ ಕದ್ದು । ಅಡಗಿಸಿರ್ಪನು ನಾನವನ ॥ಹುಡುಕುತ್ತಲಿಹೆ ನೀನು ಕಂಡುದಿದ್ದರೆ ಬೇಗ । ನುಡಿದುಪಕಾರವ ಮಾಡು॥೩॥

೯೧. ಆ ರಥ ಈಕೊಳದಲ್ಲಿದೆ ರಕ್ಷಣೆ । ಭಾರ ಪೊತ್ತಿಹೆ ಎನ್ನೆತ್ತರಕೆ ॥
ಏರೆ ವರೂಥ ಮೇಲಕೆ ಬಪ್ಪುದೆನೆ ಮುದ । ವೇರಿ ಶೇಷನು ಶಿಲೆಯಾದ ॥ ೪ ॥

೯೨. ಚೋಳೂರು ಕಂಬ ಅಣಕಿಸುತ ಆತನಿಗೆಂದ । ಹಾಳಾಯ್ತು ನಿನ್ನಯ ಬಾಳು ॥ ಕಾಲಾಂತರಕು ಹೀಗೆ ಬೆಳೆಯುತ್ತಲಿರು ಎಂದು । ಚಾಳಿಸಿ ನಗುತ ತಾನಿಹುದು ॥ ೫ ॥

॥ **ಕೇದರಗೌಳ ಅಷ್ಟ** ॥

೯೩. ನಾಥಪಂಥದ ಸಿದ್ಧಯೋಗಿಯು ಜನರಿಗೆ । ನೀತಿ ಬೋಧನೆ ಮಾಡುತ್ತ ॥
ಭೂತಳ ಸುತ್ತಿ ಚುಂಚನಗಿರಿ ಭೈರವ । ನಾಥಗೊಂದಿಸಿ ಪೇಳ್ದನು ॥ ೧ ॥

೯೪. ನಿನ್ನ ಸಂಕಲ್ಪದಿ ಜನಿಸದಾತನು ನಾನು । ಧನ್ಯನಾದೆನು ಸ್ವಾಮಿಯೆ ॥
ಮುನ್ನ ಎನ್ನಿಂದಾವ ಕಾರ್ಯವಾಗಲಿಕ್ಕಿದೆ । ಪುಣ್ಯಮೂರುತಿ ಪೇಳ್ವುದು॥೨॥

೯೫. ಮುನ್ನನಾತಪಗೈದ ಈ ಗಿರಿಯನು ಮಠ ವನ್ನಾಗಿ ಪರಿವರ್ತಿಸಿ ॥
ಎನ್ನ ಪಂಚಪ್ರಾಣಮೂರ್ತಿ ಸ್ಥಾಪಿಸಿ ಶಿವೆ । ಯನ್ನು ಸೇರಿಸಿ ಪೂಜಿಸು ॥೩॥

೯೬. ಲೋಕಸಂಚಾರದಲಿಹ ನವನಾಥರು । ಈಕಡೆ ಬರುವರಯ್ಯ ॥
ಬೇಕಾದ ತೆರದಿಂದ ಒಡಗೊಳುತವರನ್ನು । ಲೋಕಕ್ಷೇಮಕೆ ಶ್ರಮಿಸು ॥೪॥

೯೭. ದ್ವಾದಶನಾಥರ ಸ್ಥಾಪಿಸಿ ಧರ್ಮದ । ಬೋಧನೆ ಮಾಡುವುದು ॥
ಭೇದವನೆಣಿಸದೆ ದೀನದಲಿತರನ್ನು । ಆದರಿಸುತಲಿಹುದು ॥ ೫ ॥

॥ **ಭಾಮಿನಿ** ॥

೯೮. ಒರೆಯುತೀಪರಿ ಭೈರವೇಶನು । ತೆರಳೆ ಪುತ್ಥಳಿರಚಿಸಿ ಚುಂಚನ ।
ಗಿರಿಯಲದ ಸ್ಥಾಪಿಸುತ ನಿತ್ಯೋತ್ಸವವ ನಡೆಸಿದನು ॥
ತಿರುಪತಿಯ ತಿಮ್ಮಪ್ಪನಾರಥ । ತರಿಸಿ ಕೊಳದಿಂ ಕುಳ್ಳಿರಿಸುತಲಿ ।
ಪುರಜನರ ಕಿಂಕರರ ನೆರವಿನಲಿ ಎಳೆಯಿಸಿದಯೋಗಿ ॥ ೧ ॥

## ॥ ಕಾಂಬೋಧಿ ಝಂಪೆ ॥

೯೯. ಶಿವರಾತ್ರಿ ನವರಾತ್ರಿ ಪುಣ್ಯದಿನಗಳನರಿತು । ಶಿವನ ಉತ್ಸವವ ಜರುಗಿಸುತ ॥ ಭವಿಪತ್ತಿನಲಿ ನಡೆಯಬೇಕಾದ ಕಾರ್ಯಗಳ । ಶಿವಯೋಗಿ ರೂಪಿಸಿದ ತಾನು ॥ ೧ ॥

೧೦೦. ಆದಿ ಭೈರವನು ನೆಲೆನಿಂತ ಈ ಜಾಗವದು । ಆದಿಚುಂಚನಗಿರಿಯದಾಯ್ತು ॥ ಮೇದಿ ನಿಯೊಳದು ಮುಂದೆ ಆದಿಚುಂಚನಮಠವೆ । ಆದುದ್ಯೆಜನಮನದಿ ನೆಲೆಸಿ ॥ ೨ ॥

೧೦೧. ವಿಮಲ ಗುಣಭರಿತನಾಗಿಹ ಕರ್ಮನಾಥನಿಗೆ । ಸುಮುಹೂರ್ತದಲಿ ಪಟ್ಟಕಟ್ಟಿ ॥ ಕ್ರಮದಿಂದ ಮಠವ ನಡೆಸುವ ಪರಿಯನರುಹಿ ನಿ । ರ್ಗಮಿಸಿದನು ತಪಕೆ ಶಿವಯೋಗಿ ॥ ೩ ॥

## ॥ ಮಧ್ಯಮಾವತಿ ತ್ರಿವುಡೆ ॥

೧೦೨. ಇತ್ತ ಬಾನಂದೂರಿನಲಿ ಜಪ । ವೆತ್ತಿರುವ ಸುಭೆದಾರ ವಂಶದಿ । ಸತ್ಯವಂತನು ಚಿಕ್ಕಲಿಂಗನು । ಉತ್ತಮೋತ್ತಮನೆನ್ನಿಸಿ ॥ ಮೆರೆಯುತಿಹನು॥೧॥

೧೦೩. ಮಡದಿ ಬೋರಮ್ಮನಲಿ ಜನಿಸಿದ । ಹುಡುಗ ಗಂಗಾಧರನು ವಿದ್ಯೆಯ । ಪಡೆದು ಕರಣಿಕನಾಗಿ ಮಠದಲಿ । ದುಡಿಯುತಿರ್ದನು ನೇಮದಿ ॥ ಸುಗುಣ ನಿಧಿಯು ॥ ೨ ॥

೧೦೪. ಎಳವೆಯಿಂದ ವಿರಕ್ತ ಭಾವದಿ । ಕಳೆಯುತಿಹ ದಿನ ಲಗ್ನಗೈಯ್ಯಲು । ಗೆಳೆಯ ಶರಬಣ್ಣನಲಿ ಕೇಳಿಸೆ । ಒಲವ ತೋರದೆ ಇರಲಿಕೆ ॥ ಕರೆಸಿ ಪೇಳ್ದ ॥ ೩ ॥

೧೦೫. ಪಿತೃಋಣತೀರಿಸಲು ಸತಿಯಲಿ । ಪುತ್ರರನು ಪಡೆಯುವುದು ಸದ್ಗತಿ । ಮತ್ತೆ ಸಿದ್ಧಿಪುದಿದಕೆ ಸಮ್ಮತಿ । ಇತ್ತಪುದು ಎನೆ ಪೇಳ್ದನು । ಪಿತಗೆ ನಮಿಸಿ ॥ ೪ ॥

### ॥ ಕಾಪಿ ಅಷ್ಟ ॥

೧೦೬. ತಂದೆ ಚಿತ್ತಯಿಸು ಬಿನ್ನಪವ ತಾವು । ನೊಂದುಕೊಳ್ಳದೆ ತಿಳಿವುದು ಎನ್ನ ಮನವ ॥ ಹೊಂದೆ ಸಂಸಾರವ ಮಡದಿ ಮಕ್ಕಳ ಮೋಹ । ದಿಂದ ಜೀವನವ್ಯರ್ಥ । ವೆಂದು ನಾ ಗ್ರಹಿಸಿಹೆ ॥ ೧ ॥

೧೦೭. ಮರವ ನಿರೀಕ್ಷಿಸು ತಾತ । ಜಲ । ದೊರತೆ ಹೀರುತ ಪಡೆವುದು ಫಲವ್ರಾತ॥ ನರರಿಗೆ ಅದನಿತ್ತು ಹಸುತೃಷೆನೀಗಿಸಿ । ನೆರಳಿನಾಶ್ರಯವಿತ್ತು । ನೆರೆತೃಪ್ತಿಪಡುವುದು ॥ ೨ ॥

೧೦೮. ಜನಹಿತ ಕಾರ್ಯವ ಮಾಡಿ । ತನು । ಮನವ ಸಮರ್ಪಿಸಿ ಜನುಮ ನೀಡಾಡಿ ॥ ಘನಮೋಕ್ಷ ಹೊಂದಲು ಸನ್ಯಾಸ ಪಡೆಯುವೆ । ಮನದಿ ನೋಯದಿರೆಂದು । ಅಣುಗತಾ ನುಡಿಯಲು ॥ ೨ ॥

### ॥ ಭಾಮಿನಿ ॥

೧೦೯. ತನಯನಾಡಿದ ನುಡಿಗೆ ಲಿಂಗನು । ಮನದಿ ಕಳವಳಿಸಿದನು ಪುನರಪಿ ।
ತ್ರಿಣಯ ನೆನೆದಂತಾಗಲೆನ್ನುತ ಮಗನ ಮುಂಡಾಡಿ ॥
ದಿನದ ಹೊಲಗೆಲಸದಲಿ ದಣಿದಿಹೆ । ಜನನಿ ಕೈತುತ್ತೀಯೆ ಕಾಯ್ವಳು ।
ಮನೆಗೆ ಪೋಗುವುದೆನುತ ಪೊರಟರು ಉಭಯರೊಂದಾಗಿ ॥ ೧ ॥

### ॥ ಸಾಂಗತ್ಯ ರೂಪಕ ॥

೧೧೦. ಸ್ವಾಮಿರಮಾನಂದನಾಥ ಮಠವನತಿ । ನೇಮದಿಂದಲಿ ಪಾಲಿಸುತ್ತ ॥ ತಾಮನಗಂಡು ವೃದ್ಧಾಪ್ಯವ ಮುಂದಿನ । ಸ್ವಾಮಿಯ ಬಗೆಗೆ ಯೋಚಿಸಿದಾ ॥ ೧ ॥

೧೧೧. ಮುಂದಕೀಮಠದಲ್ಲಿ ಧರ್ಮ ಸಂಸ್ಕೃತಿಯನ್ನು । ಚಂದದಿ ಪ್ರಸರಣಗೊಳಿಸಿ ॥ನೊಂದಿಹ ಬಡವರ್ಗ ಅನ್ನವಸತಿಯಿತ್ತು । ಬಂಧುವಿನಂತೆ ಕಾಣುವರು॥೨॥

೧೧೨. ತಿಳಿದಿರ್ದೆಯಾದೊಡೆ ಪೇಳಯ್ಯ ನೀನೆಂದು । ಬಳಿಗೆ ಕರೆದು ಶಿಷ್ಯನಲ್ಲಿ ॥ ಸಲೆವಿಚಾರಿಸೆ ಪಾದ ಮೂಲಕ್ಕೆ ಪೊಡಮಟ್ಟು । ಬಳಿಕೆಂದ ಶಿಷ್ಯ ಅರಿತುದನು ॥ ೩ ॥

೧೧೩. ಬಾನಂದೂರಿನ ಚಿಕ್ಕಲಿಂಗನ ತನಯನು । ಜ್ಞಾನಿ ಸದ್ಗುಣಿ ದೈವಭಕುತ ॥
ಏನೆಂಬೆ ಎಳೆವೆಯಿಂದಲೆ ಸನ್ಯಾಸವ ಕೊಳ್ಳೆ । ಜಾನಿಸುತಿಹನಂತೆ ದಿಟವು
॥ ೪ ॥

೧೧೪. ಬಾಲ್ಯದಿ ಹಿಪ್ಪೆಯಮರದಡಿ ಕುಳಿತಿರ್ದು । ಕಾಲ ಭೈರವನ ಧ್ಯಾನಿಸುವ ॥
ವೇಳೆಗೆ ಹೆಡೆಬಿಚ್ಚಿ ಸರ್ಪಬಿಸಿಲಿನ ಝಳ । ಬೀಳದಂದದಿ ನಿಲ್ವದಂತೆ ॥೫॥

೧೧೫. ಸೋಮಸನ್ನಿಭನನ್ನು ಬರುವಂತೆ ತಿಳಿಹಿರ್ಪೆ । ಈ ಮಠದಧಿಪತಿಯಾಗಿ ॥
ನೇಮಿಸುವುದು ಸೂಕ್ತವೆನಲು ಗಂಗಾಧರ । ಸ್ವಾಮಿಗೊಂದಿಸಿ ನಿಂದಿರಲ್ಕೆ
॥ ೬ ॥

॥ **ಶಂಕರಾಭರಣ ತ್ರಿವುಡೆ** ॥

೧೧೬. ಪರಮಹಂಸರು ತಾ ನರೇಂದ್ರನ । ಬರುವಿಕೆಯ ಕಾಯ್ದಂದದಿ ॥
ತರಳ ನಿನ್ನನು ಕಾಯುತಿರ್ದೆನು । ಪರಮತೋಷವನಾಂತೆನು ॥ ೧ ॥

೧೧೭. ಧನ್ಯನಾ ಸನ್ಯಾಸದೀಕ್ಷೆಯ । ಮುನ್ನ ಎನಗದನೀವುದು ॥
ಕಣ್ಣನೀರನ್ನೊರೆಸಿ ಬಡವರ । ಉನ್ನತಿಗೆ ನಾ ಶ್ರಮಿಸುವೆ ॥ ೨ ॥

೧೧೮. ಸದಯ ಮುಂದೀ ಮಠಕೆ ನಿನ್ನನು । ಅಧಿಪತಿಯನಾಗಿಸುವೆನು ॥
ಇದನು ಮುನ್ನಡೆಸುವ ಪರಿಯ ನೀ । ಮುದದಿ ಪೇಳುವುದೆನ್ನಲು ॥ ೩ ॥

೧೧೯. ಶರಣರಲಿ ಜಾಗೃತಿಯ ಸೃಷಿಸಿ । ನಿರುತ ಧರ್ಮವ ಬೋಧಿಸಿ ॥
ನರರ ಧೌಷ್ಟ್ರ್ಯವ ಕೊನೆಗೊಳಿಸಿ ಸು । ಸ್ಥಿರದ ಶಾಂತಿಯ ನೀಡುವೆ ॥ ೪ ॥

೧೨೦. ಕಂದ ನೀನೀ ದೀಕ್ಷೆಗೊಳ್ಳಲು । ತಂದೆ ತಾಯ್ ಸಮ್ಮತಿಪರೆ ॥
ನೊಂದುಕೊಳ್ಳರೆ ಅವರ ಕಣ್ಣೀ । ರಿಂದ ಏಳಿಗೆಯಪ್ಪುದೆ ॥ ೫ ॥

೧೨೧. ಗುರುವೆ ತಾಯಿಯು ತಂದೆ ದೇವರು । ಸರುವ ಭಕ್ತರೆ ಮಕ್ಕಳು ॥
ಒರೆಯುತೀ । ಪರಿ ಕರೆತರುವೆನೆಂ । ದೆರಗಿಗುರುವಿಗೆ ಪೊರಟನು ॥ ೬ ॥

॥ ಕೇದಾರಗೌಳ ಅಷ್ಟ ॥

೧೨೨. ಚಿಕ್ಕಲಿಂಗನು ತನ್ನ ಕುವರನ ಕರೆದೆಂದ । ಉಕ್ಕುವ ಕಣ್ಣೀರ ತಡೆದು ॥
ಸಿಕ್ಕಿದ ಅವಕಾಶ ಶಿವಕೃಪೆ ದೀನರ । ದುಃಖವ ಶಮನಿಪುದೆಂದ ॥ ೧ ॥

೧೨೩. ಗಂಗಾಧರನ ಇಚ್ಛೆಯಂತೆ ಸನ್ಯಾಸವ । ಅಂಗೀಕರಿಸಲಿಹೆನು ॥
ತಂಗುತ ಮಠದಲ್ಲಿ ಸರ್ವಜೀವಿಗಳಿಗೆ । ಮಂಗಳ ಬಯಸುವೆನು ॥ ೨ ॥

೧೨೪. ಸುರಿವ ಕಂಬನಿಯಿಂದ ಬೋರಮ್ಮ ಕಂದನ । ಶಿರವನಾಘ್ರಾಣಿಸುತ ॥
ಕರುಳ ಬಳ್ಳಿಯಲೋಕೋದ್ಧಾರಕರ್ಪಿಸುವೆನು । ತೊರರೆದು ವ್ಯಾಮೋಹವನ್ನು
॥ ೩ ॥

೧೨೫. ಮುನಿಪನಾದರು ಸರ್ವಮಾನ್ಯನಾದರು ತಾಯ । ಋಣಮುಕ್ತನಾಗಲಾರ ॥
ಜನನಿ ನೀ ಸರ್ವವ ತಿಳಿದಾಕೆ ಹರಸುತ್ತ । ಅಣುಗನ ಬೀಳುಗೊಳ್ಳು ॥೪॥

೧೨೬. ಆದಿ ಚುಂಚನಗಿರಿ ಮಠನಿನ್ನ ಕಾಲದಿ । ಸಾಧಿಸಿ ಪ್ರಗತಿಯನ್ನು ।
ಮೇಧಿನಿಯೊಳು ಘನಕ್ಷೇತ್ರವಾಗಲಿ ಎಂದು । ಆದರದಲಿ ಕಳುಹೆ ॥ ೫ ॥

॥ ಕಾಂಬೋಧಿ ಝಂಪೆ ॥

೧೨೭. ಶ್ರೀರಮಾನಂದ ಸ್ವಾಮಿಗಳು ಶಿವ ಸಾನಿಧ್ಯ । ಸೇರಿರಲು ಮಠದ ಸೇವಕನು
॥ ದೂರದಿಂದೈತಂದ ಭಕ್ತರನು ಮನ್ನಿಸುತ । ಸಾರಿದನು ಗುರುಗಳಭಿಮತವ
॥ ೧ ॥

೧೨೮. ಬಾಲಗಂಗಾಧರಾನಾಥನನು ಗುರುವಾಗಿ । ಒಲ್ಯೆಸುವುದು ಎನುತ ಬರೆದು
॥ ಕಾಲವಾದರು ಸರ್ವಸಿದ್ಧತೆಯು ನಡೆದಿಹುದು । ಜ್ವಾಲಪೀಠವನೇರಲಿಹರು
॥ ೨ ॥

೧೨೯. ವೇದ ಘೋಷಗಳಿಂದ ಕರೆತಂದು ಸ್ವಾಮಿಯನು । ಆದಿಪೀಠದೊಳು ಕುಳ್ಳಿರಿಸೆ
॥ ತಾ ಧರಿಸಿ ಮುಕುಟವನು ಪೂಜೆಯನು ಪೂರೈಸಿ । ಮೋದಗೊಳಿಸುತ
ಪೇಳ್ದರವರು ॥ ೩ ॥

೧೩೦. ಶಿವನಕಿಂಕರ ನಾನು ಅವನಿಚ್ಛೆಯಂದದಲಿ । ತವಸೇವೆ ಮಾಡಲೆಂದೆನುತ ॥
ತವಕದಿಂದಿಹೆ ಲೋಕಕಲ್ಯಾಣಕಾಗಿ ನಾ । ದಿವ ರಾತ್ರಿ ಎನದೆ ಶ್ರಮಿಸುವೆನು
॥ ೪ ॥

೧೩೧. ಎನ್ನಗುರು ಹಾಕಿಕೊಂಡಿರುವ ಯೋಜನೆಗಳನು । ಮುನ್ನ ಅನುಷ್ಠಾನ ಮಾಡುವರೆ ॥ ಚಿನ್ಮಯಾತ್ಮಕ ಶಕ್ತಿ ನೀಡಲೀ ಮೇಣ್ ನಿಮಗೆ । ಸನ್ಮಂಗಳವ ಮಾಡಲವನು ॥ ೫ ॥

೧೩೨. ಗುರುಪೀಠ ಆಡಂಬರದಿ ಮೆರೆಯೆ ಇರದಯ್ಯ । ಅರಿತು ಹಸಿವರಿಗನ್ನವನ್ನು ॥ ಧರೆಯಲಿಹ ಅಜ್ಞರಿಗೆ ಜ್ಞಾನಾಮೃತವನಿತ್ತು । ಪರಹಿತಕೆ ದುಡಿಯಬೇಕಿಹುದು ॥ ೬ ॥

**ಮಂಗಲ (ಯಮನ್ ಕಲ್ಯಾಣಿ ತ್ರಿವುಡೆ)**

ಮಂಗಳಂ ಜಯಮಂಗಳಂ ಶುಭ । ಮಂಗಳಂ ತ್ರಿಪುರಾರಿಗೆ ॥
ಅಂಗಜಾರಿ ಭುಜಂಗ ಭೂಷ ಸಿ । ತಾಂಗ ಭವ ಭಯಹಾರಿಗೆ ॥ ೧ ॥

******ಸಮಾಪ್ತ*******

" ಶ್ರೀ ಗೋಪಾಲಕೃಷ್ಣಯ ನಮಃ "

॥ ಶ್ರೀ ಸಾಯಿಬಾಬಾ ಪ್ರಸನ್ನ: ॥

# ಶ್ರೀ ಶಿರಡಿ ಸಾಯಿ ಬಾಬಾ ಮಹಾತ್ಮೆ

# ಅನುಕ್ರಮಣಿಕೆ

## ಪಾತ್ರ ಪರಿಚಯ

೧. ಈಶ್ವರ
೨. ಪಾರ್ವತಿ
೩. ಭಾರಧ್ವಾಜ
೪. ಗಂಗಾಭವ – ಪತ್ರಿವಾಸಿ
೫. ದೇವಗಿರಿ – ಗಂಗಾಭವನ ಹೆಂಡತಿ
೬ ವೃದ್ಧಬ್ರಾಹ್ಮಣ – (ಈಶ್ವರ)
೭ ಕೆಲಸದಾಕೆ – (ಪಾರ್ವತಿ)
೮. ಸಾಯಿಬಾಬಾ
೯. ಮಾಲ್ಸಾಪತಿ – ಖಂಡೋಬಾ ದೇವಸ್ಥಾನದ ಅರ್ಚಕ
೧೦. ದ್ವಾರಕನಾಥ – ಶಿರಡಿಯ ಮುಖಂಡ
೧೧. ತಾತ್ಯಾಕೋತೆ – ಶಿರಡಿವಾಸಿ
೧೨. ಬಾಯಾಜಾಬಾಯಿ – ತಾತ್ಯಾಕೋತೆಯ ತಾಯಿ
೧೩. ಚಾಂದಖಾನ – ದೂಪಖೇಡದ ಪಟೇಲ
೧೪. ಕಾಶೀರಾಮ – ಬಟ್ಟೆ ವ್ಯಾಪಾರಿ
೧೫. ಪುರಂಧರಕಾಕಾ –ಶಿರಡಿವಾಸಿ
೧೬. ದರೋಡೆಕೋರರು
೧೭. ವ್ಯಾಪಾರಸ್ಥರು – ೨ (ಒಬ್ಬ ಹಿಂದು, ಇನ್ನೊಬ್ಬ ಮುಸ್ಲಿಮ್)
೧೮. ಲಕ್ಷ್ಮೀ – ಶಿರಡಿವಾಸಿ ಹುಡುಗಿ
೧೯. ಮಹಿಳೆಯರು – ೨ (ಮುಂದುವರೆದಿದೆ)
೨೦. ಬಾಗೋಜಿ ಸಿಂಧೆ – ಕುಷ್ಠವ್ಯಾಧಿ ಪೀಡಿತ
೨೧. ದಾಸಗಣು
೨೨. ಪಂಢರಿನಾಥ
೨೩. ಕಾಕಾಮಹಜನಿ
೨೪. ಜಗೇಶ್ವರ ಭೀಷ್ಮ

೨೫. ವಿಲಾಸಿನಿ
೨೬. ವಿಶ್ವನಾಥ – ವಿಲಾಸಿನಿಯ ಮಲಮಗ
೨೭. ಮಾಧವರಾವ್ ದೇಶಪಾಂಡೆ (ಶ್ಯಾಮ)
೨೮. ಬಾಪೂಗೀರ– ಗೋಸಾಮಿ
೨೯. ಜಟಕಾಸಾಭಿ
೩೦. ನಾನಾ ಸಾಹೇಬ ಚಂದೋರ್ಕರ್
೩೧. ಪುಂಡಲೀಕರಾವ್ – ವಕೀಲ
೩೨. ಬಾಣಸಿಗ
೩೩. ವಾಸುದೇವಾನಂದ (ತೇಂಬೆ ಸ್ವಾಮಿ)
೩೪. ದಾರಿಹೋಕ
೩೫. ಲೋಭಿ ಧನಿಕ
೩೬. ಧನಿಕನ ಹೆಂಡತಿ
೩೭. ಗೌರಿ – ಅರ್ಚಕನ ಮಗಳು
೩೮. ವೀರಭದ್ರ – ಗೌರಿಯ ಪತಿ (ಮುಂದುವರೆದಿದೆ.)
೩೯. ಬಸಪ್ಪ – ದೇವಸ್ಥಾನದ ಮುಕ್ತೇಸರ
೪೦. ರಾಮಚಂದ್ರ ಪಾಟೇಲ
೪೧. ಬಾಯಾಜಿ ಪಾಟೇಲ

ನೆಲ ಅಗಿಯುವ ಆಳುಗಳು, ನೃತ್ಯತಂಡ

---

ವಿ.ಸೂ :– ೧ ರಿಂದ ೩ನೇ ಪ್ರಕರಣದವರೆಗೆ ಅಗತ್ಯವಾಗಿ ಆಡಿ, ಮುಂದೆ ಅಗತ್ಯವೆಂದು ಕಂಡು ಬರುವ ಹಾಗೂ ಆಡಲು ಅನುಕೂಲವಾದ ಪ್ರಕರಣಗಳನ್ನು ಆಡುವುದು ಉತ್ತಮ. ಅಲ್ಲದೆ ಈ ಪ್ರಸಂಗ ಆಡುವ ಮೊದಲು ಸಾಯಿ ಚರಿತ್ರೆಯನ್ನು ತರಿಸಿಕೊಂಡು ಓದಿ ಆಡುವುದು ಸೂಕ್ತ.

# ನಾಂದಿ ಪದ್ಯ (ಭಾಮಿನಿ)

ಶ್ರೀ ವಿನಾಯಕಗೆರಗಿ ಮೊದಲಲಿ ।
ದೇವಿ ಶಾರದೆಯನ್ನು ಸ್ತುತಿಸುತ ।
ಭಾವಜಾರಿಯ ಜಾಯೆ ಕಾತ್ಯಾಯಿನಿಯ ಬಲಗೊಂಡು॥
ಆವಗಂಭಕುತಾವಳಿಯ ನೆರೆ ।
ಕಾವ ಸಾಯೀನಾಥನಾ ಅಡಿ ।
ದಾವರೆಗೆ ಮಣಿಯುತ್ತ ವರ್ಣಿಪೆನೀ ಕಥಾಮೃತವಾ ॥ರಾ॥

# ೧
# ಸಾಯಿಬಾಬಾರ ಪೂರ್ವ ವೃತ್ತಾಂತ

**॥ ಕಾಂಭೋದಿ ಝಂಪೆ ॥**

೧. ಪುರಹರನು ರಜತಗಿರಿಯಲ್ಲಿ ಶಿವೆಯೊಡಗೊಂಡು ।
ಹರುಷಮನನಾಗಿ ನಾಟ್ಯದಲಿ ॥
ನಿರತನಾಗಿರೆ ಭಾರಧ್ವಾಜ ಮುನಿ ಸಂಕಲ್ಪ ।
ಭರಿತಮನನಾಗಿ ನಡೆತಂದಾ ॥ ೧ ॥

೨. ಬಂದ ಮುನಿಯನು ಕಂಡು ಚಂದ್ರಶೇಖರನು ಕರೆ ।
ತಂದು ಉಪಚರಿಸಿ ಮಿಗೆ ನುಡಿದಾ ॥
ಬಂದ ಕಾರಣವೇನು ಸಂಕೋಚಗೊಳದುಸುರು ।
ಎಂದೆನಲು ಕರಮುಗಿದು ಪೇಳ್ದಾ ॥ ೨ ॥

**॥ ಸುರಟಿ ಏಕ ॥**

೩. ಲಾಲಿಸು ಪರಮೇಶ । ಭಕುತರ । ಪಾಲಿಪ ಜಗದೀಶ ।
ವ್ಯಾಳಭೂಷ ನೀನರಿಯದುದೇನಿದೆ ।
ಭೂಲೋಕದ ಜನರೇಳಿಗೆ ಕುಸಿದುದು ॥ ೧ ॥

೪. ಜಾತಿಮತ್ಸರ ನಿಂದೆ । ದೇವರ । ಭೀತಿ ತಪ್ಪಿದೆ ತಂದೆ ॥
ನೀತಿ ಮೀರಿ ಬಡಿದಾಡುವ ಸುತರಿಗೆ ।
ನೀ ತೆರಳುತ ಸರಿಮಾರ್ಗವ ತೋರ್ರೈ ॥ ೨ ॥

೫. ಸರಿ ಸಮಯಕೆ ಬಂದೆ । ಲೋಕದ । ಪರಿ ಗಮನಕೆ ತಂದೆ ॥
ಬರುವೆನು ಮೂರವತಾರದಿ ಮರ್ತ್ಯಕೆ ।
ಸರಿದಾರಿಗೆ ಕರತರಲಿಹೆ ಜನರನು ॥ ೩ ॥

೬. ಮೊದಲು ಶಿರಡಿ ಸಾಯಿ । ಬಳಿಕಿಲಿ । ಚದುರ ಸತ್ಯಸಾಯಿ ॥
ಮುದದಿ ಪ್ರೇಮ ಸಾಯಿಯು ನಾನಾಗುತ ।
ಒದಗಿಪೆ ಕ್ಷೇಮವ ಎಂದು ಸುರಿದ ಶಿವ ॥ ೪ ॥

॥ ಕೇದಾರಗೌಳ ಅಷ್ಟ ॥

೭ ಪತ್ರಿ ಎಂಬೂರಲ್ಲಿ ಗಂಗಾಭವನು ತನ್ನ ।
ವೃತ್ತಿನಿರತನಾಗುತ ॥
ಪತ್ನಿಯಾಗಿಹ ದೇವಗಿರಿಯಮ್ಮನನು ಕರೆ ।
ಯುತ್ತತಾನಿಂತೆಂದನು ॥ ೧ ॥

೮. ಬಿರುಗಾಳಿ ಜಡಿಮಳೆ ಸುರಿಯುತ್ತಲಿದೆ ಊರು ।
ನೆರೆನೀರಿನಲಿ ನಿಂತಿದೆ ॥
ಹರಿಗೋಲ ಕಾಯಲು ತೆರಳುವೆ ನದಿಯೆಡೆ ।
ಇರು ಧೈರ್ಯಗೆಡದೆ ನೀನು ॥ ೨ ॥

೯. ಶಿವನನ್ನು ಅನುದಿನ ಬೇಡುತ್ತಲಿದ್ದರು ।
ಕುವರನ ನೀಡಲಿಲ್ಲ ॥
ತವ ಸಾಂಗತ್ಯವ ಬಿಟ್ಟು ಏಕಾಂಗಿ ನಿಶಿಯಲ್ಲಿ ।
ರುವ ಬಗೆಯೆಂತು ನಾನು ॥ ೩ ॥

೧೦. ಭಕ್ತವತ್ಸಲನಾದ ಶಶಿಶೇಖರನು ಸರ್ವ ।
ಶಕ್ತನು ಮನದಿಷ್ಟವ ॥
ಯುಕ್ತ ಕಾಲಕೆ ಈವ ಕಿಂಕರರನು ಕಾವ ।
ಭಕ್ತಿಯಿಂದಲಿ ಭಜಿಸು ॥ ೪ ॥

॥ ಭಾಮಿನಿ ॥

೧೧. ಮಡದಿಯನು ಸಂತೈಸುತಲಿ ನದಿ ।
ಯೆಡೆಗೆ ಸಾರಲು ಇತ್ತ ಬಾಗಿಲ ।
ಜಡಿದು ಒಳಸೇರುತ್ತ ಮಲಗಿರೆ ದೇವಗಿರಿಯಮ್ಮ ॥

ಬಡಿದ ಸಪ್ಪಳವಾಗೆ ಭಯದಲಿ ।
ಗಡಬಡಿಸಿ ತಾನೆದ್ದು ನೋಡಲು ।
ಮೃಢನು ವೃದ್ಧಾಕಾರ ವಿಪ್ರನ ವೇಷದಲಿ ನುಡಿದಾ ॥ ೧ ॥

॥ ಸಾಂಗತ್ಯ ರೂಪಕ ॥

೧೨. ಜಡಿಮಳೆ ಹೊರಗಡೆ ಸುರಿಯುತ್ತಿಹುದು ದೇಹ ।
ನಡುಗುತ್ತಲಿದೆ ಚಳಿಯಿಂದಾ ॥
ಕೊಡುವಿಯಾದರೆ ಆಶ್ರಯವ ರಾತ್ರಿ ಇಲ್ಲಿದ್ದು ।
ನಡೆವೆ ಊರಿಗೆ ನಾಳೆ ನಾನು ॥ ೧ ॥

೧೩. ನಲ್ಲನು ನಾವೆ ರಕ್ಷಣೆಗಾಗಿ ತೆರಳಿರ್ಪ ।
ಇಲ್ಲಿನಾ ಏಕಾಂಗಿ ಇಹೆನು ॥
ಒಲ್ಲೆನೆಂದರೆ ದೋಷ ಕೊಳ್ಳಿ ಈ ಚಾಪೆಯ ।
ಅಲ್ಲೆ ಚಾವಡಿಯಲ್ಲಿ ಮಲಗಿ ॥ ೨ ॥

೧೪. ಬೆಳಗಿಂದ ಆಹಾರ ಸೇವಿಸಿಲ್ಲವು ತಾಯೆ ।
ತಿಳಿಗಂಜಿಯಾದರು ನೀಡಿ ॥
ಒಳಿತಕ್ಕು ನಿಮಗೆನೆ ಹಿಟ್ಟ ಬೇಯಿಸಿ ಕೊಟ್ಟು ।
ಒಳಸರಿವಳ ಕಂಡು ಪೇಳ್ದಾ ॥ ೩ ॥

೧೫. ನರದ ಸೆಳೆತದಿಂದ ಬಳಲುತ್ತಲಿಹೆನಮ್ಮ ।
ಕರದಿಂದ ಕಾಲ್ಗಳನೊತ್ತಿ ॥
ಬರಿಸಬೇಹುದು ನಿದ್ದೆ ಎನಲು ಕಳವಳಗೊಂಡು ।
ಹರನರಸಿಯ ಬೇಡಿಕೊಳಲು ॥ ೪ ॥

॥ ಭಾಮಿನಿ ॥

೧೬. ಮರೆಯಹೊಕ್ಕೆನು ತಾಯೆ ಧರ್ಮವ ।
ತೊರೆಯದಂದದಿ ಕಾವ ಹೊಣೆ ತವ ।
ಶಿರದ ಮೇಲಿದೆ ಎಂದು ಕೂಗಲು ದೇವಿ ದಯೆದೋರಿ ॥
ತರುಣಿಯೋರ್ವಳ ಕಳುಹಿಸಿರೆ ತಾ ।
ನಿರಿಸಿದಳು ಹಾರುವನ ಸೇವೆಗೆ ।
ಹರ ಗಿರಿಜೆ ಪ್ರತ್ಯಕ್ಷರಾಗುತ ಒರೆದರಾಕೆಯಲಿ ॥ ೧ ॥

॥ **ಸೌರಾಷ್ಟ್ರ ತ್ರಿವುಡೆ** ॥

೧೭. ಮಗಳೆ ಚಿಂತಿಸಬೇಡ ಮನಸಿನ । ಬಗೆಯನರಿತಿಹೆ ಓರ್ವ ಕಂದನ ।
ಮಗುಳೆ ಕುವರಿಯನೀವೆನೆಂದಳು । ಜಗದಜನನಿ ॥ ೧ ॥

೧೮. ನಗುತ ಪರಶಿವನೆಂದ ನಿನ್ನಯ । ಒಗೆತನವ ಸಾರ್ಥಕ್ಯಗೊಳಿಸುವ ।
ಮಗನೆ ನಾನಾಗುತ್ತಜನಿಸುವೆ । ಜಗದಿ ಮುಂದೆ ॥ ೨ ॥

॥ **ಕಾದಾರಗೌಳ ಅಷ್ಟ** ॥

೧೯. ಗಿರಿಜೆಯ ವರದಂತೆ ದೇವಗಿರಿಯು ಮರು ।
ವರುಷ ಪುತ್ರಿಯ ಪಡೆದು ॥
ಎರಡನೆ ಗರ್ಭದಿ ಪಡೆಯುತ್ತ ಕಂದನ ।
ಪೊರೆಯುತ್ತಲಿರಲಾಕೆಯು ॥ ೧ ॥

೨೦. ಮೂರನೆ ಬಾರಿ ಮಡದಿ ಗರ್ಭದರಿಸಲು ।
ತೋರೆ ವೈರಾಗ್ಯ ಭಾವ ॥
ನೀರೆಯ ಕರೆದು ಗಂಗಾಭವ ಪೇಳಿದ ॥
ಸಾರುವೆ ತಪಕೆನ್ನುತ ॥ ೨ ॥

೨೧. ಪತಿಯ ಸಾಂಗತ್ಯವ ತೊರೆದು ಜೀವಿಸುವುದು ।
ಪತಿವ್ರತೆ ಧರ್ಮವಲ್ಲ ॥
ಹಿತ ನಿಮಗಾದರೆ ನಾನೂ ಬರುವೆನೆಂದು ।
ಮತಿಯುತೆ ಪೊರಟಳಂದು ॥ ೩ ॥

॥ **ದ್ವಿಪದಿ** ॥

೨೨. ಅಡವಿ ಮಾರ್ಗದಿ ಪ್ರಸವ ವೇಧನೆಯು ತೋರೆ ।
ಹಡೆದ ಶಿಶುವನು ತೊರೆದು ಪತಿಯನ್ನು ಸೇರೆ ॥ ೧ ॥
೨೩. ಸೂಫಿಸಂತನು ಶಿಶುವ ಕೊಂಡೊಯ್ದು ಗೃಹಕೆ ।
ಜೋಪಾಸನದಿ ಸೇರಿಸಿದನು ಗುರುಮಠಕೆ ॥ ೨ ॥

೨೪. ವರುಷ – ಹದಿನಾರರಲಿ ಶಿರಡಿಯೆಡೆ ಬಂದ ।
ಮರದ ನೆರಳಲಿ ಧ್ಯಾನಪರನಾಗಿ ನಿಂದ ॥ ೩ ॥

## ೨
## ಸಾಯಿಬಾಬರು ಶಿರಡಿಯಲ್ಲಿ ಮೊದಲಬಾರಿ ಕಾಣಿಸಿಕೊಂಡದ್ದು

॥ ಸೌರಾಷ್ಟ್ರ ತ್ರಿವುಡೆ ॥

೨೫. ಪರಮಪಾವನವೆನಿಪ ಶಿರಡಿಯ । ಮರದನೆರಳಲಿ ಕುಳಿತು ಧ್ಯಾನಿಪ ।
ತರುಣ ತಪಸಿಯ ಮಾಲ್ಸಾಪತಿ ತಾ । ನಿರುಕಿಸಿದನು ॥ ೧ ॥

೨೬. ಎಂಥ ಪ್ರಭೆಯೊ ಮೊಗದಿ ಮತ್ತಿ । ನ್ನೆಂಥ ಮಹಿಮನೊ ತಿಳಿಯದಾದುದು।
ಎಂತಿವನನಾನರಿವೆನೆನ್ನುತ । ಸಂತಗೆಂದಾ ॥ ೨ ॥

೨೭. ಆರು ನೀನೆಲೆ ಬಾಲ ಅಹರ್ನಿಶಿ । ಘೋರತರ ತಪದಲ್ಲಿ ನಿಂದಿಹೆ ।
ಆರು ಮಾತಾಪಿತರು ಜನಿಸಿದ । ಊರದೆಲ್ಲಿ ॥ ೩ ॥

೨೮. ಜಗವ ಸೃಜಿಸಿದ ದೇವನಾತನ । ಮಿಗಿಲು ಮಾತಾಪಿತರ ಕಾಣೆನು ।
ಅಘಹರನು ಕಳುಹಲ್ಕೆ ನಾನೀ । ಜಗಕೆ ಬಂದೆ ॥ ೪ ॥

೨೯. ಈತ ಅಸಮಾನ್ಯನು ಕಣಾ ಎಂ । ದಾತನನು ದೇಗುಲಕೆ ಕರೆತರೆ ।
ಆತನನು ತಡೆಯುತ್ತ ದ್ವಾರಕ । ನಾಥನೆಂದಾ ॥ ೫ ॥

೩೦. ಬಡಫಕೀರನ ಒಳ ಪ್ರವೇಶಿಸೆಬಿಡೆನು ತಾನೆನುತಿರಲು ಮಾಲ್ಸಾ ।
ಒಡನೆ ದೈವಾವೇಷ ತಾಳುತ । ನುಡಿದನಿಂತು ॥ ೬ ॥

೩೧. ಪೋಗಿಅಗೆಯಿರಿ ಕುಳಿತ ಸ್ಥಳವನು । ಆಗಲರಿವುದು ಮಹಿಮೆ ಹಿಂದಾ ।
ಜಾಗದಲಿ ತಪಗೈದ ಮೋಹವ । ನೀಗಿಕೊಂದಾ ॥ ೭ ॥

॥ ಭಾಮಿನಿ ಅರ್ಧ ॥

೩೨. ದೇವನಾದೇಶದಲಿ ಅಗೆದರು ।
ಬೇವಿನಾ ಮರದಡಿಯ ಉರಿಯುವ ।
ದೀವಿಗೆಯ ಕಂಡಚ್ಚರಿಯಲಿರೆ ತಪಸಿ ನಡೆತಂದು ॥

॥ **ಸಾರಂಗ ಅಷ್ಟ** ॥

೩೩. ಬರಿದೆ ಹಾಳ್ಗೆಡಹದಿರಿ । ಸುಸ್ಥಳವಿದು । ಪರಿಯ ಪೇಳುವೆ ಕೇಳಿರಿ ॥
ಗುರುವರ ಈ ಹಿಂದೆ । ಉರುತರ ತಪಗೈದು ।
ನೆರೆ ಸಮಾಧಿಗೆ ಸಂದ । ಪರಮ ಪಾವನ ಸ್ಥಳ ॥ ೧ ॥

೩೪. ಗುರುವಾರ ಶುಕ್ರವಾರ । ಬರುತ ಶಿರ । ವೆರಗಲು ಪಾಪಹರ ॥
ತರಿದ ಮಣ್ಣನು ಮುಚ್ಚಿ । ಸರಿಗೊಳಿಸಿರಿ ಭೇದ ।
ಮರೆತು ಬಾಳಿರಿ ಎಂದು । ಸರಿದನಾ ಊರಿಂದಾ ॥ ೨ ॥

॥ **ಸಾಂಗತ್ಯ ರೂಪಕ** ॥

೩೫. ಮರುದಿನ ಮರದಡಿ ನೋಡೆ ತಾತ್ಯಾಕೋತೆ ।
ತರುಣ ತಪಸಿ ಕಾಣದಿರಲು ॥
ಭರಿತ ವಿಸ್ಮಯಗೊಂಡು ಊರೆಲ್ಲಾ ಅಲೆದರೂ ।
ಇರವ ಕಾಣದೆ ಮಾತೆಗುಸುರೆ ॥ ೧ ॥

೩೬. ಪುರದ ಪುಣ್ಯವೆ ರೂಪತಾಳ್ದಿಲ್ಲಿ ಬಂದರೂ ।
ಗುರುತಿಸಲಾರದಾಯ್ತೆಮಗೆ ॥
ತೊರೆದು ಊರನು ಪೋದಯಾವಾಗ ಕಾಣ್ವೆ ನೆಂ ।
ದುರುತಾಪಮನದಿ ಮರುಗಿದಳು ॥ ೨ ॥

# ೩

# ಸಾಯಿಬಾಬಾ ೨ನೇ ಬಾರಿ ಶಿರಡಿಗೆ ಬಂದು ನೆಲೆನಿಂತುದು

॥ ಕಾಂಭೋದಿ ಝಂಪೆ ॥

೩೭. ದೂಪಖೇಡಾ ಗ್ರಾಮದಧಿಕಾರಿ ಸುಗುಣ ಪ್ರ ।
ದೀಪನಾಗಿಹ ಚಾಂದಖಾನ ॥
ತಾಪಮನದಿಂದಿಹನು ತನ್ನ ನೆಚ್ಚಿನ ಹಯವು ।
ರೂಪದೋರದ ಬಗೆಯ ನೆನೆದು ॥ ೧ ॥

೩೮. ಆಳು ಮಾಡಿದ ಕಾರ್ಯ ಹಾಳು ಎಂಬುದು ದಿಟವು ।
ಬಾಳ ದಿನವಾಯ್ತು ಹೋಗಾಡಿ ॥
ವೇಳೆಗಳೆವುದು ಸೂಕ್ತವಲ್ಲವೆಂದು ಗೃಹದಿಂದ ।
ಬೀಳುಗೊಂಡನು ಹುಡುಕಲೆನುತ ॥ ೨ ॥

॥ ಭಾಮಿನಿ ॥

೩೯. ಬರುತಕಂಡನು ಬಯಲ ಮಧ್ಯದಿ ।
ಮರದ ನೆರಳಲಿ ಕುಳಿತ ತರುಣನ ।
ಪರಮತೇಜಃಪುಂಜವದನದ ಬಾಲಯೋಗಿಯನು ॥
ಸ್ಫುರಿಸೆಗೌರವ ಭಾವ ಸನಿಹಕೆ ।
ಸರಿದು ನಿಂದಿಹನನ್ನು ಕಾಣುತ ।
ಕರುಣೆಗಣ್ಣಲಿ ಕರೆದು ನುಡಿಸಿದ ಏನಿದೇನೆನುತ ॥ ೧ ॥

॥ ಜಂಜೂಟಿ ಅಷ್ಟ ॥

೪೦. ಏನಯ್ಯ ಪಾಟೀಲ ಇತ್ತ । ಬರ । ಲೇನು ಕಾರಣ ಚಿಂತಿಸುತ್ತ ॥
ಆನನ ಕಂದಿದೆ ಪಥ ಶ್ರಮದಲಿ ಅನು । ಮಾನಗೊಳ್ಳದೆ ಪೇಳು ಒದಗಿದ ।
ಹಾನಿವೃದ್ಧಿಗಳೇನೆ ಇರಲದ ॥ ೧ ॥

೪೧. ತುರಗವೊಂದನು ಕಳಕೊಂಡೆ । ಮಾಸ । ಎರಡಾಯ್ತು ಆತಂಕಗೊಂಡೆ ॥
ಅರಸುತ್ತ ಈ ಕಡೆ ಬರಲಾಯ್ತು ನಿಮ್ಮನ್ನು ।
ನಿರುಕಿಸಿದ ನಾ ಧನ್ಯಕುದುರೆಯ । ಪರಿಯ ತಿಳಿದರೆ ಅರುಹಬೇಹುದು॥೨॥

೪೨. ಪೋಗಯ್ಯ ಪೊದೆಯಾಚೆ ಜವದಿ । ತೃಷೆ । ನೀಗಿಸಿಕೊಳುತಿದೆ ಕಿರುತೊರೆ ತಟದಿ ॥

ಸಾಗಿ ನೀನಲ್ಲಿಗೆ ಕೊಂಡು ಬಾ ಇಲ್ಲಿಗೆ ।
ನೀಗಿಕೊಳ್ಳುತ ಪಥದ ಶ್ರಮವನು । ಹೋಗಬಹುದೈ ಬಳಿಕ ಊರಿಗೆ ॥೩॥

॥ **ಭಾಮಿನಿ** ॥

೪೩. ಕೇಳಿ ಅಚ್ಚರಿಗೊಂಡು ಬಂದರೆ ।
ಹೇಳಿದಂದದಿ ವಾಜಿ ಕಾಣಲು ।
ಮೇಲೆನಿಪ ಸಂತೋಷದಲಿ ತಾಬಂಧಿಸಿದನದರ ॥

ಬಾಲತಪಸಿಗೆ ಎನ್ನ ಹೆಸರನು ।
ಹೇಳಿದವರಾರೆನ್ನ ಕುದುರೆಯ ।
ಮೂಲ ತಿಳಿದಾ ಪರಿಯದೆಂತೆನುತ್ತೈದ ಅವನೆಡೆಗೆ ॥ ೧ ॥

॥ **ಆರ್ಯ ಸವಾಯಿ ಏಕ** ॥

೪೪. ಹೊಗೆ ಸೊಪ್ಪನು ಹದಗೊಳಿಸುತ ಚಿಲುಮೆಗೆ ।
ಹೊಗಿಸುತ ಸಟುಕವ ಪಿಡಿಯುತಲಿ ॥
ಲಗುಬಗೆಯಲಿ ನೆಲಕುಕ್ಕಲು ಬೆಂಕಿಯು ।
ಉಗಿಯುತ ಮೇಣ್ ಜಲವುಕ್ಕಿರಲು ॥ ೧ ॥

೪೫. ಹುಕ್ಕವ ಸೇದಿದ ಬಳಿಕವನಿತ್ತನು ।
ಪಕ್ಕದಿ ಕುಳಿತ ಪಟೇಲನಿಗೆ ।
ಮುಕ್ಕುತ ಧೂಮವ ತಪಸಿಯನ್ನು ಎವೆ ।
ಯಿಕ್ಕದೆ ನೋಡುತ ಬಳಿಕೆಂದಾ ॥ ೨ ॥

॥ **ಕೇದಾರಗೌಳ ಅಷ್ಟ** ॥

೪೬. ಉಪಕಾರ ಬಹಳಾಯ್ತು ಮನೆಗೊಯ್ದು ನಿಮ್ಮನ್ನು।
ಉಪಚರಿಸುವ ಬಯಕೆ ॥
ಕುಪಿತರಾಗದೆ ಬಂದು ಆಸೆ ಪೂರೈಸುವ
ಕೃಪೆದೋರಬೇಕೆನಲು ॥ ೧ ॥

೪೭. ಇಂದು ನಾಬರಲಾರೆ ನಾಳೆ ಖಂಡಿತವಾಗಿ ।
ಬಂದೇ ಬರುವೆ ನಾನಾಗಿ ॥
ಎಂದು ಸಂತೈಸಿ ಪಟೇಲನ ಬೀಳ್ಕೊಂಡ ।
ಮಂದಹಾಸವ ಬೀರುತ ॥ ೨ ॥

೪೮. ಕೆಲವು ದಿವಸ ಪಟೇಲನ ಮನೆಯಲಿ ಬಲು ।
ಗೆಲುವಿಂದ ತಪಸಿಯಿರೆ ॥
ಬಳಿಕೊಂದು ದಿನ ಕರಮುಗಿದು ಪಟೇಲನು ।
ತಿಳಿಸಿದ ವಾರ್ತೆಯನು ॥ ೩ ॥

೪೯. ಎನ್ನ ಮೈದುನನಿಗೆ ಶಿರಡಿಯ ವಧುವನ್ನು ।
ಮುನ್ನ ನಿಶ್ಚಯಿಸಿರುವೆ ॥
ಕನ್ನೆಯ ಮನೆಯಲ್ಲೆ ನಿಬಾ ನೀವು ಬಂದರೆ ।
ಮನ್ಮನ ತೋಷಿಪುದು ॥ ೪ ॥

೫೦. ಶಿರಡಿಯೆ ಅದು ನನ್ನ ಗುರುಸ್ಥಾನ ಖಂಡಿತ ।
ಬರುವೆನೆನ್ನುತ ಒಪ್ಪಲು ॥
ಸರ್ವರು ದಿಬ್ಬಣಕೂಡಿ ಪೊರಟರಂದು ।
ಶಿರಡಿಯ ಸೇರಲೇಕೆ ॥೫॥

॥ ಭಾಮಿನಿ ಅರ್ಧ ॥

೫೧. ಶಿರಡಿ ಹೊರಬಾಹೆಯಲಿ ದಿಬ್ಬಣ ।
ವಿರಲು ವಿಶ್ರಾಂತಿಯಲಿ ಬಳಿಗೈ ।
ತರುತ ಮಾಲ್ಸಾಪತಿಯು ಸ್ವಾಗತ ಕೋರುತಿಂತೆಂದಾ ॥

॥ ಕಲ್ಯಾಣಿ ಅಷ್ಟ ॥

೫೨. ಬಾರಯ್ಯ ಸಾಯಿ ಬಾರೊ । ಸುಸ್ವಾಗತ । ಬಾರಯ್ಯ ಕರುಣೆದೋರೊ ॥
ಊರಿಂದ ನೀನಂದು ಸಾರಿದ ದಿನದಿಂದ ।
ದಾರಿಗಾಣದೆ ನೊಂದೆ । ನೀನಾಗಿಯೇ ಬಂದೆ ॥ ೧ ॥

೫೩. ನಿನ್ನಾಗಮನದಿಂದಲಿ । ಈ ಶಿರಡಿಯ । ಮಣ್ಣುಪಾವನವಾಗಲಿ ॥
ಇನ್ನೆಂದು ಇಲ್ಲಿಂದ ತೆರಳಲಾಗದು ತಂದೆ ।
ನಿನ್ನ ವಾಸಕೆ ಯೋಗ್ಯ । ಮಂದಿರ ಇಹುದಿಲ್ಲಿ ॥ ೨ ॥

॥ **ಸಾಂಗತ್ಯ ರೂಪಕ** ॥

೫೪. ಮದುವೆಕಾರ್ಯಗಳೆಲ್ಲ ಮುಗಿದ ಬಳಿಕ ತಮ್ಮ ।
ಸದನಕ್ಕೆ ತೆರಳುವ ಸಮಯ ॥
ಪದುಳದಿ ಪಾಟೀಲ ಸಾಯಿಯ ಬಳಿಗೈದಿ ।
ಪದಕೆರಗುತ ನುಡಿಸಿದನು ॥ ೧ ॥

೫೫. ನಾಳೆಯೆ ದೂಪಖೇಡಕೆ ಮರಳಲು ಯೋಗ್ಯ ।
ಕಾಲವೆಂದಿಹರು ಪೋಗುವೆವು ॥
ಏಳಬೇಹುದು ಕ್ಲಪ್ತಕಾಲಕೆನ್ನಲು ಬಾಬಾ ।
ಪೇಳಿದ ಮನದ ಯೋಚನೆಯ ॥ ೨ ॥

೫೬. ಸಾಧುಸಂತರು ನಡೆದಾಡುವ ಸ್ಥಳವಿದು ।
ಮೋದ ನೀಡುವುದೆನ್ನ ಮನಕೆ ॥
ಆಧರಿಸುವ ಮಂದಿ ಇಹರಿಲ್ಲ ಕೆಲದಿನ ।
ವಾದರೂ ಇದ್ದುನಾಬಹೆನು ॥ ೩ ॥

೫೭ ಬಳಿಕ ಪಾಟೀಲನು ಮಾಲ್ಸಾಪತಿಯ ಕರೆ ।
ಕಳುಹಿಸಿ ಪೇಳ್ದನಾತನೊಳು ॥
ತಳುವದೀತಗೆ ಬೇಕಾಗಿರುವ ವಸ್ತುಗಳಣಿ ।
ಗೊಳಿಸುವ ಹೊಣೆ ನಿನಗೆಂದಾ ॥ ೪ ॥

೫೮. ಪುಣ್ಯಪುರುಷನೀತ ಸೇವೆಗೈಯುತಲೆನ್ನ ।
ಜನ್ಮಸಾರ್ಥಕ್ಯಗೊಳಿಸುವೆನು ॥
ಮುನ್ನ ತಾತ್ಯಾಕೋತೆ ಕಾಶೀರಾಮರು ಸೇವೆ ।
ಯನ್ನ ಗೈವರು ಶ್ರದ್ಧಾಮನದಿ ॥ ೫ ॥

## ೪
## ಕಾಶೀರಾಮನು ದರೋಡೆಕೋರರನ್ನು ಭಂಗಿಸಿ ಬಂದುದು

॥ ಕಾಂಭೋದಿ ಝಂಪೆ ॥

೫೯. ದ್ವಾರಕಾಮಯಿಯಲ್ಲಿ ನೆಲೆನಿಂತ ಬಾಬನಿಗೆ ।
ಸಾರತರ ಸಲಕರಣೆಯಿತ್ತು ॥
ಮಾರಾಟ ಮಾಡಿ ಬಟ್ಟೆಯ ಕಾಶೀರಾಮ ತಾ ।
ಊರತ್ತ ಪೊರಟ ವಹಿಲದಲಿ ॥ ೧ ॥

೬೦. ಅತ್ತ ಚೋರರ ತಂಡ ಹಲವು ಕಡೆ ದಾಳಿಯ ।
ನ್ನಿತ್ತು ಸುಲಿಯುತ್ತ ಪಯಣಿಗರ ॥
ಮೊತ್ತವನು ಪೀಡಿಸುತ ಬರೆಕಾಶೀರಾಮ ಬರು ।
ವತ್ತ ನೋಡುತ್ತ ಗಹಗಹಿಸಿ ॥ ೨ ॥

೬೧. ಅದೊ ನೋಡಿ ದೂರದಲಿ ಬರುವ ಪಯಣಿಗನೋರ್ವ ।
ಹುದುಗಿಸಿಹ ಗಂಟ ಕಂಕುಳಲಿ ॥
ಸದೆದವನ ವಶಪಡಿಸಿಕೊಳ್ಳುವರೆ ಅಡ್ಡೈಸಿ ।
ಗದರಿಸುತ ಬಳಿಕೆಂದ ಚೋರ ॥ ೩ ॥

॥ ಶಂಕರಾಭರಣ ಮಟ್ಟೆ ॥

೬೨. ಯಾರು ನೀನು ಕಂಕುಳಲ್ಲಿ । ತೋರದಂತೆ ಅಮುಕಿ ಹಿಡಿದ ।
ಬಾರಿಗಂಟನಿತ್ತು ತೆರಳು । ದಾರಿಹೋಕನೆ ॥ ೧ ॥

೬೩. ಧನದ ಗಂಟಿದಲ್ಲ ಸಾಯಿ । ಘನ ಮಹಿಮರು ಅವರಿಗೀಯ ।
ಲೆನುತ ಕೊಂಡ ವಸ್ತು ಒಡವೆ । ಮನೆಗೆ ಒಯ್ಯುವೆ ॥ ೨ ॥

೬೪. ಸುಳ್ಳನಾಡಿ ವಂಚಿಸುವೆಯಾ । ಒಳ್ಳಿತಾಯ್ತು ಅದನೆ ಕೊಟ್ಟು ।
ನಿಲ್ಲದ್ಯೆದರೊಳಿತೆನಲ್ಕೆ । ಕಳ್ಳಗೆಂದನು ॥ ೩ ॥

೬೫. ಭಕ್ತಿಯಿಂದ ಈಯಲೆನುತ । ಶಕ್ತಿಮೀರಿ ಕೊಂಡೆನೆನಲು ।
ಕತ್ತಿಯಿಂದ ಝಡಿಯೆ ಖಳನು । ತತ್ತರಿಸಿದನು ॥ ೪ ॥

॥ ಭಾಮಿನಿ ॥

೬೬. ಧರೆಗೊರಗೆ ಮೂರ್ಛೆಯಲಿರಾಮನು ।
ಕರದ ಗಂಟನು ಕಿತ್ತು ಚೋರರು ।
ಸರಿದರತ್ತಲು ಸಾಯಿ ಬಾಬರ ಅಭಯ ಧ್ವನಿಸಲ್ಕೆ ॥
ಭರಿತ ಉತ್ಸಹಗೊಂಡು ಸನಿಹದೊ ।
ಳಿರುವ ಖಡ್ಗವಕೊಂಡು ಧಾವಿಸು ।
ತೆರಗಿ ಖಡ್ಗವ ಝಳಪಿಸುತ ಇದಿರಾದ ಚೋರರಿಗೆ ॥

॥ ಘಂಟಾರವ ಅಷ್ಟ ॥

೬೭. ಎಲ್ಲಿಗೊಯ್ಬಿರಿ ಸೆಳೆದಿಹ ಗಂಟನ್ನು । ಒಳ್ಳೆಮಾತಿಲಿಕೊಟ್ಟರೊಳ್ಳಿತು ।
ಇಲ್ಲದಿರೆ ಒಳಿತಾಗದು ॥ ೧ ॥

೬೮. ಸತ್ತುಹೋಗಿಹೆ ಎನುತ ನಾವ್ ಬಂದರೇ । ಮತ್ತೆ ಬಂದೆಯಾ ದುಡುಕೆ
ಖಡ್ಗದಿ । ಕುತ್ತಿಕೊಲ್ಲುವೆ ಎಂದನು ॥ ೨ ॥

೬೯. ಮರಣಕಾಲಕೆ ಮತಿಯಿಲ್ಲ ನಿಮ್ಮನ್ನು । ತರಿದು ಜನರಿಗೆ ಕೊಡುವ ಕಾಟವ
। ಪರಿಹರಿಪೆ ತಾನೆಂದನು ॥ ೩ ॥

॥ ಭಾಮಿನಿ ಅರ್ಧ ॥

೭೦. ಖಳರ ಸಂಹರಿಸುತ್ತ ರಾಮನು ।
ನೆಲದಿ ಬಿದ್ದಿಹ ಗಂಟ ಕೊಳ್ಳುತ ।
ಕಳವಳದ ಮನದಿಂದ ಬಾಬನಿಗೆರಗಿ ಪೇಳಿದನು ॥

॥ ಅಷ್ಟ ॥

೭೧. ಪಾಹಿಮಾಂಗುರುವರನೇ । ಸಚ್ಚರಿತನೆ । ಸಾಯಿ ದುರಿತ ಹರನೆ ॥
ಸಾಯಲಿರುವ ಎನ್ನಗಾದೆ ಕರುಣೆದೋರಿ ।
ಈಯಲೆನುತ ತಂದೆ ಸ್ವೀಕರಿಪುದು ತಂದೆ ॥ ೧ ॥

೭೨. ನೊಂದೆಯಾ ಬಾ ಬಂಧುವೆ । ನೀಡುವ ಉಡಿ । ಯಿಂದ ಕ್ಷೇಮವ
ಹೊಂದುವೆ ॥
ತಂದ ಕಾಣಿಕೆಯ ಆನಂದದಿ ಕೈಗೊಂಬೆ ।
ಮುಂದೆ ನೆಮ್ಮದಿಗೊಂಡು । ಬಾಳು ಸಂತಸದಿಂದ ॥ ೨ ॥

೫

## ಸಾಯಿಬಾಬಾ ನೀರಿನಿಂದ ಹಣತೆ ಉರಿಸಿದ್ದು

॥ ಕೇದಾರಗೌಳ ಅಷ್ಟ ॥

೭೩. ಯವನ ವಣಿ ಜನೋರ್ವ ತನ್ನ ವ್ಯಾಪಾರದ । ಬವಣೆಯ ಯೋಚಿಪನು॥
ದಿವರಾತ್ರಿ ದುಡಿದರು ಸುಖವಿಲ್ಲವೆನುತಿರೆ । ಅವನೆಡೆಗೈದನೋರ್ವ ॥ ೧ ॥

೭೪. ಏನಣ್ಣಬೇಪಾರ ಹೇಗಿದೆ ಕ್ಷೇಮವೆ । ಮ್ಲಾನಗೊಂಡಿದೆ ವದನ ॥
ನೀನೋರ್ವನೆ ಅಂಗಡಿಯಲಿ ಯಾರನು ಬಿಟ್ಟು ಏನು ಕಾರಣ ಬಂದೆಯೊ
॥ ೨ ॥

೭೫. ಭಿಕ್ಷೆಯ ಬೇಡ್ವಪಕೀರಗೆ ದಿನನಿತ್ಯ ಇಕ್ಕಿದೆ ಎಣ್ಣೆಯನ್ನು ॥
ಪುಕ್ಕಟೆ ಎಷ್ಟೊಂದು ದಿನ ನೀಡಲ್ಕೆ ಹೇಳ । ಲಿಕ್ಕೆಂದು ಬಂದೆನಯ್ಯ ॥ ೩ ॥

೭೬. ಹಣತೆಯ ಹಚ್ಚಿ ಮಸೀದಿಯಲದನಿಟ್ಟು ದಿನನಿತ್ಯ ಉರಿಸುವನು ॥
ಸನುಮತವಲ್ಲ ಇಸ್ಲಾಮಿಗೆ ಇತ್ತರೆ । ಎನಗೆ ಪಾಪವೆಬಹುದು ॥ ೪ ॥

೭೭. ಒಂದಾಗಿ ನಾವೆಲ್ಲ ನಾಳೆಯಿಂದಾತಗೆ । ಬಿಂದು ತೈಲವನೀಯದೆ ॥
ಬಂದಂತೆ ಕಳುಹಿಸುವುದು ಎಂದು ನಿಶ್ಚಯಿಸಿ । ಮಂದಿರ ಸೇರಿದರು ॥೫॥

॥ ಭಾಮಿನಿ ಅರ್ಧ ॥

೭೮. ಮರುದಿವಸ ಬಾಬನಿಗೆ ಎಲ್ಲಿಯೂ । ದೊರೆಯದಿರೆ ಬರಿಗೈಯ್ಯಲಾತನು।
ಬರುವ ಪರಿಯನು ಕಂಡು ಲಕ್ಷ್ಮಿಯು ಪೇಳ್ದಳಾತನಿಗೆ ॥

॥ ಶಂಕರಾಭರಣ ಏಕ ॥

೭೯. ಇಂದು ದೀಪಾವಳಿಯು ನಿಮ್ಮ । ಮಂದಿರದಲಿ ಹಣತೆ ಉರಿವ ।
ಚಂದನೋಡಿ ನಲಿಯಲೆಂದು । ಬಂದೆ ತೋಷದಿ ॥ ೧ ॥

೮೦. ಒಳ್ಳೆ ದಿವಸ ನೋಡಿ ಬಂದೆ । ಇಲ್ಲವಮ್ಮ ತೊಟ್ಟು ತೈಲ ।
ಎಲ್ಲ ವಣಿಜರೊಂದುಗೂಡಿ । ನಿಲ್ಲಿಸಿರುವರು ॥ ೨ ॥

೮೧. ತಂದೆಯನ್ನು ಬೇಡಿ ತೈಲ । ತಂದು ಕೊಡುವೆನೆನುವ ಲಕ್ಷ್ಮೀ ।
ಗೆಂದಹಣತೆ ಉರಿಪೆ ಬಾಬಾ । ರೆಂದು ಕರೆದನು ॥ ೩ ॥

॥ ಭಾಮಿನಿ ॥

೮೨. ನೀರನೆರೆಯುತ ತೈಲಪಾತ್ರೆಗೆ । ವಾರಿಯಲಿ ತುಸುಕುಡಿದು ಬಳಿಕದ ।
ಸೇರಿಸುತ ಅಲ್ಲಿರುವ ಪ್ರಣತಿಗೆ ಬಳಿಕ ಹೊತ್ತಿಸಲು ॥
ಬಾರಿ ಪ್ರಭೆಯನು ಸೂಸಿ ಜ್ವಲಿಸಿದ । ವಾರತೆಯ ಹಬ್ಬಿಸಲು ಲಕ್ಷ್ಮಿಯು ।
ನೇರನೈದುತ ವಣಿಜರಾತನ ಕ್ಷಮೆಯಬೇಡಿದರು ॥ ೧ ॥

॥ ನೀಲಾಂಬರಿ ರೂಪಕ ॥

೮೩. ತಿಳಿಯದೆ ತವ ಮಹಿಮೆಯನಾವ್ । ಕಳುಹಿದೆವಲಾ ಬರಿಗೈಯ್ಯಲೀ ।
ಸಲೆಎಮ್ಮಪರಾಧವಕ್ಷಮಿ । ಸೆಲೆಗುರುದೇವಾ ॥ ೧ ॥

೮೪. ಕೊಟ್ಟುದು ಪರರಿಗೆ ಬರಿದೇ । ಕೆಟ್ಟಿತು ಎಂದೆಣಿಸದಿರು ।
ಕಟ್ಟಿದ ಬುತ್ತಿಯು ಮುಂದಕೆ । ಕಷ್ಟದ ಕಾಲದಲಿ ॥ ೨ ॥

## ೬
# ಬಾಬಾ ಗೋದಿಹಿಟ್ಟಿನಿಂದ ಕಾಲೆರಾ ಓಡಿಸಿದುದು

॥ ಕಾಂಭೋದಿ ಝಂಪೆ ॥

೮೫. ಮಹಿಳೆಯೋರ್ವಳು ತನ್ನ ಗೆಳತಿಯೊಳು ಪೇಳಿದಳು ।
ಬಹಳ ಸೋಜಿಗಸಾಯಿ ನಡತೆ ॥
ತಹರು ಭಿಕ್ಷೆಯನು ಪ್ರತಿದಿನ ಗೋದಿ ಬೀಸುವಾ ।
ಗಹನವೆಂತುಟೋ ಅರಿಯದಾದೆ ॥ ೧ ॥

೮೬. ಇಂದೇ ನಾವ್ ಪೋಗುವುದು ಬಾಬರನ ಒಪ್ಪಿಸುತ ।
ತಂದಿರ್ಪಗೋದಿಯನ್ನೆಲ್ಲ ॥
ಒಂದಾಗಿ ಬೀಸುತ್ತ ತಂದು ರೊಟ್ಟಿಯ ಮಾಡಿ ।
ತಿಂದರೆಮ್ಮನು ಆಕ್ಷೇಪಿಸರು ॥ ೨ ॥

॥ ಭಾಮಿನಿ ಅರ್ಧ ॥

೮೭. ಎನುತ ನಿಶ್ಚಯಗೈದು ಬಂದರು । ವಿನಯದಲಿ ಬಾಬರಿಗೆ ಎರಗುತ।
ಮನದ ಬಯಕೆಯ ಪೇಳ್ದರವರಲಿ ಕರವ ಜೋಡಿಸುತ ।

॥ ಸೌರಾಷ್ಟ್ರ ತ್ರಿವುಡೆ ॥

೮೮. ಏತಕೀಪರಿಹಿಟ್ಟನರೆಯುವ । ಕಾತುರತೆ ಬಿಡಿ ನಾವೆ ಮಾಳ್ಪೆವು ।
ಸೋತಿಹಿರಿ ನೀವೆನಲು ಒಪ್ಪದೆ । ಆತನುಡಿದಾ ॥ ೧ ॥

೮೯. ಕಾಯಕವೆ ಕೈಲಾಸ ಬೀಸಲು । ಆಯಸವು ಎನಗಿಲ್ಲ ಪಡೆದಿಹ ।
ಕಾಯಕಿದು ಭೂಷಣವು ಎನ್ನಲು । ಸಾಯಿಬಾಬಾ ॥ ೨ ॥

೯೦. ನಿಮ್ಮ ಸೇವೆಯ ಮಾಡಬಯಸುತ । ಒಮ್ಮತದಿನಾವ್ ಇಲ್ಲಿಗೈದೆವು ।
ನಮ್ಮ ಬಯಕೆಯ ನಡೆಸಿರೆನ್ನಲು । ಸಮ್ಮತಿಸಿದಾ ॥ ೩ ॥

೯೧. ಹಾಡ ಹಾಡುತ ಬೀಸಿಹಿಟ್ಟನು । ಮಾಡಿ ಪಾತ್ರೆಗೆ ತುಂಬಿ ಹೊರಡುವ ।
ಗಾಢಗಾರ್ತಿಯರನ್ನು ಬಾಬನು । ತಡೆದು ನುಡಿದಾ ॥

॥ ಮಾರವಿ ಏಕ ॥

೯೨. ಎಲ್ಲಿಗೆ ಕೊಂಡೆಯ್ಯುವಿರಿದ ಮೂರ್ಖರೆ । ನಿಲ್ಲಿರಿ ಎನ್ನುತಲಿ ॥
ಹಲ್ಲ ಕಡಿದು ಗರ್ಜಿಪಸಾಯಿಯ ಬಳಿ । ಮೆಲ್ಲನೈದುತವರು ॥ ೧ ॥

೯೩. ಮಕ್ಕಳು ಮನೆಯಲಿ ಹಸಿದಿವೆ ಹೊಟ್ಟೆಗೆ । ಇಕ್ಕಲು ಹಿಟ್ಟಿಲ್ಲ ।
ಭಿಕ್ಷೆಯ ಬೇಡುವ ನಿಮಗಿದು ಬೇಕೇ । ಕಕ್ಕುಲತೆಯ ತಾಳಿ ॥ ೨ ॥

೯೪. ತಿಳಿದಿಲ್ಲವೆ ನೀವ್ ಕಾಲರಾ ಶಿರಡಿಯ । ಬಳಿ ಸುಳಿದಾಡುತಿದೆ ॥
ತಳುವದೆ ಊರಿನ ಗಡಿಯಲಿ ಚೆಲ್ಲಿರಿ । ಕಳೆಯಲು ಜಾಡ್ಯವನು ॥ ೩ ॥

೯೫. ಊರಿನ ಗಡಿಯೆಡೆ ಸಾರುತ ಹಿಟ್ಟನು । ತೂರಿದರ್ನಾರಿಯರು ॥
ಮಾರಿಯು ತೊಲಗಿತು ಜನರಿದ ತಿಳಿಯುತ । ಭೂರಿತೋಷ–ಹೊಂದೆ ॥ ೪ ॥

## ೭
## ಸಾಯಿಬಾಬರು ಸತ್ತ ಹೂಗಿಡಗಳನ್ನು ಚಿಗುರುವಂತೆ ಮಾಡಿದ್ದು

॥ ಕೇದಾರಗೌಳ ಝಂಪೆ ॥

೯೬. ಕಾಡು ಹೂಗಿಡವ ತಂದು । ವನವನ್ನು । ಮಾಡಿರಲು ಬಾಬನಂದು ।
ನೋಡಿಬಳಿಕ ಪುರಂಧರಾ । ನಮನವನು । ಮಾಡಿ ನುತಿಸಿದನು ವಿವರ॥೧॥

೯೭. ನೀವು ಬೆಳೆಸಿದ ತೋಟದಿ । ಅರಳಿರುವ । ಹೂವುಗಳು ತಮ್ಮ ಗುಣದಿ ।
ದೇವರಿಗೆ ಹಿತವಲ್ಲವು । ಸೌರಭದ । ಸೋವಿಲ್ಲ ಸೊಗಸಲ್ಲವು ॥ ೨ ॥

೯೮. ನಗರದಿಂ ತಂದಿರುವೆನು । ಪರಿಮಳಿಪ । ಸೊಗಸೆನಿಪಹೂಗಿಡವನು ॥
ಅಗೆದು ನೆಲನೆಡಲು ಗಿಡವ । ಅನುಮತಿಯ । ಬಗೆಗಾಗಿ ಬೇಡ್ವೆ ಬಿಲವಲ್ಲ
॥ ೩ ॥

೯೯. ಜಗವೆಲ್ಲ ಅವನ ಸೃಷ್ಟಿ ಎಲ್ಲದಕು । ಸಿಗಬೇಕು ಒಂದೆ ದೃಷ್ಟಿ ॥
ಬಗೆಯದಿರು ಭೇದ ಭಾವ । ಎನುತಾತ । ಮೊಗದಿರುಹೆ ಪಡೆದು ನೋವು
॥ ೪ ॥

೧೦೦. ಗುರುತರದ ಆಸೆಯಿಂದೆ । ಬಹಳೆಡೆಯ । ಚರಿಸಿ ಸಂಗ್ರಹಿಸಿ ತಂದೆ ॥
ಅರಿಯದಿರಲೆನ್ನಭಾವ । ಸಾಯಿತಿರ । ಸ್ಕರಿಸಲೇಕಿನ್ನು ಜೀವ ॥ ೫ ॥

೧೦೧. ಅನ್ನ ಆಹಾರತೊರವೆ । ತೊಟ್ಟು ನೀ । ರನ್ನು ಸೇವಿಸದೆ ನಿಲುವೆ ॥
ಎನ್ನುತುಪವಾಸ ನಿಲಲು । ಬಾಬರಲಿ । ಭಿನ್ನೈಸೆ ತಾತ್ಯಬರಲು ॥ ೬ ॥

॥ ಸೌರಾಷ್ಟ್ರ ತ್ರಿವುಡೆ ॥

೧೦೨. ಶರಣನಾದ ಪುರಂಧರನು ತಾ । ತೊರೆಯಲಿಹ ಪ್ರಾಣವನು
ತಮಗಿದು । ತರವೆ ಸಾಂತ್ವನಗೊಳಿಸಲಾರಿರೇ । ಹರಸುತವನ ॥ ೧ ॥

೧೦೩. ತವನಿರಾಕರಣೆಯಲಿನೊಂದಿಹ । ನವನು ಉಪವಾಸದಲಿ ನಿಂದಿಹ ।
ಜವನೆಡೆಗೆ ಸಾಗುವನ ಉಳಿಸುವ । ಹವಣ ತಮಗೆ ॥ ೨ ॥

೧೦೪. ಎಂದ ತಾತ್ಯನ ಕೂಡಿ ಬಾಬನು । ಬಂದು ಉಪವಾಸದಲಿ ಕುಳಿತನ ।
ಮಂದಹಾಸದಿ ಮೈದಡವಿ ಬಳಿ । ಕೆಂದರವಗೆ ॥ ೩ ॥

೧೦೫. ಏಳು ಉಪವಾಸವನು ಕೈಬಿಡು । ನಾಳೆಯೇ ಹೂಗಿಡವ ನೆಡು ಮನ ।
ದಾಳವರಿತೆನು ಎನಲು ದುಗುಡವ । ತಾಳಿ ನುಡಿದಾ ॥ ೪ ॥

೧೦೬. ನೆಟ್ಟು ಫಲವೇನಿಹುದು ಗಿಡಗಳು । ಸುಟ್ಟು ಹೋಗಿವೆ ನೀರ ಕಾಣದೆ ।
ಪಟ್ಟಣದಿ ಹೊಸಗಿಡವ ತರುವೆನು । ನೆಟ್ಟನೈದಿ ॥ ೫ ॥

೧೦೭. ತರುವ ಶ್ರಮಬೇಡಿನ್ನು ತಂದಿಹ । ತರುವನೆ ನೆಡು ಚಿಗುರಿ ನರ್ತಿಪ ।
ಪರಿಯ ನೋಡುವೆಎನುತ ಬಾಬನು । ಹರಸಿ ಕಳುಹೆ ॥ ೬ ॥

೧೦೮. ಒರೆಯಲಸದಳ ಸಾಯಿ ಮಹಿಮೆಯ । ಮರಳಿ ಚೇತನಗೊಂಡು
ಗಿಡಗಳು । ಪರಿಮಳಿಪ ಸುಮರಾಜಿ ನೀಡುತ । ಮೆರೆಯಲಂದು ॥ ೭ ॥

॥ **ಸೌರಾಷ್ಟ್ರ ತ್ರಿವುಡೆ** ॥

೧೦೯. ಇತ್ತ ಸಾಯಿನಾಥ ಧುನಿಯಲಿ । ಹತ್ತಿ ಉರಿಯುವ ಅಗ್ನಿಜ್ವಾಲೆಗೆ ।
ಇತ್ತ ಕರ ತಾ ಹಿಸುಕಿಕೊಳುತಿರೆ । ಭಕನೆಂದಾ ॥ ೧ ॥

೧೧೦. ಏನಿದೇನಿದು ಗುರುವೆ ನಿಮ್ಮನೆ । ಹಾನಿಗೊಳಿಸುತ್ತಿ ಹಿರಿಮನದವಿ ।
ಧಾನವರಿಯೆನು ಎನುತ ಕೇಳಲು । ತಾನು ನುಡಿದಾ ॥ ೨ ॥

॥ **ಘಂಟಾರವ ರೂಪಕ** ॥

೧೧೧. ಎನ್ನನನುದಿನ । ನೆನೆವ ಭಕ್ತನ । ಚಿಣ್ಣನೊರ್ವನ । ಉಳಿಸಿದ ಕಥನ ॥
ತನ್ನಗಂಡನ । ಕರೆಯಕೇಳುತ । ಮುನ್ನ ಸತಿಯಿರೆ । ಶಿಶುವಮರೆತಿರೆ ॥೧॥

೧೧೨. ಉರಿವಬೆಂಕಿಗೆ । ಶಿಶುವು ಬೀಳುವಾ । ಪರಿಯನರಿಯುತ । ಮಗುವ
ಪೊರೆಯುವ ॥ ಭರದಿಕರವನು । ಧುನಿಗೆ ತೂರಿದೆ । ಹರನಕೃಪೆಯಲಿ
ಶಿಶುವ ಸಲಹಿದೆ ॥ ೨ ॥

॥ **ಸಾಂಗತ್ಯ ರೂಪಕ** ॥

೧೧೩. ದೂರದಿ ನಿಂತ ಬಾಗೋ । ಜಿಯ ಕರೆದೆಂದ । ಬಾರಯ್ಯ ಅಳುತಿರ್ಪೆಯಾಕೆ॥
ತಾರಯ್ಯ ಬಟ್ಟೆಯ ಔಷದಿಯನ್ನಿಟ್ಟು । ಜಾರದಂದದಿಕಟ್ಟಿನಿಲಿಸು ॥ ೧ ॥

೧೧೪. ಪ್ರಾರಬ್ಧಕರ್ಮದಿ ಕುಷ್ಠವ್ಯಾಧಿಯುತಾಗಿ । ನಾರುತ್ತಲಿವೆ ಅಂಗಾಂಗಗಳು ॥
ಕಾರಣ ನಿಮ್ಮನಾಮುಟ್ಟಿದೆನಾದರೆ । ಬೇರೊಂದು ಬೇನೆ ನಿಮಗಹದು ॥ ೨॥

೧೧೫. ಮುಟ್ಟರು ಜನರಾರು ನಿನ್ನನ್ನ ಹೊಂದಿಹ । ಕುಷ್ಠವ್ಯಾಧಿಯ ಬಗೆಗಾಗಿ ॥
ಕಷ್ಟವೆ ಬಂದರು ಬರಲಿ ಸೇವೆಯಲಿ ಸಂ । ತುಷ್ಟಿಗೊಂಡರೆಲೇಸು ಮಗನೇ
॥ ೩ ॥

೧೧೬. ಅವರವರಿಷ್ಟಾರ್ಥ ಅರಿತು ಸಲ್ಲಿಸುವಂಥ । ಭವರೋಗ ವೈದ್ಯನೀನಿರಲು ॥
ನವೆಯತ್ತಲಿಹ ನನ್ನ ಬಯಕೆಯ ಸಲಿಸಿರ್ಪೆ । ತವಸೇವೆಯಲಿ ದಿನಗಳೆವೆ
॥ ೪ ॥

# ೮
## ದಾಸಗಣುವಿಗೆ ಪ್ರಯಾಗ ಮತ್ತು ವಿಠಲನ ದರ್ಶನ

॥ ಕಾಂಭೋದಿ ಝಂಪೆ ॥

೧೧೭. ಧುನಿಯ ಮುಂಭಾಗದಲಿ ಧ್ಯಾನಮುದ್ರೆಯ ತಾಳಿ ।
ಘನಮಹಿಮಸಾಯಿ ಇರುವುದನು ॥
ಮನಗಂಡು ದಾಸಗಣು ಬಳಿಸಾರಿ ನಿಂದಿರಲು ।
ತನುವ ತಡವರಿಸುತ್ತ ನುಡಿದಾ ॥ ೧ ॥

೧೧೮. ಯಾವುದೋ ಬಯಕೆಯನು ಹೊತ್ತು ಬಳಿಗೈತಂದ ।
ಭಾವ ಕಾಣುತಲಿಹುದು ಮೊಗದಿ ॥
ಆವು ಕರುವನು ಮರೆಯಬಹುದೆ ಪೇಳೆಂದೆನಲು ।
ಸಾಯಿಗೊಂದಿಸುತ ಮಿಗೆ ನುಡಿದಾ ॥ ೨ ॥

೧೧೯. ಮಂದಾಕಿನಿಯು ಮತ್ತೆ ಯಮುನೆ ಸರಸತಿಯವರು ।
ಒಂದಾಗಿರುವ ಪ್ರಯಾಗದಲಿ ॥
ಮಿಂದು ಬರಬೇಕೆಂದು ಬಹುದಿನದ ಬಯಕೆದಯೆ ।
ಯಿಂದ ಅಪ್ಪಣೆನೀಡಬೇಕು ॥ ೩ ॥

೧೨೦. ಇನಿತೊಂದು ಬಯಕೆ ಯನು ಮನದಲ್ಲೆ ಹುದುಗಿಟ್ಟು ।
ದಿನವೆನಿತು ಕಳೆದುದೊ ವ್ಯರ್ಥ ॥
ನಿನಗಾಗಿ ಅವರಿಂದು ಮಮಪಾದದೆಡೆಯಿಂದ ।
ಹೊನಲಾಗಿ ಹರಿವರಿದೊ ನೋಡು ॥ ೪ ॥

೧೨೧. ನಮನ ಪ್ರಭುವೇ ಏನು ಲೀಲೆ ತವ ಪಾದದಿಂ ।
ಗಮಿಸುತ್ತ ಅತಿ ವಿಲಾಸದಲಿ ॥
ಯಮನ ಭಗಿನಿಯು ಮೇಣು ಹರಿ ತನುಜೆಯರು ಎನುತ ।
ಅಮಿತ ಹರ್ಷದಿ ತಾನು ನಲಿದಾ ॥ ೫ ॥

॥ **ಕೇದಾರಗೌಳ ಅಷ್ಟ** ॥

೧೨೨. ಪುಣ್ಯವಾಹಿನಿಯಲ್ಲಿ ಮಿಂದು ಪಾವನನಾದೆ । ಇನ್ನೊಂದು ಬಯಕೆಯಿದೆ ॥
ಘನ್ನಮಹಿಮನಾದ ಫಂಡರಿನಾಥನ । ಕಣ್ಣಿಂದ ಕಾಣುವುದು ॥ ೧ ॥

೧೨೩. ನೀನಿನ್ನು ಅರಿಯದಾದೆಯ ನಿನ್ನ ವಿಠಲ । ನಾನು ಬೇರಲ್ಲ ಕಾಣೋ ॥
ಗೋಣೆತ್ತಿನೋಡೆಂದು ವಿಠಲರೂಪದಿ । ತಾನೆ ಮೈದೋರಿದನು ॥ ೨ ॥

೧೨೪. ಜಯಪಾಂಡುರಂಗ ಹೇಮಹಿಮಾಂತರಂಗ ಹೇ ॥
ದಯದೋರಿದೆಯಾ ತಂದೆಯೇ ॥
ಲಯವಾಯ್ತು ಜನ್ಮಾಂತರದ ಪಾಪ ತನದೆಂದು।
ಜಯಘೋಷಗೈದನಂದು ॥ ೩ ॥

## ೯

# ಶ್ರೀರಾಮನವಮಿ ಆಚರಣೆಗೆ ಸಾಯಿ ಒಪ್ಪಿಗೆ

॥ **ಸೌರಾಷ್ಟ್ರತ್ರಿವುಡೆ** ॥

೧೨೫. ಉರುಸು ಜಾತ್ರೆಯ ಮುಂಚಿನಾದಿನ । ಸರಸದಲಿಮಾತಾಡಿಗೊಳುತಿರೆ ।
ಒರೆದಮಹಾಜನಿಯೊಡನೆ ಭೀಷ್ಮನು । ಹರುಪದಿಂದಾ ॥ ೧ ॥

೧೨೬. ರಾಮನವಮಿಯ ದಿನವೆ ಜಾತ್ರೆಯು । ರಾಮಚಂದ್ರನ ಹುಟ್ಟು ಹಬ್ಬವ ।
ನೇಮದಂತೆಯೆ ಮಾಡೆ ಶುಭದಾ । ಧಾಮವಹುದು ॥ ೨ ॥

೧೨೭. ಹಿಂದೆ ಜಾತ್ರೆಯ ರಾಮನವಮಿಯ । ಅಂದೆ ಮಾಡಲು ಸಾಯಿಪೇಳಿರೆ ।
ಇಂದು ಅವರನು ಮತಿಯ ಕೇಳ್ವುದು । ಅಂದವಹುದು ॥ ೩ ॥

೧೨೮. ಮನದಿ ನಿಶ್ಚಯಗೈದು ಈರ್ವರು । ಸನುಮತದಿ ತೆರಳುತ್ತ ಬಾಬಗೆ ।
ವಿನಮಿಸಿರೆ ಹರಸುತ್ತ ಪೇಳ್ದನು । ಅನುನಯದಲಿ ॥ ೪ ॥

॥ **ಕಾಫಿ ಅಷ್ಟ** ॥

೧೨೯. ಏನು ಮಾತಾಯ್ತು ವಾಡೆಯಲಿ । ಸುದ್ಧಿ ।
ನೀನೇ ಹೇಳೇನೆ ಕಾಕನಿಂತಮೌನದಲಿ ॥
ತಾನೆ ಅಚ್ಚರಿಗೊಳುತೆಂದನು । ಅನು ।
ಮಾನಿಸುತಲಿ ತನ್ನ ಮನದ ಆಶೆಯನು ॥ ೧ ॥

೧೩೦. ಉರುಸಿನೊಂದಿಗೆ ರಾಮನವಮಿ । ಹಬ್ಬ ।
ನೆರವೇರಿಸುವ ಆಶೆ ಮನಕಾಯ್ತು ಸ್ವಾಮಿ ॥
ಹರುಷದಿ ತಾವು ಸಮ್ಮತಿಸಿ । ನಾಳೆ ।
ಸರ್ವಕಾರ್ಯದಲಿರಬೇಕು ಸಹಕರಿಸಿ ॥ ೨ ॥

೧೩೧. ರಾಮ ರಹೀಮರು ಒಂದೆ । ಬರಿ ।
ನಾಮ ಭೇದವು ಜಗಕೊಬ್ಬನೆ ತಂದೆ ॥
ಸಾಮರಸ್ಯವು ನಿಮ್ಮಲ್ಲಿರಲಿ । ನಾಳೆ ।
ರಾಮನವಮಿಯ ಆಚರಿಸಿ ಒಟ್ಟಿನಲಿ ॥ ೩ ॥

॥ ಭಾಮಿನಿ ಅರ್ಧ ॥

೧೩೨. ಉತ್ಸವದಲಿ ಗುಲಾಲ ಎರಚುವ । ತತ್ಸಮಯದಲಿ ಸಾಯಿಕಣ್ಣಿಗೆ ।
ಬಿತ್ತದಕೆ ಖತಿಗೊಂಡು ರೋಷಾವೇಶದಲಿ ನುಡಿದಾ ॥

॥ ಮಾರವಿ ಏಕ ॥

೧೩೩. ಜಯಘೋಷವ ನಿಲ್ಲಿಸದಿರೆ ನಿಮ್ಮನು । ಲಯಗೊಳಿಸುವೆನೀಗ ॥
ಭಯವಿಲ್ಲದೆ ಮನಬಂದಂತೆಸಗುವ । ನಯಗಾರಿಕೆ ಬೇಡ ॥ ೧ ॥

೧೩೪. ಕಟ್ಟಿಹ ತೊಟ್ಟಿಲ ಹರಿದು ಬಿಸಾಡುತ । ಹುಟ್ಟಡಗಿಪೆ ನಿಮ್ಮ ॥
ಕೆಟ್ಟವರೇ ಹೊರಸಾರಿರಿ ತಪ್ಪಲು । ಸುಟ್ಟುರುಹುವೆಕ್ಷಣದಿ ॥ ೨ ॥

॥ ಸಾಂಗತ್ಯ ರೂಪಕ ॥

೧೩೫. ಕರವ ಮುಗಿವು ಮಹಾಜನಿ ತಾನು ಬೇಡಿದ ।
ಮರೆಯಬೇಕಪರಾಧವಿರಲು ॥
ಮೆರವಣಿಗೆಯ ಕಾಲ ಕೋಪಿಸಿದರೆ ತಾವು ।
ಪರಿಣಾಮ ಎಂತೋ ನಾನರಿಯೆ ॥ ೧ ॥

೧೩೬. ದುಷ್ಟರಾವಣನ ದೌರ್ಜನ್ಯವ ನೆನೆದಾಗ ।
ಸಿಟ್ಟಾದೆ ಮತಿಮಂದವಾಗಿ ॥
ಅಷ್ಟಕ್ಕೆ ಬೆದರಲಾಗದು ಎಂದು ಸಂತೈಸಿ ।
ಒಟ್ಟಾಗಿ ಪೊರಟು ಮುಂಬರಿಯೆ ॥ ೨ ॥

## ೧೦
## ಬಾಬಾ ಮತ್ತು ಶ್ಯಾಮರ ಸಲುಗೆಯ ಸಂಭಾಷಣೆ

॥ ಕೇದಾರಗೌಳ ಅಷ್ಟ ॥

೧೩೭. ಒಂದು ದಿವಸ ವಿಲಾಸಿನಿ ಮಲಮಗನೊಡ । ನೆಂದಳು ಮರುಕದಿಂದ ॥
ಸಂದಿತು ಮಾಸವೆರಡು ಬಂದು ಬಾಬರ । ಸಂದರ್ಶನವೆ ಇಲ್ಲವು ॥ ೧ ॥

೧೩೮. ಎಣಿಸಿದಾಕ್ಷಣವೆ ಕೈಗೂಡದು ಫಲಹಿಂದೆ । ಎನಿತು ತಪವಗೈದರು ॥
ದಿನಬಹುದಮ್ಮ ಸಹನೆಯಿಂದ ಕೆಲದಿನ । ಮನಶುದ್ಧಿಯಿಂದಹುದು ॥ ೨ ॥

೧೩೯. ಇಲ್ಲಿಹರಂತೆ ಶ್ಯಾಮರು ಅವರಿಗೆ ಬಾಬ । ರಲ್ಲಿ ಬಹಳ ಸಲುಗೆ ॥
ಮೆಲ್ಲನವರ ಮನಗೆದ್ದು ಬಾಬರ ಕಂಡು । ಗೆಲ್ಲುವ ಅವರೊಲವ ॥ ೩ ॥

೧೪೦. ಸಮಯ ಸಾಧಿಸಿ ಶ್ಯಾಮರನು ಕಂಡು ವಿನಯದಿ । ನಮಿಸಿ ಸಂದರ್ಶನವ॥
ತಮಗೊದಿಸಬೇಕು ಎನುತ ಕೇಳಲಿಕಾಗಿ । ಸಮಯವ ಉಸುರಿದರು ॥೪॥

೧೪೧. ಗುರುಗಳ ಚಿತ್ತ ಶಾಂತತೆಯಿಂದ ಇರುವುದು । ಅರಿತು ಪೇಳುವೆನಾಗಳೆ ॥
ಹರಿತಂದು ಶ್ರೀ ಫಲಗಂಧವೀಯುವುದೆಂದು । ಒರೆಯುತ್ತ ಕಳುಹಿದರು॥೫॥

॥ ಶಂಕರಾಭರಣ ತ್ರಿವುಡೆ ॥

೧೪೨. ಬಂದು ಬಾಬರ ಪಾದಯುಗಳಿಗೆ । ವಂದಿಸುತ ಫಲನೀಡುತಾ ॥
ತಂದೆಮನದಿಷ್ಟಾರ್ಥ ಪಲಿಸುವು ದೆಂದು ಪೇಳೆ ॥ ೧ ॥

೧೪೩. ಫಲವು ಒಣಗಿದೆ ಹಿಡಿದು ಅಲುಗಿಸೇ । ಘಳಘಳದರವಸೂಸ್ವದು ॥
ಲಲನೆ ಈ ಫಲನೀಡೇ ಕಾರಣ । ತಿಳಿಯದಾಯ್ತು ॥ ೨ ॥

೧೪೪. ಒಡಲು ಒಣಗಿದೆ ಫಲವು ಮೂಡಲಿ । ಕೊಡಿರಿ ಫಲಕೈತಾಕಿಸಿ ॥
ಒಡೆದ ಅರ್ಥವನೀವೆ ಎನಲವ । ನೊಡನೆ ಪೇಳ್ದಾ ॥ ೩ ॥

೧೪೫. ಒಂದು ಸಂವತ್ಸರದಿ ಸಂತತೀ । ಹೊಂದಲಿಹೆನೀ ನಿಶ್ಚಯ ॥
ಎಂದೆನಲು ಸತಿ ಸಂಶಯಿಸೆ ಮಗು । ಕೆಂದ ಶ್ಯಾಮ ॥ ೪ ॥

೧೪೬. ತಾಯೆ ಚಿಂತಿಸಬೇಡ ಶಿಶುವ । ನ್ನೀಯದಿರೆ ಪೇಳ್ದವಧಿಗೆ ॥
ಸಾಯಿಯಾ ತಲೆಒಡೆವೆ ಎನುತವ । ನೀಯಲರ್ಥ ॥ ೫ ॥

೧೪೭. ಏನನೆಂಬೆನು ಪೇಳಿದವದಿಗೆ । ಸೂನುವನು ತಾ ಪಡೆದಳು ॥
ಮಾನಿನಿಯು ಬಾಬರನು ಅನುದಿನ । ಧ್ಯಾನಿಸುವಳು ॥ ೬ ॥

## ೧೧
## ಸಾಯಿ ಬಾಬರು ನಾನಾ ಚಂದೋರ್ಕರರಿಗೆ ಉಧಿ ಕಳುಹಿಸಿದ್ದು

॥ ಕೇದಾರಗೌಳ ಅಷ್ಟ ॥

೧೪೮. ಒಂದು ದಿವಸ ಬಾಪುಗೀರ ಸಾಯಿಯ ಬಳಿ । ಬಂದು ವಂದಿಸು ತೆಂದನು
ಇಂದೆ ಊರಿಗೆ ಹೋಗಬಯಸಿ ಬಂದಿಹೆ ನಲ । ವಿಂದ ಹರಸಿಕಳುಹಿ ॥೧॥

೧೪೯. ಒಳಿತು ಊರಿಗೆ ಪೋಪ ಮುನ್ನ ಜಾಮ್ನೇರಿಗೆ । ಕಳುಹಬೇಕಿದೆ ನಿನ್ನನು ॥
ಘಳಿಲನೆ ನಾನೀವ ಉಧಿಯ ನಾನನಿಗಿತ್ತು । ಬಳಿಕ ಊರಿಗೆ ಪೋಪುದು
॥ ೨ ॥

೧೫೦. ಹೋಗಲೆಂತೈನಾನು ಜಲಗಾಮಿನಿಂ ಮುಂದೇ ಹೋಗಲಾರದು ಬಂಡಿಯ॥
ಹೇಗಾದರೂ ಪೋಪೆನೆಂದರೆ ಹಣವಿಲ್ಲ । ಸಾಗಲೆಂತೈಮುಂದಕೆ ॥ ೩ ॥

೧೫೧. ಚಿಂತಿಸಬೇಕಿಲ್ಲ ಅಲ್ಲಿಂದ ಪಯಣಿಸೆ । ಮುಂತೆ ಅನುಕೂಲಿಪುದು
ಇಂತೆನು ತಾತನ ಒಪ್ಪಿಸಿ ಸಾಯಿಯು । ಸಂತೈಸಿ ಕಳುಹಿದನು ॥ ೪ ॥

॥ ದ್ವಿಪದಿ ॥

೧೫೨. ತ್ವರಿತದಲಿ ಉಗಿಬಂಡಿಯನ್ನೇರಿ ಬಂದ ।
ಸರಿರಾತ್ರಿ ಜಲಗಾಮಿನಲ್ಲಿಳಿದು ನಿಂದ ॥ ೧ ॥

೧೫೩. ತುರುಕನೋರ್ವನು ಗಾಡಿ ಸಹಿತಲ್ಲಿ ಬಂದ ।
ಶಿರಡಿಯವನೆಂದರಿತು ಅವನಿಗಿಂತೆಂದ ॥ ೨ ॥

॥ ಕಾಂಭೋದಿ ಝಂಪೆ ॥

೧೫೪. ಧನಿಯು ಕಳುಹಿದರೆನ್ನ ಕರೆತರಲು ನಿಮ್ಮನ್ನು ।
ಅನುಮಾನಿಸದೆ ಬಂಡಿಯೇರಿ ॥
ಇನನುದಯದೊಳಗೆ ಜಾಮ್ನೇರಿಸೇ ರಿಪೆ ನಿಮ್ಮ ।
ಎನಲೆಂದ ಬಾಪು ಅವನೊಡನೆ ॥ ೧ ॥

೧೫೫. ಬಸವಳಿದಿರುವೆನಯ್ಯ ಏನಾದರೂ ತಿಂದು ।
ಹಸಿವೆ ನೀಗಿಸಿಕೊಂಡು ಬಹೆನು ॥
ತುಸು ನಿಲ್ಲು ಎಂದೆನಲು ಗಂಟು ಹೊರತೆಗೆಯುತ್ತ ।
ನಸುನಗುತಲೆಂದ ನವನೊಡನೆ ॥ ೨ ॥

೧೫೬. ಮರೆತು ಹೋಯಿತು ನೋಡಿ ನಿಮಗಾಗಿ ತಿಂಡಿಯನು ।
ಕರಕಿತ್ತು ಕಳುಹಿರ್ಪರಯ್ಯ ॥
ಪರಿಹರಿಸಿಕೊಳ್ಳಿಕ್ಷುಧೆ ಎಂದು ನೀಡಲು ತಿಂದು ।
ತೆರಳಿದರು ಬಂಡಿಯನ್ನೇರಿ ॥ ೩ ॥

೧೫೭. ಅಲ್ಲಿ ನೋಡಿರಿ ನಮ್ಮ ಧನಿಯ ಮಂದಿರ ಹೋಗಿ ।
ಸಲ್ಲಿಸಿರಿ ತಂದ ಉಧಿಯನ್ನು ॥
ಮೆಲ್ಲಹೋಗಿರಿ ಎಂದು ತುರುಕ ಕಣ್ಮರೆಯಾಗೆ ।
ನಿಲ್ಲದ್ಯೆದುತ ನಾನಗೆಂದ ॥ ೪ ॥

॥ **ಸೌರಾಷ್ಟ್ರ ತ್ರಿವುಡೆ** ॥

೧೫೮. ಸಾಯಿಬಾಬರು ಎನ್ನಕರಕಿದ ।, ನೀಯುತೆಂದರು ನಿಮಗೆ ಒಪ್ಪಿಸೆ,
ಆಯಿತೆನ್ನಯ ಕಾರ್ಯ ಎಂದುಧಿ । ಈ ಯಲಂದ ॥ ೧ ॥

೧೫೯. ಗುರುಕರುಣೆ ಘನವಹುದು ಸ್ಮರಿಸಲು । ಶರಣನಿಗೆ ಒದಗಿದರು
ಕುಳ್ಳಿರು । ಬರುವೆ ವಹಿಲದಿ ಎನುತ ಗೃಹದೊಳ । ಸರಿದನಂದು ॥ ೨ ॥

೧೬೦. ಹಣೆಗೆ ಉಧಿಯನು ತೀಡೆ ಸುಖದಲಿ । ಜನನವಾದುದು ಸುತೆಗೆ ಹರು
ಷದ । ಮನದಿ ಕೇಳಿದ ಹೇಗೆ ಬಂದಿರಿ । ಇನನುದಯಕೆ ॥ ೩ ॥

೧೬೧. ನೀವು ಕಳುಹಿದ ನಿಮ್ಮ ಬಂಡಿಯ । ಬೋವನೋರ್ವನು ತಾನೆ ಎನ್ನಯ।
ಸೋವನರಿಯುತ ತಂದ ನಿಮ್ಮಯ । ಡಾವಿಗೆನ್ನ ॥ ೪ ॥

೧೬೨. ನಾನು ಕಳುಹಿದುದಿಲ್ಲ ಆತನ । ಏನನೆಂಬೆನು ಸಾಯಿ ಮಹಿಮೆಯ ।
ದೀನ ರಕ್ಷಕನೆನುತ ಪೊಗಳಿದ । ನಾನನಂದು ॥ ೫ ॥

## ೧೨
## ಚೇಂಬೆಸ್ವಾಮಿಯ ತೆಂಗಿನ ಕಾಯಿ ಪ್ರಕರಣ

**॥ ಕೇದಾರಗೌಳ ಅಷ್ಟ ॥**

೧೬೩. ಪುಂಡಲೀಕನು ಬಾಣಸಿಗಲ್ಲಿ ಅತಿಮುದ ಗೊಂಡು ತಾ ಪೇಳಿದನು ॥
ಕಂಡು ಬಾಬರ ಸೇವೆ ಸಲ್ಲಿಸಿ ಹರಕೆಯ । ಕೊಂಡು ಬರುವೆನೆನ್ನಲು ॥೧॥

೧೬೪. ದನಿಯೆ ಲಾಲಿಪುದೆನ್ನಬಯಕೆ ಬಾಬರ ಕಂಡು । ಮನಸಾರೆ ಸಂಸ್ತುತಿಸಿ ॥
ಜನುಮ ಸಾರ್ಥಕಗೊಳಿಸಲು ಬಯಸಿಹೆ ತಮ್ಮ । ಅನುಮತಿ ಕಾಯುತ್ತಿಹೆ
॥ ೨ ॥

೧೬೫. ಏಕಿಷ್ಟು ಸಂಕೋಚ ಹೋಗುವ ಒಂದಾಗಿ । ಬೇಕಾದ ಫಲಪುಷ್ಪವ ॥
ಸಾಕಷ್ಟು ತಿನಿಸನ್ನ ಅನುಗೊಳಿಸೈಯೋಗ । ಬೇಕಾತನನು ಕಾಣಲು ॥ ೩ ॥

೧೬೬. ಹೋಗುವ ಮಾರ್ಗದಿ ಚೇಂಬೆಸ್ವಾಮಿಯ ಕಂಡು । ಸಾಗಿದರೊಳಿತೆನ್ನಲು ॥
ಆಗಲೆನ್ನುತಲೊಪ್ಪಿ ನಡೆತರುತಲಿತಲೆ । ಬಾಗಿರೆ ಸಾಧುಪೇಳ್ವ ॥ ೪ ॥

**॥ ದೇಸಿ ಅಷ್ಟ ॥**

೧೬೭. ಏಳಯ್ಯ ಒಳಿತಾಗಲೆಂದು ಹರಸುತ್ತ ।
ಕೇಳಿದ ನೀನೆತ್ತ ಹೊರಟೆ ಎಂದೆನುತ ॥
ಹೇಳುತ್ತಲಿದೆ ಮುಖಭಾವ ತವ ಗತಿಯ ।
ತಾಳುತ್ತ ಸಮಭಾವ ನುಡಿಸು ಸಂಗತಿಯ ॥ ೧ ॥

೧೬೮. ಶಿರಡಿಗೆ ಹೋಗುವ ಭರದಿಂದಲಿಹೆನು ।
ನಿರತ ಬಾಬರ ಧ್ಯಾನ ಮನದಿ ಹೊಂದಿಹೆನು ॥
ಹರನಾತ ಹರಿಯಾತ ಪರಬ್ರಹ್ಮನಾತ ।
ಹರಸಿ ಉದ್ದರಿಸಿ ಕಾಪಾಡುವ ದಾತ ॥ ೨ ॥

೧೭೯. ಕೊಡುವೆನು ನಾನೊಂದು ತೆಂಗಿನಕಾಯಿ ।
ಪಡೆದಾಕ್ಷಣದೆ ಮುದಗೊಂಬನು ಸಾಯಿ ॥
ತೊಡಕಾಗದಿರಲೆಂದು ಎದೆಗೆ ತಾಕಿಸುತ ।
ಕೊಡಲು ತಾ ಪೊರಟನು ಪದಕೆ ವಂದಿಸುತ ॥ ೩ ॥

॥ **ಭಾಮಿನಿ ಅರ್ಧ** ॥

೧೮೦. ಬರುವ ಮಾರ್ಗದಿ ತಿಂಡಿ ಮಾಡಲು । ಪರಮ ಋಷಿಇತ್ತಿರುವ ಶ್ರೀಫಲ ।
ತುರಿದು ಪಾಕವ ಮಾಡಿದನು ಬಾಣಸಿಗ ತಾನು ॥

॥ **ಸೌರಾಷ್ಟ್ರ ತ್ರಿವುಡೆ** ॥

೧೮೧. ಪುಂಡಲೀಕನು ಬಂದು ಬಾಬರ । ಕಂಡು ಕೈಮುಗಿದೆರಗೆಸಂತಸ ।
ಗೊಂಡು ಹರಸುತ ಆತನಲಿ ಬೆಸ । ಗೊಂಡರಂದು ॥ ೧ ॥

೧೮೨. ಎಲ್ಲಿಹುದುಕೊಡು ವಾಸುದೇವನು । ಸಲ್ಲಿಸಿದ ಕಾಣಿಕೆಯನೆನ್ನಲು ।
ಮೆಲ್ಲನದತಾಕೊಡಲು ತಡವುತ । ಸೊಲ್ಲಿಸಿದನು ॥ ೨ ॥

೧೮೩. ಅರಿಯದಾದೆಯ ಪ್ರೀತಿಭಾವನೆ । ಹಿರಿದು ಅವನಿತ್ತಿರುವ ಫಲವನೆ ।
ಹೊರತು ನಾನಿದಕೊಳ್ಳೆಎಲ್ಲಿದೆ । ಅರಿತು ನೀಡು ॥ ೨ ॥
೧೮೪. ಅರಿಯದೆಯೆ ಬಾಣಸಿಗ ಮಾಡಿದ । ಹಿರಿಯ ಅಪರಾಧವನು ಕರುಣೆಯ।
ನಿರಿಸಿಕ್ಷಮಿಸೆಂದೆನಲು ಬಾಬನು । ಹರಸಿ ಕಳುಹೆ ॥ ೪ ॥

## ೧೩
## ವೀರಭದ್ರ–ಬಸಪ್ಪ ಪ್ರಕರಣ

॥ ಕಾಂಬೋಧಿ ಝಂಪೆ ॥

೧೭೫. ಸಾಯಿನಾಥರು ಪೊರಟುನದಿಯೆಡೆಗೆ ನಡೆತಂದು ।
ವಾಯು ಸೇವನೆಗೆ ಕುಳಿತಿರಲು ॥
ವಾಯುವೇಗದಲಿ ಧಾವಿಸುತ ಪಯಣಿಗನೋರ್ವ ।
ಸಾಯಿಪದಕೆರಗಿ ಪೇಳಿದನು ॥ ೧ ॥

೧೭೬. ಅಲ್ಲೊಂದು ಘಟಸರ್ಪಕಪ್ಪೆಯೊಂದನು ಹಿಡಿದು ।
ಮೆಲ್ಲಮೆಲ್ಲನೆ ನುಂಗುತಿಹುದು ॥
ಕಲ್ಲೆಸೆದೆ ದೂರದಿಂ ಬಿಡದೆ ಮಂಡೂಕನನು ।
ಕೊಲ್ಲದುಳಿಯದು ಅಯ್ಯೋ ಪಾಪ ॥ ೨ ॥

೧೭೭. ಇಲ್ಲಿ ನಾನಿರಲಾಗಿ ಹೇಗೆ ಕೊಲ್ಲಲು ಸಾಧ್ಯ ।
ಎಲ್ಲ ಪೂರ್ವಾರ್ಜಿತದ ಕರ್ಮ ॥
ಸೊಲ್ಲಿಸಿಹೆ ಹಿಂದೆ ಎನುತೈದಿ ಬಿಡು ಎನೆ ಸರ್ಪ ।
ಮೆಲ್ಲನೈದಿತು ಕಪ್ಪೆ ತೊರೆದು ॥ ೩ ॥

೧೭೮. ಇದನೆಲ್ಲ ಕಂಡು ವಿಸ್ಮಿತನಾಗಿ ಪಯಣಿಗನು ।
ಹದನವನು ವಿಸ್ತಾರವಾಗಿ ॥
ಸದಮಲರೆ ತನಗುಸುರಬೇಕೆನಲು ಸಾಯಿಗುರು ।
ಮುದದಿಂದ ಕಥೆಯ ಪೇಳಿದರು ॥ ೪ ॥

॥ ಫ್ಲ್ಯಾಶ್ ಬ್ಯಾಕ್ ॥
॥ ಕೇದಾರಗೌಳ ಅಷ್ಟ ॥

೧೭೯. ಧನಿಕನೋರ್ವನು ತನ್ನ ಗೃಹದಲ್ಲಿ ಲಾಭವ । ಗುಣಿಸುತ್ತ ಕುಳ್ಳಿರಲು ॥
ವನಿತೆ ಒಯ್ಯನೆ ಬಂದು ಕಾಲ್ಗೆರಗಲು ಕಂಡು । ಅನುಮಾನಿಸುತ ಕೇಳ್ದನು
॥ ೧ ॥

೧೮೦. ಏನು ಬಿಗ್ರನೆ ಬಂದೆ ಹೊಸ ಸೀರೆಯನ್ನುಟ್ಟು । ನೀನೆತ್ತ ಹೊರಟಿರುವೆ ॥
ಮಾನಿನಿ ಮನೆಗೆ ಭೂಷಣ ಇದನರಿಯದೇ । ಹಾನಿಗೊಳಿಪೆ ಧನವ ॥೨॥

೧೮೧. ಮೃಢನ ದೇಗುಲ ಜೀರ್ಣೋದ್ಧಾರಗೈಯಲು ಹಣ । ತೊಡಗಿಸಿಹರು ಜನರು ॥
ನಡೆಯಲಿಲ್ಲೀವರೆಗದು ನೀವಾದರು ಮಾಡಿ । ಪಡೆಯಿರಿ ಪುಣ್ಯವನ್ನು ॥ ೩॥

೧೮೨. ಊರಿನ ಜನರೆಲ್ಲ ಒಟ್ಟಾಗಿ ಹೇಳುವ ॥ ಹಾರಿಕೆ ಮಾತಕೇಳಿ ॥
ಬೇರೇನೊ ತಿಳಿದಿಹೆ ಸಾಕಷ್ಟು ಕೈಯಿಂದ । ಸೋರಿ ಹೋಗಿದೆ ದಿಟವು ॥೪॥

೧೮೩. ಶಿವನು ಸ್ವಪ್ನದಿ ಬಂದು ನನ್ನಿಂದ ಮಾಡಿಸೆ । ಹವಣಿಸಿರ್ಪನು ಅದಕೆ ।
ತವರವರಿತ್ತಿಹ ಆಭರಣವ ಮಾರಿ । ಶಿವನರ್ತಿಪೂರ್ಯೆಸುವೆ ॥ ೫ ॥

೧೮೪. ದೇಗುಲ ಬಳಿಇಹ ಭೂಮಿಯ ನಿನಗೀವೆ । ಸಾಗಿಸೆ ಶಿವನರ್ತಿಯ ॥
ಬೇಗತಾನಗವೆಂದು ಕೈಗೊಳುತದನಂದು । ಸಾಗಿದ ಮಾರಲೆಂದು ॥ ೬ ॥

॥ **ಭಾಮಿನಿ ಅರ್ಧ** ॥

೧೮೫. ಮನೆಯು ಕುಸಿದುದು ಸಿಡಿಲ ಹೊಡೆತಕೆ । ಧನಿಕಮತ್ತವನರಸಿಯಲ್ಲದೆ ।
ಮನೆಯ ಪಕ್ಕದಲಿರುವ ಕುಬಕಿಯು ಸಹಿತಮೃತಿಗೊಂಡು ॥

೧೮೬. ಮರುಜನುಮವೆತ್ತಿದರು ಧನಿಕನು । ತರುಣವಯಸಿನ ವೀರಭದ್ರನು ।
ತರುಣಿ ಅರ್ಚಕನಿಂಗೆ ಸುತೆಯಾಗಿರಲು ಬಳಿಕಿತ್ತ ॥

॥ **ಫ್ಲ್ಯಾಶ್ ಬ್ಯಾಕ್** ॥

೧೮೭. ನವಯೌವ್ವನಾಂಗಿ ನಾರಿ । ನಡೆತಂದಳು । ಶಿವಭಕ್ತೆಯಾದ ಗೌರಿ ॥
ಸಾಯಿಯಕಾಂಬ । ತವಕದಿಂದಲಿ ಸಿಂಗಾರಿ ॥ ವಿವರಿಸುವೆಮಮ
ಬಯಕೆ । ಜನಕನ । ಬವಣೆಯಾಕನವರಿಕೆ । ಮಾರಿದ । ಭುವಿಯ
ಪ್ರಸ್ತಾವನೆಯ ತಿಳಿಸುವ । ಹವಣಿಕೆಯ ಕೈಗೊಂಡು ವಹಿಲದಿ ॥ ೧ ॥

॥ ಸಾಂಗತ್ಯ ರೂಪಕ ॥

೧೮೮. ಪದಕೆರಗಿದ ಬಾಲಿಕೆಯ ಪಿಡಿದೆತ್ತುತ ।
ಪದುಳದಿ ಸಾಯಿತಾ ನುಡಿದಾ ॥
ಪದುಮಾಕ್ಷಿನೀ ಬಂದ ಹದನವೇನೆನಲಾಗಿ ।
ಸದಮಲಗಿಂತೆಂದಳವಳು ॥ ೧ ॥

೧೮೯. ಅನುರೂಪವರನನ್ನ ಹುಡುಕಲಾಗದೆ ಎನ್ನ ।
ಜನಕನು ಚಿಂತೆಯೊಳಿಹನು ॥
ಎನಗೆ ಮದುವೆ ಬೇಡ ಶಿವಪೂಜೆ ಮಾಡುತ್ತ ।
ಜನುಮ ಸಾರ್ಥಕಗೊಳಿಸುವೆನು ॥ ೨ ॥

೧೯೦. ಸರಿಯಲ್ಲವದು ಏಕಮಾತ್ರ ಕುಮಾರಿಯು ।
ಪರಿಣಯವನು ತಾನು ಮಾಡಿ ।
ಪರಿತೋಷ ಪಡೆಯಬೇಕೆಂಬಾತನ ಆಶೆಗೆ ।
ಎರಚಲಾಗದು ನೀರನೆಂದಾ ॥ ೩ ॥

೧೯೧. ಮಥುರೆಯ ವೀರಭದ್ರನು ಖುಣರೂಪದಿ ।
ಪತಿಯಾಗಲಿರುವ ಕೇಳ್ ಮಗಳೆ ॥
ಸತಿಪತಿಯರ ಚಂದನೋಡಿ ಧನ್ಯತೆ ಹೊಂದಿ ।
ಪಿತಹರ್ಷಗೊಳಲು ಬೇಕಮ್ಮ ॥ ೪ ॥

೧೯೨. ಗುರುವಾಜ್ಞೆ ಎನಗೆ ಶಿರೋಧಾರ್ಯ ನೀವಿದ ।
ಅರುಹಿ ಮಜ್ಜನಕನಿಗಿಂದೇ ॥
ಪರಿಣಯವನು ನೀವೇ ಮುಂದಾಗಿ ಜರಗಿಸೆ ।
ಹರುಷಗೊಂಬುವುದೆನ್ನ ಮನವು ॥ ೫ ॥

॥ ಭಾಮಿನಿ ಅರ್ಧ ॥

೧೯೩. ವರುಷ ಕಳೆಯಲು ಕೆಲವು ಅರ್ಚಕ । ಮರಣಿಸಿರೆದೇಗುಲದ ಹೊಣೆ
ಯನು । ಅರಿತು ಬಂದ ಬಸಪ್ಪಗೌರಿಯಳೆಂದ ಇಂತೆನುತ ॥

॥ ಶಂಕರಾಭರಣ ಮಟ್ಟ ॥

೧೯೪. ನೆಲನಮಾರಿ ಬಂದ ಹಣದಿ । ಸಲಲುಬೇಕು ಅರ್ಧ ಕೊಟ್ಟು ।
ಕೆಲಸಮಾಡಲನುವು ಮಾಡು । ಸಲಿಲಜಾಂಬಕಿ ॥ ೧ ॥

೧೯೫. ಕೇಳಿ ಸಲಹೆ ಗುರುವಿನೊಡನೆ । ಹೇಳಲಿಹೆನುಎನಲು ಕೋಪ ।
ತಾಳಿ ವೀರಭದ್ರನುಡಿದ । ವ್ಯಾಳನಂದದಿ ॥ ೨ ॥

೧೯೬. ಸತಿಯ ಸಂಪತ್ತೇನೆ ಇರಲಿ । ಪತಿಯೆ ಅದಕೆ ಒಡೆಯ ಕೊಡೆನು ।
ಜತನದಿಂದ ಪೊರಡು ಎನಲು । ಖತಿಯ ತಾಳುತಾ ॥ ೩ ॥

೧೯೭. ಬಾಯತುರುಕಬೇಡ ಬರಿದೆ। ಸಾಯಿ ಹೇಳಿದಂತೆ ಕೇಳು ।
ನಾಯಿಯಂತೆ ಒದರಿ ಬರಿದೆ । ಸಾಯಬೇಡವೊ ॥ ೪ ॥

೧೯೮. ಹೊಡೆದು ಕೊಳ್ಳಲಿರುವರನ್ನ । ತಡೆದು ಸಾಯಿ ಪೇಳ್ದದೇವ ।
ರೊಡವೆ ಕೊಡುವುದೊಳಿತು ಎನಲು । ಕಿಡಿಯಕಾರುತ ॥ ೫ ॥

॥ ನಾದನಾಮಕಿಯೆ ಅಪ್ಪ ॥

೧೯೯. ನಾನೊಪ್ಪಲಾರೆ ಈ ನ್ಯಾಯ । ಮತ್ತೆ । ನೀನೊಯ್ದರಿನ್ನು ಅನ್ಯಾಯ ॥
ಗೋಣರಿಯುವೆನೆಂದು ತೆರಳೆ । ದಾರಿ । ಗಾಣದೆ ಎರಗಿದ ಮಗುಳೆ ॥೧॥

॥ ಸಾವೇರಿ ಆದಿ ॥

೨೦೦. ದುಷ್ಟನು ವೀರಭದ್ರ । ಕೊಲ್ಲದೆ ಎನ್ನ । ಎಷ್ಟಕ್ಕೂ ಬಿಡನು ಬದ್ಧ ॥
ದೃಷ್ಟಿಸಿಕಾಯದಿರೇ । ನಿರ್ದಯದಿಕೈ । ಬಿಟ್ಟರೆ ಸಾವೇ ಖರೆ ॥ ೧ ॥

೨೦೧. ಮರೆಹೊಕ್ಕ ಶರಣರನು । ಯಾವತ್ತಿಗೂ । ಮರೆಯೆನು ನಂಬಿದನು ।
ಪೊರೆವೆ ಕಷ್ಟದಿ ನಿನ್ನನು । ಎನ್ನಲು ಸಾಯಿ । ಸರಿದ ಬಸಪ್ಪ ತಾನು ॥೨॥

॥ ಫ್ಲ್ಯಾಶ್ ಬ್ಯಾಕ್ ॥
॥ ಭಾಮಿನಿ ಅರ್ಧ ॥

೨೦೨. ಹಿಂದೆನಡೆದುದನೆಲ್ಲ ಸಾಯಿಯು । ಒಂದುಳಿಯದಂತರುಹಿ ಆತನ
ಸಂದೇಹವ ಪರಿಹರಿಸಿ ಶಾಂತತೆಯಿಂದ ಕಳುಹಿದನು ॥

# ಸಾಯಿಬಾಬರ ಮಹಾಪ್ರಸ್ಥಾನ

॥ ಸಾಂಗತ್ಯ ರೂಪಕ ॥

೨೧೩. ವ್ಯಾಧಿಪೀಡಿತನಾದ ರಾಮಚಂದ್ರನು ಗುಣದಾ ।
ಹಾದಿ ಕಾಣದೆ ತಪಿಸುತಿಹನು ।
ಪಾದಕ್ಕೆ ಪೊಡಮಟ್ಟು ಸಾಯಿಯ ಬೆಸಗೊಂಡ ।
ಹೇ ದಯಾನಿಧಿಯೇ ದಯೆದೋರು ॥ ೧ ॥

೨೧೪. ಸರ್ವಜ್ಞ ನೀನೆನ್ನ ಮರಣ ಯಾವಾಗೆಂದು ।
ಅರಿತಿರ್ಪೆದಯದಿ ತಿಳಿಸುವುದು ॥
ಸರ್ವಲೌಕಿಕ ಮೋಹ ತೊರೆದುದೇವರ ಧ್ಯಾನ ।
ನಿರತನಾಗಿದ್ದು ಪಯಣಿಸುವೆ ॥ ೨ ॥

೨೧೫. ಮರಣಿಸಲಾರೆ ನಿಶ್ಚಯ ಗುಣಹೊಂದುವೆ ।
ಬರುವ ವಿಜಯದಶಮಿಯಂದು ॥
ಗುರುಭಾವದಿಂದ ಸೇವಿಪ ತಾತ್ಯಪಾಟೀಲ ।
ಮರಣಹೊಂದುವ ಪೇಳಲೇನು । ೩ ॥

೨೧೬. ಇದು ಮಾತ್ರ ಸತ್ಯ ತಾತ್ಯನು ತಾನು ಅರಿತರೆ ।
ಹೆದರುವ ಕಾರಣಕಾಗಿ ॥
ಮೊದಲಾಗಿ ತಿಳಿಸಲಾಗದು ಎಂದು ಹೇಳುತ್ತ ।
ಹೃದಯ ಭಾರದಿ ಕಳುಹಿಸಿದನು ॥ ೪ ॥

೨೧೭. ದಿನ ದಿನ ಕೊರಗುವುದಾಯಿತೆ ಸಾವನ್ನು ।
ನೆನೆದರೆ ಭಯವಾಗುತಿಹುದು ॥
ಮನಗೆದ್ದ ಮಿತ್ರನ ಅಗಲುವ ಕಾಲವ ।
ನೆನೆದರೆ ಕರುಳು ಹಿಂಡುವುದು ॥ ೫ ॥

॥ ಭಾಮಿನಿ ಅರ್ಧ ॥

೨೦೮. ಮರುದಿವಸ ಪಾಟೀಲನಲ್ಲಿಗೆ । ಬರುತ ತಾತ್ಯನು ಸಂತವಿಸುತಲಿ ।
ಒರೆದನಾತನ ಬಗೆಗೆ ವಾತ್ಸಲ್ಯವನು ಹರಿಸುತಲಿ ॥

॥ ಮಧುಮಾಧವಿ ಏಕ ॥

೨೦೯. ಹಲವಾರು ದಿನದಿಂದ ರುಜಿನದಲ್ಲಿದ್ದು ।
ಬಳಲಿದೆ ಇದಕ್ಕಿಲ್ಲವಾಯಿತೇ ಮದ್ದು ॥
ತಿಳಿದೆ ಬಾಬರ ಬಳಿ ಹೋಗಿರ್ಪೆ ಎಂದು ।
ತಿಳುಹು ಏನೆಂದರು ಆ ದಯಾಸಿಂಧು ॥ ೧ ॥

೨೧೦. ಎನಗಾಗಿ ಎಷ್ಟೊಂದು ಕೊರಗುವೆ ಮಿತ್ರ ।
ದಿನನಿತ್ಯ ನಿನ್ನದೆ ನೆನಪು ಸರ್ವತ್ರ ॥
ಗುಣವಾಗಲಿಹೆ ಎಂದು ಬಾಬ ಹೇಳಿದರೂ ।
ಅನುಮಾನ ಉಳಿದಿದೆ ಏನೇ ಹೇಳಿದರು ॥ ೨ ॥

೨೧೧. ಗುರುವಿನ ನುಡಿ ಸಟೆಯಾಗದು ಮಿತ್ರ ।
ಹರಮುನಿದರು ಗುರುಕಾವನು ಸತ್ಯ ॥
ಮರೆತು ಸಂಶಯವನ್ನು ನೆಮ್ಮದಿ ತಾಳು ।
ಸ್ಮರಿಸುತ್ತ ಗುರುಪಾದ ಸುಖವಾಗಿ ಬಾಳು ॥ ೩ ॥

॥ ಸೌರಾಷ್ಟ್ರ ತ್ರಿವುಡೆ ॥

೨೧೨. ರಾಮಚಂದ್ರನು ಭಯದ ಭಾರದಿ । ಆಮಹಿಮನೆಡೆ ಬಂದು ವಿನಯದಿ ।
ನಾಮಸ್ತೋತ್ರವ ಗೈದು ಪೇಳಿದಾ । ಕೈಮುಗಿಯುತಾ ॥ ೧ ॥

೨೧೩. ನಾಳೆ ವಿದ್ಯಾದಶಮಿ ತಾವೇ । ಹೇಳಿದಾ ತೆರನಂತೆ ತಾತ್ಯನ ।
ಬಾಳಿನಾ ಕೊನೆ ಕಾಯಬೇಕು ದ । ಯಾಳು ಗುರುವೇ ॥ ೨ ॥

೨೧೪. ಕಾಯಬೇಕಿದೆ ಸತ್ಯ ಆತನ । ತಾಯಿಯಲಿ ನಾನೆಂದಮಾತಿದೆ ।
ಆಯವರಿಯದೆ ತೊಳಲುತಿಹೆನು ಅ । ಪಾಯ ಕಳೆಯೆ ॥ ೩ ॥

೨೧೫. ಹಿಂದೆ ಬಾಬರ ತನ್ನ ಪ್ರೀತಿಯ । ಕಂದನನು ಉಳಿಸಲ್ಕೆ ಗೈದಿಹ ।
ನೊಂದು ಕಾರ್ಯವ ನಾಳೆ ನೋಡುವ । ಎಂದು ಕಳುಹೆ ॥ ೪ ॥

॥ ಕಾಂಭೋದಿ ಝಂಪೆ ॥

೨೧೬. ಮರುದಿವಸ ತಾತ್ಯ ಚೇತರಿಸಿಕೊಳಲಿತ್ತಗುರು ।
ವರ ಸಾಯಿನಾಥ ವ್ಯಾಧಿಯಲಿ ॥
ತರಹರಿಸಿ ಹಾಸಿಗೆಯ ಹಿಡಿದು ಬೆಂಡಾದುದನು ।
ಅರಿತ ಕಿಂಕರರು ನಡೆತಂದು ॥ ೧ ॥

೨೧೭. ಏತಕೀಪರಿ ಮೌನ ಮುದ್ರೆಯಲಿ ಮಲಗಿಹಿರಿ ।
ಭೀತಿಗೊಳುತಿಹರು ಜನರೆಲ್ಲ ॥
ಮಾತಾಡಿ ಕಣ್ತೆರೆದು ಎನುತ ಗೋಗರೆಯುತಿರೆ ।
ಆತ ತಡವರಿಸಿ ಮಗುಳೆಂದಾ ॥ ೨ ॥

೨೧೮. ಬರಿದೇಕೆ ಹೆದರುವಿರಿ ಕಿರುಸಮಾಧಿಯಲಿದ್ದೆ ।
ತೆರಳಿ ಭೋಜನಕೆಂದು ಕಳುಹಿ ॥
ಮರುಗುತಿಹ ಲಕ್ಷ್ಮಿ ಕರಕಿತ್ತು ಹಣವನು ಬಳಿಕ।
ಕರೆಯುತ್ತ ಬಾಯಾಜಿಗೆಂದಾ ॥ ೩ ॥

೨೧೯. ಈ ಮಸೀದಿಯಲೆನಗೆ ಎನಿತು ನೆಮ್ಮದಿಯಿಲ್ಲ ।
ಆ ಮಹಾ ಬೂಟಿಮಂದಿರಕೆ ।
ಪ್ರೇಮದಲಿ ಕೊಂಡೊಯ್ಯು ಎನುತುಸುರಿ ಬಳಿಕಲ್ಲಾ ।
ನಾಮಸ್ಮರಣೆಯಲಿ ಪರಕೈದಾ ॥ ೪ ॥

॥ ಕೇದಾರಗೌಳ ಅಷ್ಟ ॥

೨೨೦. ಮರುದಿನ ದಾಸಗಣವು ಎಂಬ ಭಕ್ತನು । ಒರಗಿರೆ ಸ್ವಪ್ನದಲಿ ॥
ಹರಿತಂದು ಬಾಬನು ಕರವೆತ್ತಿ ಹರಸುತ್ತ । ಒರೆದನು ಮಾತೊಂದನು ॥೧॥

೨೨೧. ಶಿರಿಡಿಯ ಜನ ಕಾಡಲಾಗಿ ಮಸೀದಿಯು । ಮುರಿದುಬಿದ್ದುದರಿಂದಲಿ ॥
ಹೊರಟು ಬಂದಿಹನಿಲ್ಲಿ ಬಕುಲ ಹಾರವ ತಂದು । ಇರಿಸಿ ನೀ ಮುಚ್ಚುವುದು
॥ ೨ ॥

೨೨೨. ಯಾವಾಗ ನೆನೆದರು ಧಾವಿಸಿ ಬಳಿ ಬಂದು । ನೋವನ್ನು ಪರಿಹರಿಸಿ ॥
ಕಾವೆ ನಿಶ್ಚಯಮನದಿಷ್ಟಾರ್ಥವನ್ನೆಲ್ಲ । ಈವೆನೆನ್ನುತ ನುಡಿದಾ ॥ ೩ ॥

೨೨೩. ನಡುನಡುಗುತ ಹಾರವಿಟ್ಟು ಸಮಾಧಿಗೆ । ಪೊಡಮಟ್ಟು ಭಕ್ತಿಯಲಿ ॥
ಹಿಡಿದು ಚಿಟಿಕೆ ತಾಳ ಸ್ಮರಿಸುತ್ತ ಬಾಬನ । ನುಡಿಸಿದ ಕೀರ್ತನೆಯ ॥ ೪ ॥

॥ **ಸುರಟಿ ಏಕ** ॥

೨೨೪. ಜಯ ಜಯ ಸಾಯಿವರ । ಶುಭಕರ । ಜಯ ಜಯ ಪಾಪಹರ ॥
ಜಯವಾಣೀವರ । ಜಯಶ್ರೀ ಮುರಹರ । ಜಯಗಂಗಾಧರ ।
ಜಯತು ಕೃಪಾಕರ ॥ ೧ ॥

॥ **ಸಾಯಿ ಕೀರ್ತನೆ** ॥

೨೨೫. ನಮೊ ಸಾಯಿ ಶಿವನಂದನಾ । ನಮೊ ಸಾಯಿ ಕಮಲಾಸನಾ ।
ನಮೊ ಸಾಯಿ ಮಧುಸೂದನಾ । ಪಂಚವದನಾ ಸಾಯಿನಮೊ ॥ ೧ ॥
ನಮೊ ಸಾಯಿ ಅತ್ರಿನಂದನಾ । ನಮೊ ಸಾಯಿ ಪಾಕಶಾಸನಾ ।
ನಮೊ ಸಾಯಿ ನಿಶಾರಮಣಾ । ವಹ್ನಿನಾರಾಯಣಸಾಯಿ ನಮೋ ॥ ೨ ॥



ಪ್ರಸಂಗ ಪಂಚಮಿ ಎಂಬ ಈ ಹೊತ್ತಿಗೆಯು ಹೆಸರೇ ಸೂಚಿಸುವಂತೆ ಐದು ಪ್ರಸಂಗಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮೂರು ನಮ್ಮ ದೇಶದ ಪ್ರಸಿದ್ಧ ಕ್ಷೇತ್ರಗಳ ಮಹಾತ್ಮೆಯನ್ನು ಸಾರುವಂತಿವೆ. ಉಳಿದಂತೆ ನಳಚರಿತ್ರೆಯನ್ನು ವ್ಯಾಸ ಭಾರತವನ್ನು, ಗಂಗಾಶಾಪವು ಜೈಮಿನಿ ಭಾರತವನ್ನು ಆಧರಿಸಿ ಬರೆಯಲಾಗಿದೆ. ಚಾಲ್ತಿಯಲ್ಲಿರುವ ನಳಚರಿತ್ರೆಗೂ ಈ ನಳಚರಿತ್ರೆಗೂ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತವೆ. ಮುಖ್ಯವಾಗಿ ಚಾಲ್ತಿಯ ಪ್ರಸಂಗದಲ್ಲಿ ನಳನಿಗೆ ಶನಿಯ ಕಾಟವಾದರೆ ಇದರಲ್ಲಿ ಆತನಿಗೆ ಕಲಿ, ದ್ವಾಪರರು ಕಷ್ಟ ನೀಡುತ್ತಾರೆ. ಈ ಐದು ಪ್ರಸಂಗಗಳು ಬೇರೆ ಬೇರೆ ಸಂದರ್ಭದಲ್ಲಿ ಬೇಡಿಕೆಗನುಸರಿಸಿ ಬರದುದಾಗಿದೆ. ವಿವಿಧ ಮೇಳಗಳು ಇವುಗಳನ್ನು ಪ್ರದರ್ಶಿಸಿ ಯಶಸ್ವಿಗೊಳಿಸಿದೆ. ಯಶಸ್ವಿಗೊಳಿಸಿದ ಸರ್ವ ಕಲಾವಿದರನ್ನು ಈ ಸಂದರ್ಭದಲ್ಲಿ ಹಾರ್ದಿಕವಾಗಿ ಅಭಿನಂದಿಸುತ್ತೇವೆ. ಈ ಪ್ರಸಂಗವನ್ನು ಪ್ರಕಟಿಸುತ್ತಿರುವ ಕರ್ನಾಟಕ ಯಕ್ಷಗಾನ ಅಕಾಡೆಮಿಗೆ ಅಭಿನಂದಿಸುತ್ತೇನೆ.

ಕಂದಾವರ ರಘುರಾಮ ಶೆಟ್ಟಿ
ಪ್ರಸಂಗಕರ್ತೃ



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗ ಕೃತಿಗಳು. ಕನ್ನಡ ಸಾಹಿತ್ಯನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋಕುಸುಮಗಳ ಗ್ರಥನದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಳ ಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ. ಅಂತೆಯೇ ಉತ್ತಮವಾದ ಪ್ರಸಂಗವು ಸಾವಿರಾರು ವರ್ಷಗಳುರುಳಿದರೂ ನಿತ್ಯನೂತನವೆನಿಸುತ್ತದೆ. ಅಂಥ ಕೃತಿಗಳ ಶೋಧನೆ, ಪ್ರಕಟಣೆಗಳು ಯಕ್ಷಗಾನ ಅಕಾಡೆಮಿಯ ಆದ್ಯ ಕರ್ತವ್ಯವೆಂದು ಭಾವಿಸಲಾಗಿದೆ.

ಪ್ರೊ. ಎಂ.ಎ.ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ
ಬೆಂಗಳೂರು

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು